
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)



ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕ್

ಕೋರ್ಸ್ – 4

ಬ್ಲಾಕ್ – 6

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
**ಕೋರ್ಸ್ - 4**

ಬ್ಲಾಕ್
**6**

# ಎರಡು ಮಹಾಯುದ್ಧಗಳ ನಡುವಿನ ಯುರೋಪ್

ಘಟಕ - 115
ಲೆನಿನ್ ಮತ್ತು ಸ್ಟ್ಯಾಲಿನ್

ಘಟಕ - 116
ಮುಸ್ಸೋಲಿನಿ ಮತ್ತು ಇಟಲಿಯ ಫ್ಯಾಸಿಸಂ

ಘಟಕ - 117
ಹಿಟ್ಲರ್ ಮತ್ತು ನಾಝಿಸಂನ ಏಳಿಗೆ

ಘಟಕ - 118
ಮಹಾಯುದ್ಧಗಳ ನಡುವಣ ಕಾಲದ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್

ಘಟಕ - 119
ಎರಡು ಮಹಾಯುದ್ಧಗಳ ನಡುವಣ ಅವಧಿಯ ಸ್ಪೈನ್

ಘಟಕ - 120
ಎರಡು ಮಹಾಯುದ್ಧ ನಡುವಣ ಅವಧಿಯ ಪುಟ್ಟ ರಾಜ್ಯಗಳು

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*

**ಡಾ. ಮಾದೇಗೌಡ**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

*ಸಂಪಾದಕರು*

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು* — ಘಟಕಗಳು **115** ರಿಂದ **120**

ಮೂಲ : **ಡಾ. ಆರ್. ಸುಂದರರಾಜನ್**
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯ
ಮಧುರೈ (ತಮಿಳುನಾಡು).

ಅನುವಾದ : **ಪ್ರೊ. ಸಿ.ಬಿ. ರಾಮಚಂದ್ರ** — ಘಟಕಗಳು **115** ರಿಂದ **120**
ಇತಿಹಾಸ ವಿಭಾಗ
ಮಹಾರಾಜ ಕಾಲೇಜು,
ಮೈಸೂರು.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಎಂ. ಎಂ. ಪ್ರಥಮ

# ಇತಿಹಾಸ

# ಬ್ಲಾಕ್ -6

**ಪೀಠಿಕೆ**

ಬ್ಲಾಕ್ 6 ಒಟ್ಟು ಆರು ಘಟಕಗಳನ್ನು ಒಳಗೊಂಡಿದೆ. ಈ ಆರು ಘಟಕಗಳು ಪ್ರಥಮ ಮಹಾಯುದ್ಧ ಮತ್ತು ಎರಡನೇ ಮಹಾಯುದ್ಧದ ನಡುವಣ ಅವಧಿಯಲ್ಲಿ ಯುರೋಪಿನಲ್ಲಾದ ರಾಜಕೀಯ ಬದಲಾವಣೆ ಮತ್ತು ವಿವಿಧ ರಾಜ್ಯಗಳ ವಿದೇಶಾಂಗ ನೀತಿಯನ್ನು ವಿವರವಾಗಿ ನಿಮಗೆ ತಿಳಿಸಿಕೊಡುತ್ತದೆ. ಘಟಕ - 115 ರಷ್ಯಾದ 1917 ರ ಕ್ರಾಂತಿಯ ನಂತರ ಅಧಿಕಾರ ಗ್ರಹಣ ಮಾಡಿದ ಲೆನಿನ್ ಹಾಗೂ ಆತನ ಉತ್ತರಾಧಿಕಾರಿ ಸ್ಟ್ಯಾಲಿನ್ ಬಗೆಗಿನ ವಿವರಗಳನ್ನು ನೀಡುತ್ತದೆ. ಘಟಕ - 116 ಇಟಲಿಯಲ್ಲಿ 1918 ರಲ್ಲಿದ್ದ ಪರಿಸ್ಥಿತಿಯನ್ನು ವಿಶ್ಲೇಷಿಸಿ ಅದು ಅಂತಿಮವಾಗಿ ಫ್ಯಾಸಿಸ್ಟರು ಮುಸ್ಸೋಲಿನಿ ನಾಯಕತ್ವದಲ್ಲಿ ಅಧಿಕಾರಕ್ಕೇರಲು ಸಾಧ್ಯವಾದುದನ್ನು ಹಾಗೂ ಫ್ಯಾಸಿಸ್ಟರ ಚಿಂತನೆ ಮತ್ತು ಕಾರ್ಯಕ್ರಮಗಳನ್ನು ತಿಳಿಸಿಕೊಡುತ್ತದೆ. ಘಟಕ - 117 ವೀಮರ್ ಗಣರಾಜ್ಯದ ಪತನ ಹಾಗೂ ಅಡಾಲ್ಫ್ ಹಿಟ್ಲರ್‌ನ ಏಳಿಗೆ ಹಾಗೂ ಆತನ ನಾಝಿ ಸಿದ್ಧಾಂತದ ಪರಿಚಯವನ್ನು ನಿಮಗೆ ನೀಡುತ್ತದೆ. ಘಟಕ - 118 ಎರಡು ಯುದ್ಧಗಳ ನಡುವಣ ಕಾಲದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ಎದುರಿಸಿದ ಸಮಸ್ಯೆಗಳು ಹಾಗೂ ಅಳವಡಿಸಿಕೊಂಡ ವಿದೇಶಾಂಗ ನೀತಿ ಹಾಗೂ ಆ ನೀತಿಯ ಪರಿಣಾಮಗಳನ್ನು ಕುರಿತು ಚರ್ಚಿಸುತ್ತದೆ. ಘಟಕ - 119 ಸ್ಪೈನಿನಲ್ಲಾದ ಅಂತರ್ಯುದ್ಧ ಹಾಗೂ ಜನರಲ್ ಫ್ರಾಂಕೊ ಸರ್ವಾಧಿಕಾರಿಯಾದ ಬಗೆಗೆ ವಿವರಗಳನ್ನು ನೀಡುತ್ತದೆ. ಈ ಬ್ಲಾಕ್ಕಿನ ಅಂತಿಮ ಘಟಕ - 120 ಯುರೋಪಿನ ಸಣ್ಣ ರಾಷ್ಟ್ರಗಳಾದ ಬೆಲ್ಜಿಯಂ, ಹಾಲೆಂಡ್, ಸ್ವಿಟ್ಜರ್‌ಲ್ಯಾಂಡ್, ಫಿನ್‌ಲ್ಯಾಂಡ್, ಡೆನ್ಮಾರ್ಕ್, ಸ್ವೀಡನ್, ನಾರ್ವೆ, ಪೋರ್ಚುಗಲ್‌ಗಳು ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಆಂತರಿಕವಾಗಿ ಎದುರಿಸಿದ ಸಮಸ್ಯೆಗಳು ಹಾಗೂ ವಿದೇಶಾಂಗ ನೀತಿಯಲ್ಲಿ ತಳೆದ ನಿಲುವನ್ನು ಕುರಿತಾದ ವಿಷಯಗಳನ್ನು ನಿಮಗೆ ಕೊಡುತ್ತದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಪ್ರಥಮ ಎಂ.ಎ.

## ಕೋರ್ಸ್ - 4

## ಬ್ಲಾಕ್ - 6

## ಘಟಕ - 115

# ಲೆನಿನ್ ಮತ್ತು ಸ್ಟಾಲಿನ್

*ರಚನಾಕ್ರಮ*


**115.0** ಉದ್ದೇಶಗಳು

**115.1** ಪೀಠಿಕೆ

**115.2** ಫೆಬ್ರುವರಿ ಕ್ರಾಂತಿ

**115.3** ತಾತ್ಕಾಲಿಕ ಸರಕಾರ

**115.4** ತೀವ್ರವಾದದತ್ತ ಒಲವು

**115.5** ಕಮ್ಯೂನಿಸ್ಟ್ ಪಕ್ಷ

**115.6** ರಾಜ್ಯಾಂಗ

**115.7** ಸಮಾಜವಾದೀ ನೀತಿಗಳು

**115.8** ಬೋಲ್ಶೆವಿಕ್ ಕ್ರಾಂತಿಯ ಪರಿಣಾಮಗಳು

**115.9** ನವ ಆರ್ಥಿಕ ನೀತಿ

**115.9.1** ನವ ಆರ್ಥಿಕ ನೀತಿಯ ಮುಖ್ಯಾಂಶಗಳು

**115.9.2** ನವ ಆರ್ಥಿಕ ನೀತಿಯ ಮೌಲ್ಯೀಕರಣ

**115.10** ಸ್ಟ್ಯಾಲಿನ್ನನ ಪ್ರಾರಂಭಿಕ ಜೀವನ

**115.11** ಸ್ಟ್ಯಾಲಿನ್ನನ ರಾಜಕೀಯ ಜೀವನ

**115.12** ಸ್ಟ್ಯಾಲಿನ್ ಮತ್ತು 1917 ರ ಕ್ರಾಂತಿ

**115.13** ನಾಯಕತ್ವಕ್ಕಾಗಿ ಹೋರಾಟ

**115.14** ಸ್ಟ್ಯಾಲಿನ್‌ನಿಂದ ಪಕ್ಷದ ನಿಯಂತ್ರಣ

**115.15** ಸಮಾಜವಾದದ ಪ್ರಚಾರಕ್ಕಾಗಿ ಕ್ರಮ

**115.16** ಪ್ರಥಮ ಪಂಚವಾರ್ಷಿಕ ಯೋಜನೆ (1928-32)

**115.16.1** ದ್ವಿತೀಯ ಪಂಚವಾರ್ಷಿಕ ಯೋಜನೆ (1933-37)

**115.16.2** ತೃತೀಯ ಪಂಚವಾರ್ಷಿಕ ಯೋಜನೆ (1938-42)

**115.17** ಪಕ್ಷದ ಶುದ್ಧೀಕರಣ

**115.17.1** ಪಕ್ಷದ ಶುದ್ಧೀಕರಣಗೊಳಿಸಲು ಕೈಗೊಂಡ ಕ್ರಮಗಳು

**115.18** 1936ರ ರಾಜ್ಯಾಂಗ

**115.18.1** ರಾಜ್ಯಾಂಗದ ಮುಖ್ಯಾಂಶಗಳು

**115.19** ಸ್ಟ್ಯಾಲಿನ್ನನ ಕಾಲದಲ್ಲಿ ಶಿಕ್ಷಣ

**115.19.1** ಸ್ಟ್ಯಾಲಿನ್ನನ ಕಾಲದಲ್ಲಿ ಧರ್ಮ

**115.19.2** ಸಮಾಜ ಕಲ್ಯಾಣ

**115.19.3** ಬೌದ್ಧಿಕ ಜೀವನದ ಮೇಲಿನ ನಿಯಂತ್ರಣ

**115.20** ಮಾದರಿ ಪ್ರಶ್ನೆಗಳು

**115.21** ಅಧ್ಯಯನ ಗ್ರಂಥಗಳು

## 115.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ವಿದ್ಯಾರ್ಥಿಗಳಿಗೆ ಈ ಕೆಳಗಿನ ವಿಷಯಗಳ ಬಗ್ಗೆ ಸಾಕಷ್ಟು ಪರಿಜ್ಞಾನ ಲಭಿಸುತ್ತದೆ.

1) ಲೆನಿನ್ನನ ಏಳಿಗೆ

2) ಲೆನಿನ್ ಅನುಸರಿಸಿದ ನೀತಿಗಳು

3) ಲೆನಿನ್ ನವ ಆರ್ಥಿಕ ನೀತಿಯನ್ನು ಜಾರಿಗೊಳಿಸಿದುದು

4) ಸ್ಟ್ಯಾಲಿನ್ನನ ಪ್ರಾರಂಭಿಕ ಜೀವನ ಮತ್ತು ರಾಜಕೀಯ ಪ್ರವೇಶ

5) ಕಮ್ಯೂನಿಸ್ಟ್ ಪಕ್ಷದ ಮೇಲೆ ಸ್ಟ್ಯಾಲಿನ್ನನ ನಿಯಂತ್ರಣ ಮತ್ತು ಅವನ ನೀತಿಗಳು

6) ರಷ್ಯನ್ನರ ಜೀವನದ ವಿವಿಧ ಕ್ಷೇತ್ರಗಳಲ್ಲಿ ಸ್ಟ್ಯಾಲಿನ್ನನ ಪಾತ್ರ.

## 115.1 ಪೀಠಿಕೆ

1917 ರ ರಷ್ಯಾದ ಕ್ರಾಂತಿ ಹಲವು ಅಂಶಗಳ ಸಮ್ಮಿಳಿತದ ಫಲವಾಗಿ ಸಂಭವಿಸುತ್ತದೆ. ಮಹಾಯುದ್ಧವನ್ನು ನಿಭಾಯಿಸುವಲ್ಲಿ ತೋರಿದ ಅಚಾತುರ್ಯತೆ ಸರಕಾರದ ಕಾರ್ಯನಿರ್ವಹಣೆಯಲ್ಲಿ ಚಕ್ರವರ್ತಿ ಮತ್ತು ಸುಪ್ರಸಿದ್ಧ ಸಂತ ರಾಸ್ಪುಟಿನ್‌ನ ಮಾರಕ ಮಧ್ಯಪ್ರವೇಶ, ಸ್ವತಂತ್ರವಾದಿಗಳ ಹತಾಶ ಮನೋಭಾವನೆ, ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿನ ಅಸಂತೃಪ್ತಿ ಕ್ರಾಂತಿಕಾರಿ ಗುಂಪುಗಳ ಚಟುವಟಿಕೆಗಳು ಮತ್ತು ಆಹಾರದ ವಸ್ತುಗಳ ಕೊರತೆ ಅಂತಹ ಅಂಶಗಳಲ್ಲಿ ಪ್ರಮುಖವಾದುವುಗಳು. ಆದರೆ ಕ್ರಾಂತಿಯನ್ನು ಪ್ರಚೋದಿಸಿದ ಸಮೀಪದ ಕಾರಣ ಮಾತ್ರ ಯುದ್ಧಾವಧಿಯ ಸೇನಾ ಕಾರ್ಯಾಚರಣೆಯಲ್ಲಿ ಅನುಭವಿಸಿದ ಅತೀವ ಹಿನ್ನಡೆ ಎಂದೇ ಹೇಳಬಹುದು.

## 115.2 ಫೆಬ್ರವರಿ ಕ್ರಾಂತಿ

1917 ರ ಮುಂಬೆಳಗಿನಲ್ಲಿ ರಷ್ಯಾ ದೇಶದಾದ್ಯಂತ ಪ್ರತಿಭಟನಾ ಪ್ರದರ್ಶನಗಳು, ಮುಷ್ಕರಗಳು ಮತ್ತು ಅವ್ಯವಸ್ಥೆಗಳು ಸರ್ವೆಸಾಮಾನ್ಯವಾಗಿದ್ದವು. ಬಹುತೇಕ ಮುಷ್ಕರಗಳು ಜನರ ಆರ್ಥಿಕ ಬೇಡಿಕೆಗಳನ್ನು ಪೂರೈಸುವ ಉದ್ದೇಶದಿಂದ ನಡೆದರೂ, ಅವರಲ್ಲಿ ರಾಜಕೀಯ ಬೇಡಿಕೆಗಳನ್ನು ಪೂರೈಸುವ ಉದ್ದೇಶವೂ ಇತ್ತು. ಪೆಟ್ರೋಗ್ರ್ಯಾಡ್ ಮತ್ತು ಮಾಸ್ಕೋ ಇಂತಹ ಮುಷ್ಕರಗಳ ಬಹುಮುಖ್ಯ ಕೇಂದ್ರಗಳಾಗಿದ್ದವು. ರಷ್ಯಾದ ಆಂತರಿಕ ವ್ಯವಹಾರಗಳ ಸಚಿವ ಪ್ರೋಟೋಪೋಪೋವ್‌ನ ನಿರ್ದೇಶನದಂತೆ ಸರಕಾರವು ಮುಷ್ಕರಗಳನ್ನು ಹತ್ತಿಕ್ಕಲು ಅನೇಕ ಕ್ರಮಗಳನ್ನು ಕೈಗೊಂಡಿತು. ಆದರೆ ಯಾವ ಕ್ರಮವೂ ಅಷ್ಟು ಯಶಸ್ವಿಯಾಗಲಿಲ್ಲ. ಈ ಮಧ್ಯೆ ಇನ್ನೂ ಹೆಚ್ಚಿನ ಅವ್ಯವಸ್ಥೆಯ ವಾತಾವರಣ ಕಂಡು ಬಂದಿತು, ಪೋಲಿಸರೊಂದಿಗೆ ಘರ್ಷಣೆ ಸಂಭವಿಸಿತು. 1917 ರ ಫೆಬ್ರವರಿಯಲ್ಲಿ ರಷ್ಯಾದ ಸಂಸತ್ ಡ್ಯೂಮಾವನ್ನು ವಿಸರ್ಜಿಸಿದ ಸರಕಾರ ರಾಜೀನಾಮೆ ಸಲ್ಲಿಸಿತು. ಆದರೆ ಡ್ಯೂಮಾದ ಸಮಿತಿಯೊಂದು ರಚನೆಯಾಗಿ ಅದೇ ತಾತ್ಕಾಲಿಕ ಸರಕಾರದ ಕಾರ್ಯವನ್ನು ನಿರ್ವಹಿಸಲಾರಂಭಿಸಿತು. 1917 ರ ಮಾರ್ಚ್ 14 ರಂದು ಪೆಟ್ರೋಗ್ರ್ಯಾಡ್‌ನ ಸೈನ್ಯದ ಘಟಕಗಳು ಮತ್ತು ಕಾರ್ಖಾನೆಗಳಿಂದ ಚುನಾಯಿತರಾದ ಸುಮಾರು 250 ಪ್ರತಿನಿಧಿಗಳು, ಕಾರ್ಮಿಕರು ಮತ್ತು ಸೇನಾ ಪ್ರತಿನಿಧಿಗಳ ಒಕ್ಕೂಟವನ್ನು ಸ್ಥಾಪಿಸಿದರು. ಈ ಒಕ್ಕೂಟ (ಸೋವಿಯತ್) ಅಥವಾ ಸಮಿತಿಯೇ ಕಾರ್ಯಾಂಗ ಸಮಿತಿಯಾಗಿ ಕಾರ್ಯನಿರ್ವಹಿಸಲಾರಂಭಿಸಿತು. ಸರಕಾರದ ಎಲ್ಲಾ ಕಾರ್ಯಗಳನ್ನೂ ಈ ಸಮಿತಿಯೇ ನಿರ್ವಹಿಸಿತು.

## 115.3 ತಾತ್ಕಾಲಿಕ ಸರಕಾರ

ಪೆಟ್ರೋಗ್ರ್ಯಾಡ್ ಒಕ್ಕೂಟ ಸರಕಾರದಲ್ಲಿ ಭಾಗಿಯಾಗದಿದ್ದರೂ ತಾತ್ಕಾಲಿಕ ಸರಕಾರದ ರಚನೆಗೆ ಬೆಂಬಲ ನೀಡಿತು. ಈ ತಾತ್ಕಾಲಿಕ ಸರಕಾರದಲ್ಲಿ ಸ್ವತಂತ್ರವಾದಿ ನಾಯಕ ರಾಜಕುಮಾರ ಲೋವ್ ಪ್ರಧಾನ ಮಂತ್ರಿಯಾದನು. ಮಿಲಿನ್ ಕೋವ್ ವಿದೇಶಾಂಗ ವ್ಯವಹಾರಗಳ ಸಚಿವನಾದ. ಸಮಾಜವಾದಿ ಕ್ರಾಂತಿಕಾರಿ ನಾಯಕ ಕೆರೆನ್‌ಸ್ಕಿ ನ್ಯಾಯಾಡಳಿತದ ಸಚಿವನಾದನು. ಪೆಟ್ರೋಗ್ರ್ಯಾಡ್ ಒಕ್ಕೂಟ ತೀವ್ರವಾದಿ ಗುಂಪುಗಳನ್ನು ಪ್ರತಿನಿಧಿಸಿದರೂ ಕೂಡ ತಾತ್ಕಾಲಿಕ ಸರಕಾರದೊಂದಿಗೆ ಸಹಕರಿಸಿತು. ಆಡಳಿತದ ಪೂರ್ಣ ಹೊರೆ ಮತ್ತು ಜವಾಬ್ದಾರಿ ತಾತ್ಕಾಲಿಕ ಸರಕಾರದ ಮೇಲೆ ಬಿದ್ದಿತು. ಒಕ್ಕೂಟದ ಸದಸ್ಯರು ಮಧ್ಯಮ ವರ್ಗದವರ ವಿರುದ್ಧ ತೀವ್ರ ಪ್ರಚಾರದ ಕಾರ್ಯವನ್ನು ಕೈಗೊಂಡರು. ಬಹಳ ದಿನಗಳಿಂದ ಪಡೆಯಲಿಚ್ಛಿಸಿದ್ದ ಭೂಮಿಯನ್ನು ಆಕ್ರಮಿಸಿಕೊಳ್ಳದಂತೆ ಪ್ರಚೋದಿಸಿದರು. ಹಾಗೆಯೇ ಕಾರ್ಖಾನೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವಂತೆ ಕಾರ್ಮಿಕರನ್ನು ಹುರಿದುಂಬಿಸಿದರು. ಆದರೆ ಲೆನಿನ್ ಸ್ವಿಟ್ಜರ್‌ಲ್ಯಾಂಡಿನಿಂದ ಆಗಮಿಸಿದ ಮೇಲೆ ನಿಜವಾದ ಸಂಘರ್ಷ ಆರಂಭವಾಯಿತು. ಅಮೆರಿಕಾದಿಂದ ಆಗಮಿಸಿದ ಟ್ರಾಟಸ್ಕಿಯೂ ಲೆನಿನ್ನನ ಜೊತೆಗೂಡಿದನು. ತಾತ್ಕಾಲಿಕ ಸರಕಾರವನ್ನು ಲೆನಿನ್ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ಮಧ್ಯಮ ವರ್ಗದವರ ಅಡಿಯಾಳೆಂದು ದೂಷಿಸಿದನು. ದೇಶದ ಎಲ್ಲಾ ಶಕ್ತಿಗಳು ನಿಜವಾದ ಕ್ರಾಂತಿಯ ಕಡೆಗೆ ಗಮನ ಹರಿಸುವಂತೆ ಮಾಡಲು ಬಯಸಿದನು.

## 115.4 ತೀವ್ರವಾದದ ಕಡೆಗಿನ ಒಲವು

ರಷ್ಯಾದ ರಾಜಕೀಯದಲ್ಲಿ ಲೆನಿನ್ ಮತ್ತು ಟ್ರಾಟಸ್ಕಿಯ ಪ್ರವೇಶವಾದೊಡನೆ ಎಡ ಪಂಥದತ್ತ ಒಲವು ಕಂಡು ಬಂದಿತು. ಕೂಡಲೇ ಅವರು ಆಕ್ರಮಣಗಳಿಲ್ಲದೆ, ಪರಿಹಾರವಿಲ್ಲದೆ ಯುದ್ಧವನ್ನು ಅಂತ್ಯಗೊಳಿಸುವಂತೆ ಒತ್ತಾಯಿಸಿದರು. ಹಾಗೆಯೇ ಒಕ್ಕೂಟಕ್ಕೆ ಎಲ್ಲಾ ಅಧಿಕಾರವನ್ನು ಹಸ್ತಾಂತರಿಸುವಂತೆ ಮನವಿ ಮಾಡಿದರು. ಒಕ್ಕೂಟವು ಸೈನ್ಯ ಪೋಲಿಸ್ ಮತ್ತು ಅಧಿಕಾರಶಾಹಿತ್ವದ ವ್ಯವಸ್ಥೆಯನ್ನು ಕೈಬಿಡುವುದರ ಪರವಾಗಿತ್ತು. ಸಂಸದೀಯ ಗಣರಾಜ್ಯದ ವ್ಯವಸ್ಥೆಯನ್ನು ವಿರೋಧಿಸಿತು. ಭೂಮಾಲೀಕರ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡು ಎಲ್ಲಾ ಭೂಮಿಯನ್ನು ರಾಷ್ಟ್ರೀಕರಣಗೊಳಿಸಲು ಉದ್ದೇಶಿಸಿತು. ಎಲ್ಲಾ ಬ್ಯಾಂಕುಗಳನ್ನು ರದ್ದುಗೊಳಿಸಿ ಏಕಮಾತ್ರ ರಾಷ್ಟ್ರೀಯ ಬ್ಯಾಂಕಿನಲ್ಲಿ ಅವುಗಳನ್ನು ವಿಲೀನಗೊಳಿಸಿ ಒಕ್ಕೂಟದ ನಿಯಂತ್ರಣಕ್ಕೊಳಪಡಿಸಲಾಯಿತು. ಈ ಬದಲಾವಣೆಗಳು ರಷ್ಯಾದ ಕ್ರಾಂತಿ ಮತ್ತು ಇತಿಹಾಸಕ್ಕೆ ಹೊಸದಾರಿ ತೋರಿಸಿತು. ಈ ಎಲ್ಲಾ ಚಟುವಟಿಕೆಗಳ ನೇತೃತ್ವವನ್ನು ಲೆನಿನ್ ವಹಿಸಿದ್ದುದಲ್ಲದೆ, ಅದರ ಮೂಲಕ ದೇಶದ ಮುಂದೆ ಕೆಲವು ಉದ್ದೇಶಗಳನ್ನೂ, ಕಾರ್ಯತಂತ್ರಗಳನ್ನೂ ಮಂಡಿಸಿದನು.

## 115.5 ಕಮ್ಯೂನಿಸ್ಟ್ ಪಕ್ಷ

ಅಲ್ಲಿಯವರೆಗೆ ರಷ್ಯಾದ ಸಮಾಜವಾದಿ ಪ್ರಜಾಪ್ರಭುತ್ವವಾದಿ ದುಡಿಮೆಗಾರರ ಪಕ್ಷದವರೆನಿಸಿದ್ದ ಬೋಲ್ಶೆವಿಕರು 1918 ನೇ ಮಾರ್ಚ್‌ನಲ್ಲಿ ರಷ್ಯಾದ ಕಮ್ಯೂನಿಸ್ಟ್ ಪಕ್ಷದವರಾದರು. ಲೆನಿನ್ನನ ನಾಯಕತ್ವದಲ್ಲಿ ಕಮ್ಯೂನಿಸ್ಟ್ ಪಕ್ಷವು ಸೋವಿಯತ್ ಒಕ್ಕೂಟ ಹಾಗೂ ದುಡಿಮೆಗಾರರ ಎಲ್ಲಾ ಸಂಸ್ಥೆಗಳ ನಾಯಕತ್ವವನ್ನು ಪಡೆಯಿತು. 1918 ರ ಅಂತ್ಯದ ವೇಳೆಗೆ ಸರಕಾರ, ಸೈನ್ಯ, ವ್ಯಾಪಾರ ಸಂಸ್ಥೆಗಳು ಮತ್ತು ಅಂತಹ ಅನೇಕ ಸಂಸ್ಥೆಗಳ ಎಲ್ಲಾ ಮುಖ್ಯ ಹುದ್ದೆಗಳು ಕಮ್ಯೂನಿಸ್ಟ್ ಪಕ್ಷದ ಪಾಲಾದವು. ಪಕ್ಷವು ಅತೀವ ಶಿಸ್ತಿನ ಸಂಸ್ಥೆಯಾಗಿ ಅದರ ಸದಸ್ಯರು ಸಮಾಜವಾದದ ಗುರಿಯನ್ನು ಸಾಧಿಸುವಲ್ಲಿ ದುಡಿಮೆಗಾರರಿಗೆ ಮಾದರಿಯಾದರು.

## 115.6 ರಾಜ್ಯಾಂಗ

ಈ ಎಲ್ಲಾ ಬೆಳವಣಿಗೆಗಳ ಕಾಲದಲ್ಲಿ ಸೋವಿಯತ್ ಸರಕಾರ ರಾಜ್ಯಾಂಗವಿಲ್ಲದೆ ಕಾರ್ಯನಿರ್ವಹಿಸುತ್ತಿತ್ತು. 1918 ರ ಏಪ್ರಿಲ್‌ನಲ್ಲಿ ಪಕ್ಷದ ಕೇಂದ್ರೀಯ ಕಾರ್ಯಕಾರಿಣಿ ಸಮಿತಿಯು ರಾಜ್ಯಾಂಗದ ರಚನೆಗಾಗಿ ಒಂದು ಸಮಿತಿಯನ್ನು ನೇಮಿಸಿತು. 1918 ರ ಜುಲೈ 10 ರಂದು ಸೋವಿಯತ್ ಒಕ್ಕೂಟದ 5ನೇ ಸಮಾವೇಶದಲ್ಲಿ ಸಮಿತಿಯು ರಚಿಸಿದ ರಾಜ್ಯಾಂಗವನ್ನು ಅನುಮೋದಿಸಲಾಯಿತು. ಈ ರಾಜ್ಯಾಂಗವು 1936 ರವರೆಗೂ ಅಸ್ತಿತ್ವದಲ್ಲಿತ್ತು. 1918 ರ ರಾಜ್ಯಾಂಗವು ರಷ್ಯಾವನ್ನು "ದುಡಿಮೆಗಾರರ, ಸೈನಿಕರ ಮತ್ತು ರೈತರ ಪ್ರತಿನಿಧಿಗಳ ಒಕ್ಕೂಟದ ಗಣರಾಜ್ಯ" ವೆಂದು ಘೋಷಿಸಿತು. ಈ ಗಣರಾಜ್ಯವನ್ನು "ರಷ್ಯಾದ ಸಮಾಜವಾದಿ ಸಂಯುಕ್ತ ಸೋವಿಯತ್ ಗಣರಾಜ್ಯ" ವೆಂದು ಹೆಸರಿಸಿತು.

ಈ ರಾಜ್ಯಾಂಗವು "ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ" ದಲ್ಲಿ ಅಡಕವಾಗಿದ್ದ ತತ್ವಗಳು ಮತ್ತು ಬೋಲ್ಶೆವಿಕರು ಅಧಿಕಾರ ವಹಿಸಿಕೊಳ್ಳುವ ವೇಳೆಗೆ ಮಾಡಿದ್ದ ಸಾಧನೆಗಳ ವಿವರಣೆಯನ್ನು ಒಳಗೊಂಡಿತ್ತು. ಮಧ್ಯಮವರ್ಗವನ್ನು ಸಂಪೂರ್ಣವಾಗಿ ಹತ್ತಿಕ್ಕುವುದೇ ಇದರ ಉದ್ದೇಶವಾಗಿತ್ತು. ಸೋವಿಯತ್ ಪ್ರಜೆಗಳಿಗೆ ಕೆಲವು ನಾಗರೀಕ ಹಕ್ಕುಗಳನ್ನು ಖಾತರಿಗೊಳಿಸಲಾಯಿತು. ಈ ರಾಜ್ಯಾಂಗದ ಮೂಲಕ ಬಹಿರಂಗ ಪಡಿಸಿದ ರಾಜಕೀಯ ವ್ಯವಸ್ಥೆಯು ಪ್ರಸ್ತುತ ಸೋವಿಯತ್ ಪದ್ಧತಿಯನ್ನು ಆಧರಿಸಿತ್ತು. ಸೋವಿಯತ್ ಒಕ್ಕೂಟದ ಸದಸ್ಯರು 18 ವರ್ಷ ವಯಸ್ಸಿನ ಮೇಲ್ಪಟ್ಟ ಎಲ್ಲಾ ವಯಸ್ಕರಿಂದ ಮುಕ್ತ ಚುನಾವಣಾ ಪದ್ಧತಿಯ ಮೂಲಕ ಆರಿಸಲ್ಪಡುವರೆಂದು ತಿಳಿಸಲಾಯಿತು. ಮತದಾನದಲ್ಲಿ ಪಾದ್ರಿಗಳು ರೋಮನೋವ್ ಮನೆತನದವರು, ಹಿಂದಿನ ಪೋಲಿಸ್ ಏಜಂಟರು ಉನ್ನತ ಅಧಿಕಾರಿಗಳು, ಖಾಸಗೀ ಉದ್ಯಮಿಗಳು ಮತ್ತು ಅಪರಾಧಿಗಳು ಭಾಗವಹಿಸುವಂತಿಲ್ಲವೆಂದು ತಿಳಿಸಲಾಯಿತು. 'ಅಖಿಲ ರಷ್ಯಾ ಸೋವಿಯತ್ ಕಾಂಗ್ರೆಸ್' ಗಣರಾಜ್ಯದ ಮುಖ್ಯ ಶಾಸಕಾಂಗವಾಗಿ ಸರಕಾರದ ಕೇಂದ್ರ ಸಂಸ್ಥೆಯಾಗಿರುವುದೆಂದು ತಿಳಿಸಲಾಯಿತು. ಈ ರಾಜ್ಯಾಂಗವು ಪ್ರಜಾಪ್ರಭುತ್ವದ ಶಕ್ತಿಯನ್ನು ಸೃಷ್ಟಿಸಿದರೂ ಅಧಿಕಾರವನ್ನೆಲ್ಲಾ ಬೋಲ್ಶೆವಿಕ್‌ರಲ್ಲಿ ಕೇಂದ್ರಿಕರಿಸಿತು. ಬೋಲ್ಶೆವಿಕರು ಕಮ್ಯೂನಿಸ್ಟ್‌ರೆಂದು ಕರೆಯಲ್ಪಟ್ಟರು.

## 115.7 ಸಮಾಜವಾದೀ ನೀತಿಗಳು

ಈಗ ಬೋಲ್ಶೆವಿಕ್ ಸರಕಾರವು ರಾಷ್ಟ್ರ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನರ್ ರಚಿಸುವುದರತ್ತ ಗಮನ ಹರಿಸಿತು. ಸಮಾಜವಾದೀ ತತ್ವಗಳನ್ನು ಅಂಗೀಕರಿಸಿ ಅವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಾನೂನುಗಳನ್ನು ಜಾರಿಗೆ ತಂದಿತು. ಭೂಮಿಯ ಖಾಸಗೀ ಮಾಲಿಕತ್ವವನ್ನು ರದ್ದುಗೊಳಿಸಿತು. ರೈತರೂ ಕೂಡ ಖಾಸಗೀ ಮಾಲಿಕತ್ವವನ್ನು ಕಳೆದುಕೊಂಡರು. ಪಡಿತರ ವ್ಯವಸ್ಥೆ ಜಾರಿಗೆ ಬಂದಿತು. ಆಹಾರ ಸಾಮಗ್ರಿಗಳ ಬೆಲೆಯನ್ನು ನಿಗದಿಪಡಿಸಲಾಯಿತು. ಸಾಮೂಹಿಕ ಬೇಸಾಯಕ್ಕೆ ಉತ್ತೇಜನ ದೊರೆಯಿತು. ಉದಾರ ರಾಜ್ಯಸಾಲ ದೊರೆಯಿತು. ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಿ ಎಲ್ಲಾ ಕಲ್ಲಿದ್ದಲು ಗಣಿಗಳು, ತೈಲ ಪ್ರದೇಶಗಳು ಮತ್ತು ರೈಲ್ವೆ ಮಾರ್ಗಗಳನ್ನು ಸಾರ್ವಜನಿಕ ಆಸ್ತಿಯೆಂದು ಘೋಷಿಸಲಾಯಿತು. ಖಾಸಗೀ ವ್ಯಾಪಾರವನ್ನು ರದ್ದುಗೊಳಿಸಲಾಯಿತು. ಅಂಗಡಿ - ಬ್ಯಾಂಕುಗಳು ಮುಚ್ಚಲ್ಪಟ್ಟವು. ವಿದೇಶೀ ವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸಲಾಯಿತು. ಹಾಗೆಯೇ ಅದನ್ನು ರಾಜ್ಯದ ಏಕಸ್ವಾಮ್ಯಕ್ಕೊಳಪಡಿಸಲಾಯಿತು. ರಟ್ಟೆ ಬಲಕ್ಕೆ ಪ್ರಾಶಸ್ತ್ಯ ಲಭಿಸಿತು. ಆದರೆ ಈ ಬದಲಾವಣೆಗಳೆಲ್ಲಾ ಮಾರಕವೆನಿಸಿದವು. ವೇತನವನ್ನು ಖಾತರಿಪಡಿಸಿಕೊಂಡ ದುಡಿಮೆಗಾರರು ತಮ್ಮ ಕೆಲಸವನ್ನು ನಿಲ್ಲಿಸಿದರು. ಪ್ರತಿಯೊಂದನ್ನು ಲಘುವಾಗಿ ಪರಿಗಣಿಸಿದರು. ಹಾಗಾಗಿ ಉತ್ಪಾದನಾ ಕಾರ್ಯ ಸ್ಥಗಿತಗೊಂಡಿತು. ದೇಶ ಕಾಯ್ದಿರಿಸಿದ ಸಂಗ್ರಹವನ್ನು

ಅವಲಂಬಿಸಬೇಕಾಯಿತು. ರೈತರು ಉತ್ಪಾದಿಸಿದ ಅಧಿಕ ಧಾನ್ಯವನ್ನು ಸರಕಾರಕ್ಕೆ ಒಪ್ಪಿಸುತ್ತಿದ್ದು, ಅದಕ್ಕೆ ಯಾವುದೇ ಪ್ರತಿಫಲವನ್ನು ಪಡೆಯದೇ ಇದ್ದುದರಿಂದ ತಮ್ಮ ಅಗತ್ಯಕ್ಕೆ ತಕ್ಕಷ್ಟು ಮಾತ್ರ ಉತ್ಪಾದಿಸಲು ತೊಡಗಿದರು.

## 115.8 ಬೋಲ್ಷೆವಿಕ್ ಕ್ರಾಂತಿಯ ಪರಿಣಾಮಗಳು

1917 ರ ಬೋಲ್ಷೆವಿಕ್ ಕ್ರಾಂತಿ ರಷ್ಯಾದ ಇತಿಹಾಸದಲ್ಲಿ ಒಂದು ವೈಶಿಷ್ಟ್ಯಪೂರ್ಣ ಘಟನೆ. ಶತಮಾನಗಳಿಂದ ಮೆರೆಯುತ್ತಿದ್ದ ನಿರಂಕುಶ ಆಡಳಿತವನ್ನು ಬೇರು ಸಹಿತ ಕಿತ್ತೊಗೆದ ಘಟನೆ ಇದಾಗಿತ್ತು. ಕೇವಲ ಒಂದೇ ವರ್ಷದಲ್ಲಿ ಅನೇಕ ಆಜ್ಞೆಗಳ ಮೂಲಕ ವರ್ಗೀಯ ತಾರತಮ್ಯವನ್ನು ಕಿತ್ತೊಗೆದು ಸಮಾನತೆಯನ್ನು ನೆಲೆಗೊಳಿಸಿತು. ರಾಜಕೀಯದಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದ ಚರ್ಚ್ ತನ್ನ ಸ್ಥಾನವನ್ನು ಕಳೆದುಕೊಂಡು ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಖಾಸಗೀ ಭೂಮಾಲಿಕತ್ವ ಮತ್ತು ಸಂಪತ್ತಿನ ಒಡೆತನವನ್ನು ಅಂತ್ಯಗೊಳಿಸಿತು. ಉತ್ಪಾದನೆ ಮತ್ತು ವಿತರಣೆಯ ಮೂಲಗಳು ರಾಜ್ಯಕ್ಕೆ ಹಸ್ತಾಂತರಗೊಂಡವು. ಬೋಲ್ಷೆವಿಕ್ ಕ್ರಾಂತಿ ಪತ್ರಿಕಾ ಸ್ವಾತಂತ್ರ್ಯದ ಮೇಲೂ ನಿರ್ಬಂಧ ಹೇರಿತು. ವಾಕ್ ಮತ್ತು ಸಭೆಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯಿತು. ಮಧ್ಯಮವರ್ಗದವರ ಎಲ್ಲಾ ಸಮರ್ಥ ಪಕ್ಷಗಳನ್ನು ನಿಷೇಧಿಸಲಾಯಿತು. ಪ್ರಥಮ ಬಾರಿಗೆ ರಹಸ್ಯ ರಾಜಕೀಯ ಪೋಲಿಸ್ ವ್ಯವಸ್ಥೆ ಆರಂಭವಾಯಿತು.

## 115.9 ನವ ಆರ್ಥಿಕ ನೀತಿ

ನವ ಆರ್ಥಿಕ ನೀತಿ 1921 ರ ಮಾರ್ಚ್ ತಿಂಗಳಲ್ಲಿ ಜಾರಿಗೆ ಬಂದಿತು. ಇದು ಕಮ್ಯೂನಿಸ್ಟ್ ಗುರಿಗೆ ವ್ಯತಿರಿಕ್ತವಾಗಿತ್ತು. ಈ ನೀತಿಯನ್ನು ಲೆನಿನ್ 1921 ರಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ 10 ನೇ ಸಮಾವೇಶದಲ್ಲಿ ಮುಂದಿಟ್ಟು ಹೀಗೆ ಘೋಷಿಸಿದ. " ದುಡಿಮೆಗಾರರು ಮತ್ತು ರೈತರು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಕಳೆದುಕೊಂಡು ಬಡತನ, ನಾಶ ಮತ್ತು ಅತಿಯಾದ ಬಳಲಿಕೆಯ ಅಂಚಿನಲ್ಲಿರುವುದರಿಂದ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಅಸ್ತಿತ್ವದಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು ಬದಿಗೊತ್ತಬೇಕಾಗಿದೆ". ಈ ನವ ಆರ್ಥಿಕ ನೀತಿ ರಷ್ಯನ್ನರ ಸಾರ್ವಜನಿಕ ಜೀವನದ ಎಲ್ಲಾ ಸ್ತರಗಳನ್ನು ತಟ್ಟಿತು.

### *115.9.1 ನವ ಆರ್ಥಿಕ ನೀತಿಯ ಮುಖ್ಯಾಂಶಗಳು*

ಇದು ಸಮಾಜವಾದೀ ಅರ್ಥ ವ್ಯವಸ್ಥೆಯ ಚೌಕಟ್ಟಿನಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಪುನಶ್ಚೇತನಗೊಳಿಸಿತು. ರೈತರನ್ನು ಸಾಮೂಹಿಕ ಬೇಸಾಯಕ್ಕೆ ಒಳಪಡುವಂತೆ ಬಲಾತ್ಕರಿಸುವುದನ್ನು ಕೈಬಿಟ್ಟು, ಅವರು ತಮ್ಮ ಉತ್ಪಾದನೆಯನ್ನು ಮನಬಂದಂತೆ ಮಾರಲು ಅನುಮತಿ ದೊರೆಯಿತು. ಎಲ್ಲಕ್ಕಿಂತ ಮಿಗಿಲಾಗಿ ಈ ಹೊಸ ನೀತಿಯು ಕೃಷಿಗೆ ಉತ್ತೇಜನ ನೀಡಿತು. ರೈತರಿಗೆ ಎಷ್ಟು ಸಾಧ್ಯವೋ ಅಷ್ಟು ಉತ್ಪಾದಿಸಲು ಉತ್ತೇಜನ ದೊರೆಯಿತು. ನಿರ್ದಿಷ್ಟ ಪ್ರಮಾಣದ ಕಂದಾಯ ನೀಡಿ ಗರಿಷ್ಠ ಲಾಭಗಳಿಕೆಯ ಅವಕಾಶವನ್ನೂ ಪಡೆದರು.

ಕೈಗಾರಿಕಾ ಕ್ಷೇತ್ರದಲ್ಲೂ ಕೂಡ ಗಮನಾರ್ಹ ಬದಲಾವಣೆಗಳು ಜಾರಿಗೆ ಬಂದವು. ಇಪ್ಪತ್ತು ಮಂದಿ ಕಾರ್ಮಿಕರಿಗಿಂತ ಕಡಿಮೆ ಇದ್ದ ಎಲ್ಲಾ ಕೈಗಾರಿಕಾ ಘಟಕಗಳನ್ನು ಹಿಂದಿನ ಒಡೆಯರಿಗೇ ಒಪ್ಪಿಸಲಾಯಿತು ಅಥವಾ ಖಾಸಗೀ ಉದ್ಯಮಿಗಳಿಗೆ ಗುತ್ತಿಗೆ ನೀಡಲಾಯಿತು. ಕಾರ್ಮಿಕರನ್ನು ಬಲತ್ಕಾರವಾಗಿ ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ಕೈಬಿಡಲಾಯಿತು. ವರ್ತಕ ಸಂಘಗಳಿಗೆ ದುಡಿಮೆಗಾರರ ಹಿತಾಸಕ್ತಿಗಳನ್ನು ಕಾಪಾಡುವ ಸ್ವಾತಂತ್ರ್ಯ ಲಭಿಸಿತು. ಅವು ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವ ಅನಿವಾರ್ಯತೆ ತಪ್ಪಿತು.

ವಿದೇಶೀ ಬಂಡವಾಳಗಾರರಿಗೆ ಕೆಲವು ಕೈಗಾರಿಕೋದ್ಯಮಗಳನ್ನು ಗುತ್ತಿಗೆ ನೀಡುವುದರ ಮೂಲಕ ವಿದೇಶೀ ಬಂಡವಾಳವನ್ನು ಆಕರ್ಷಿಸಲಾಯಿತು. ರಾಷ್ಟ್ರೀಕೃತ ಕೈಗಾರಿಕೆಗಳಲ್ಲಿ ಹೆಚ್ಚಿನ ವಿಕೇಂದ್ರೀಕರಣವನ್ನು ಜಾರಿಗೊಳಿಸಲಾಯಿತು. ಮಿತಿಮೀರಿದ ಸಂಪ್ರದಾಯ ಶರಣತೆಯನ್ನು ಕೈಬಿಟ್ಟು ವ್ಯಾಪಾರ ಮನೋಭಾವನೆಯನ್ನೇ ಗುರಿಯಾಗಿಟ್ಟುಕೊಳ್ಳುವಂತೆ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲಾಯಿತು. ಹೊಸ ವ್ಯವಸ್ಥೆಯಲ್ಲಿ ಹಣ ಮತ್ತೊಮ್ಮೆ ವಿನಿಮಯದ ಮುಖ್ಯ ಮಾಧ್ಯಮವಾಯಿತು. ಆಂತರಿಕ ಹಾಗೂ ಸಾಗರೋತ್ತರ ವ್ಯಾಪಾರ ರಂಗಗಳಲ್ಲಿ ರಾಜ್ಯವು ಅಧಿಕ ಪಾಲುದಾರಿಕೆಯ ಸ್ಥಾನವನ್ನು ಉಳಿಸಿಕೊಂಡಿತು. ನಗದು ಹಣವನ್ನು ಸಂಗ್ರಹಿಸುವಲ್ಲಿ ಇದ್ದ ನಿರ್ಬಂಧವನ್ನು ಸಡಿಲಗೊಳಿಸಲಾಯಿತು. ಆಸ್ತಿಯ ಮೇಲಿನ ವೈಯುಕ್ತಿಕ ಹಕ್ಕನ್ನು ಮಾನ್ಯ ಮಾಡಲಾಯಿತು. ಪರಸ್ಪರಾವಲಂಭನೆಯ ಖಾಸಗೀ ಬ್ಯಾಂಕುಗಳು ಕಾರ್ಯನಿರ್ವಹಿಸುವುದನ್ನು ಬಲಾತ್ಕರಿಸಲಿಲ್ಲ.

### *115.9.2 ನವ ಆರ್ಥಿಕ ನೀತಿಯ ವಿಮರ್ಶೆ*

ಬಂಡವಾಳಶಾಹಿ ಚಟುವಟಿಕೆಗಳ ಮೂಲಕ ರಾಜಿಗೆ ಸಾಧ್ಯವಿಲ್ಲದ ಕಮ್ಯೂನಿಸಂ (ಸಮತಾವಾದ) ನ ಸ್ಥಾನದಿಂದ ಅದನ್ನು ಸ್ಥಿತ್ಯಂತರಗೊಳಿಸಿದ ಆರೋಪವನ್ನು ನವ ಆರ್ಥಿಕ ನೀತಿಯ ಮೇಲೆ ಹೊರಿಸಲಾಯಿತು. ಈ ಪರಿಸ್ಥಿತಿಯಲ್ಲಿ ಒಂದು ಹೆಜ್ಜೆ ಮುಂದಿಡಲು ಎರಡು ಹೆಜ್ಜೆ ಹಿಂದೆ ಸರಿಯಬೇಕಾದ ಅನಿವಾರ್ಯತೆಯನ್ನು ಲೆನಿನ್ ಒಪ್ಪಿಕೊಂಡಿದ್ದನು. ಬಂಡವಾಳಶಾಹಿತ್ವದ ಭದ್ರಕೋಟೆಯ ಮೇಲೆ ಧಾಳಿ ಮಾಡಲು ಅಂತಹ ವ್ಯವಸ್ಥಿತ ಹಿಮ್ಮೆಟ್ಟುವಿಕೆ ಅಗತ್ಯವಾಗಿತ್ತೆಂದು ಒತ್ತಿ ಹೇಳಿದನು. ರಷ್ಯಾದ ಆರ್ಥಿಕ ಜೀವನದ ಎಲ್ಲಾ ಹಂತಗಳಲ್ಲಿ ಸಮಾಜವಾದ ಅಂಕುರಿಸುವಂತೆ ಮಾಡಲು ಅದು ಅಗತ್ಯವಾಗಿತ್ತೆಂದು ತಿಳಿಸಿದನು. ಕ್ರಾಂತಿ ಬಂಡವಾಳಶಾಹಿತ್ವದ ಕೋಟೆಯ ಮೇಲೆ ನೇರ ಆಕ್ರಮಣಕ್ಕೆ ಪ್ರಯತ್ನಿಸಿ ವಿಫಲಗೊಂಡಿದ್ದರಿಂದ ಈ ಹೊಸ ತಂತ್ರವನ್ನು ಅಳವಡಿಸಬೇಕಾಯಿತೆಂದು ತಿಳಿಸಿದನು. ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದಾಗ ತಾನು ಬಂಡವಾಳಶಾಹಿತ್ವದತ್ತ ಭಾಗಶಃ ವಾಲುವುದರತ್ತ ಕ್ರಮ ಕೈಗೊಳ್ಳಲು ತುಂಬಾ ತೊಂದರೆ ತೆಗೆದುಕೊಳ್ಳುತ್ತಿರುವುದಾಗಿ ಲೆನಿನ್ನನಿಗೆ ಅನಿಸಿತ್ತು. ಆದರೆ ಯಾವ ಸಮಯದಲ್ಲಾದರೂ ತನ್ನ ಕ್ರಮವನ್ನು ನಿಲ್ಲಿಸಬಹುದೆಂಬ ನಂಬಿಕೆಯೂ ಆತನಿಗಿತ್ತು. 'ಯುದ್ಧ ಸಮತಾವಾದದ' ಕಾಲದಲ್ಲಿ ಸರಕಾರದ ವಿರುದ್ಧವಾಗಿದ್ದ ರೈತರ ಮನವೊಲಿಸಲು ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರುವುದು ಅನಿವಾರ್ಯವಾಗಿತ್ತು. 1927 ರಲ್ಲಿ ನವ ಆರ್ಥಿಕ ನೀತಿಯನ್ನು ಕೈಬಿಡಲಾಯಿತು. ನಗರಗಳಿಗೆ ಸಾಕಷ್ಟು ಆಹಾರ ಪದಾರ್ಥಗಳು ಪೂರೈಕೆಯಾಗದಿದ್ದುದೇ ಅದಕ್ಕೆ ಕಾರಣವಾಗಿತ್ತು. ಅಷ್ಟರ ವೇಳೆಗೆ ರಷ್ಯಾದ ಅರ್ಥ ವ್ಯವಸ್ಥೆ ಗಮನಾರ್ಹ ಪ್ರಮಾಣದಲ್ಲಿ ಚೇತರಿಸಿಕೊಂಡು ಯುದ್ಧ-ಪೂರ್ವ ದಿನಗಳ ಮಟ್ಟವನ್ನು ಮುಟ್ಟಿತ್ತು.

## 115.10 ಸ್ಟ್ಯಾಲಿನ್ನನ ಪ್ರಾರಂಭಿಕ ಜೀವನ

ಸ್ಟ್ಯಾಲಿನ್ ಎಂದೇ ಜನಪ್ರಿಯನಾದ ಜೋಸೆಫ್ ದ್ಜುಗಶ್‌ವಲಿ 1879 ರಲ್ಲಿ ಜಾರ್ಜಿಯಾದ ಗೋರಿ ಎಂಬಲ್ಲಿ ಜನಿಸಿದನು. ವಿದ್ಯಾಭ್ಯಾಸಕ್ಕಾಗಿ ಮತೀಯ ಶಾಲೆಯೊಂದನ್ನು ಸೇರಿದ ಅವನು ಅವಿರತ ಅಧ್ಯಯನದಿಂದ ಅಪಾರ ಪಾಂಡಿತ್ಯವನ್ನು ಸಂಪಾದಿಸಿದನು. ಬಲಶಾಲಿ ಯುವಕನಾಗಿ ಬೆಳೆದರೂ ಸೇನಾ ಸೇವೆಗೆ ಅರ್ಹನಾಗಿರಲಿಲ್ಲ. ಕಕಾಸಸ್‌ನಲ್ಲಿ ಕ್ರಾಂತಿಕಾರಿ ತತ್ವಗಳು ಬೆಳೆದಿದ್ದ ಕಾಲವಾಗಿದ್ದುದರಿಂದ ಸ್ಟ್ಯಾಲಿನ್ ಸ್ವಾಭಾವಿಕವಾಗಿಯೇ ಅವುಗಳತ್ತ ಆಕರ್ಷಿತನಾದನು. ವರ್ಗೀಯ ತಾರತಮ್ಯದ ಬಗ್ಗೆ ಆಳವಾದ ಅನುಕಂಪವನ್ನು ಬೆಳೆಸಿಕೊಂಡನು. 1899 ರ ವೇಳೆಗೆ ಕಟ್ಟಾ ಮಾರ್ಕ್ಸ್‌ವಾದಿಯಾಗಿ ರಹಸ್ಯ ಸಮಾಜವಾದೀ ಸಂಸ್ಥೆಯೊಂದನ್ನು ಸೇರಿದನು.

## 115.11 ಸ್ಟ್ಯಾಲಿನ್ನನ ರಾಜಕೀಯ ಜೀವನ

1901 ರಲ್ಲಿ ಆತ 'ಮೇದಿನಾಚರಣೆ' ಯ ಪ್ರಥಮ ಮೆರವಣಿಗೆಯನ್ನು ವ್ಯವಸ್ಥೆಗೊಳಿಸಿದನು. ಆದರೆ ಪೋಲಿಸರ ಧಾಳಿಯ ಭಯದಿಂದ ತಲೆ ಮರೆಸಿಕೊಂಡನು. 'ಕೋಬಾ' ದಂತಹ ಅನೇಕ ಹೆಸರುಗಳನ್ನಿಟ್ಟುಕೊಂಡು ಓಡಾಡಿದ; 1913 ರಲ್ಲಿ ಪ್ರಥಮ ಬಾರಿಗೆ ಸ್ಟ್ಯಾಲಿನ್ ಅಂದರೆ 'ಉಕ್ಕಿನ ಮನುಷ್ಯ' ನೆಂಬ ಅರ್ಥ ಬರುವ ಹೆಸರಿನಲ್ಲಿ ರುಜು ಮಾಡಿದ. 1902 ರಲ್ಲಿ ಬಾಕು ಎಂಬಲ್ಲಿ ಬಂಧನಕ್ಕೊಳಗಾಗಿ 18 ತಿಂಗಳ ಜೈಲು ವಾಸವನ್ನನುಭವಿಸಿದನು. ಅಲ್ಲಿಂದ ಸೈಬೀರಿಯಾಕ್ಕೆ ಗಡೀ ಪಾರು ಮಾಡಲ್ಪಟ್ಟು ಅಲ್ಲಿ ಮೂರು ವರ್ಷಗಳ ಕಾಲವಿದ್ದನು. ಅನಂತರ ಟಿಫಿಸ್ ಎಂಬಲ್ಲಿಗೆ ಹಿಂತಿರುಗಿದವನು ಕ್ರಾಂತಿಕಾರಿ ಚಟುವಟಿಕೆಗಳನ್ನು ಮುಂದುವರಿಸಿದನು. 1905 ರಲ್ಲಿ ಪ್ರಥಮ ಬಾರಿಗೆ ರಷ್ಯಾದಿಂದ ಹೊರಹೋದವನು ಫಿನ್‌ಲ್ಯಾಂಡಿನ ತಮ್ಮರ್ ಫೋಸ್ ಎಂಬಲ್ಲಿ ನಡೆದ ಬೋಲ್ಷೆವಿಕ್ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದನು. ಆಗಲೇ ಅಲ್ಲಿ ಲೆನಿನ್‌ನನ್ನು ಪ್ರಥಮ ಬಾರಿಗೆ ಭೇಟಿಯಾದುದು. ಅನಂತರ ಕ್ರಮವಾಗಿ ಸ್ಟಾಕ್‌ಹೋಮ್ (1906) ಮತ್ತು ಲಂಡನ್ (1907) ನಲ್ಲಿ ನಡೆದ ಸಮ್ಮೇಳನಗಳಲ್ಲೂ ಭಾಗವಹಿಸಿದನು. ಈ ಸಂದರ್ಭದಲ್ಲಿ ಟ್ರಾಟಸ್ಕಿಯನ್ನು ಭೇಟಿಯಾದ.

## 115.12 ಸ್ಟ್ಯಾಲಿನ್ ಮತ್ತು 1917 ರ ಕ್ರಾಂತಿ

1917 ರ ಕ್ರಾಂತಿಯ ನಂತರ ಸೈಬೀರಿಯಾದಿಂದ ಪೆಟ್ರೋಗ್ರ್ಯಾಡ್‌ಗೆ ಹಿಂತಿರುಗಿದ ಸ್ಟ್ಯಾಲಿನ್ 'ಪ್ರಾವ್‌ಡ' ಪತ್ರಿಕೆಯ ಸಂಪಾದಕನಾದನು. ಪಕ್ಷದ ಹೊಸ ಕೇಂದ್ರೀಯ ಸಮಿತಿಗೂ ಕೂಡ ಚುನಾಯಿತನಾದನು. ಹಾಗೆಯೇ ಸ್ವಲ್ಪಕಾಲ ಪೆಟ್ರೋಗ್ರ್ಯಾಡ್ ಸೋವಿಯತ್ ಮತ್ತು ಬೋಲ್ಷೆವಿಕ್ ಪಕ್ಷದ ನಾಯಕತ್ವವನ್ನು ವಹಿಸಿದ್ದನು. ಲೆನಿನ್ ವಿವಿಧ ಗುಂಪುಗಳೊಂದಿಗೆ ಸಂಘರ್ಷದಲ್ಲಿ ತೊಡಗಿದ್ದಾಗ ಯಾವುದೇ ಬಣದ ಪರವಹಿಸಲು ವಿಫಲನಾಗಿದ್ದನು. ಆದರೂ ಬೋಲ್ಷೆವಿಕ್ ಕ್ರಾಂತಿಯ ಸಮಯದಲ್ಲಿ ನಾಯಕನಾಗಿ ಲೆನಿನ್ ಮತ್ತು ಟ್ರಾಟಸ್ಕಿಯೊಂದಿಗೆ ಗುರುತಿಸಿಕೊಂಡಿದ್ದನು. ರಾಷ್ಟ್ರೀಯತೆಯ ಸಮಿತಿಯ ಅಧ್ಯಕ್ಷನಾಗಿ ಚುನಾಯಿತನಾದನು.

## 115.13 ನಾಯಕತ್ವಕ್ಕಾಗಿ ಹೋರಾಟ

ಲೆನಿನ್ ಜೀವಂತವಾಗಿರುವವರೆಗೆ ಆತನೇ ಬೋಲ್ಷೆವಿಕ್‌ರ ನಿರ್ವಿವಾದಿತ ನಾಯಕನಾಗಿದ್ದನು. 1924 ರಲ್ಲಿ ಅವನು ಮರಣಹೊಂದಿದ ಮೇಲೆ ಸ್ಟ್ಯಾಲಿನ್ ಮತ್ತು ಟ್ರಾಟಸ್ಕಿ ನಡುವೆ ಉತ್ತರಾಧಿಕಾರಕ್ಕಾಗಿ ತೀವ್ರ ಹೋರಾಟ ನಡೆಯಿತು. ಸಂಘಟನೆ ಮತ್ತು ಆಡಳಿತದ ಪೂರ್ಣ ಜವಾಬ್ದಾರಿಯನ್ನು ಸ್ಟ್ಯಾಲಿನ್ನನೇ ವಹಿಸಿಕೊಳ್ಳುವುದರ ಮೂಲಕ ರಾಜ್ಯ ಯಂತ್ರದ ಮೇಲೆ ಬಲವಾದ ಹಿಡಿತ ಸ್ಥಾಪಿಸಿದನು. ರಾಷ್ಟ್ರೀಯತೆಯ ಸಮಿತಿಯ ಅಧ್ಯಕ್ಷನ ಸ್ಥಾನವನ್ನು ಅಲಂಕರಿಸಿದ್ದಲ್ಲದೆ, ದುಡಿಮೆಗಾರರು ಮತ್ತು ರೈತರ ಮೇಲ್ವಿಚಾರಣಾ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸಲಾರಂಭಿಸಿದನು. ಹಾಗೆಯೇ ಅಸಮರ್ಥತೆ ಮತ್ತು ಲಂಚಗುಳಿತನವನ್ನು ಹೊಗಲಾಡಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಸಂಸ್ಥೆಯ ಮೇಲಾಧಿಕಾರಿಯಾದನು. ಪರಿಣಾಮವಾಗಿ ರಾಜ್ಯ ಯಂತ್ರದ ಪೂರ್ಣ ನಿಯಂತ್ರಣ ಲಭಿಸಿತು. ಕಮ್ಯೂನಿಸ್ಟ್ ಸರಕಾರದ ಒಳಸಚಿವ ಸಂಪುಟದಂತೆ ಕಾರ್ಯನಿರ್ವಹಿಸುತ್ತಿದ್ದ ಪಾಲಿಟ್‌ಬ್ಯೂರೋ ಎಂಬ ರಾಜ್ಯ ವ್ಯವಸ್ಥೆಯ ಸಮಿತಿಯ ಸದಸ್ಯನೂ ಆಗಿದ್ದನು. 1922 ರಲ್ಲಿ ಕೇಂದ್ರ ಸಮಿತಿಯ ಮಹಾಕಾರ್ಯದರ್ಶಿಯಾದನು. ಇದರಿಂದಾಗಿ ಕೇಂದ್ರ ನಿಯಂತ್ರಣ ಸಮಿತಿಯು ಕೈಗೊಂಡ ಪಕ್ಷದ ಶುದ್ಧೀಕರಣದ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸುವಂತಾಯಿತು. ಒಟ್ಟಿನಲ್ಲಿ ಲೆನಿನ್ ಮರಣಾ ಹೊಂದುವ ವೇಳೆಗೆ ನಾಯಕತ್ವಕ್ಕಾಗಿ ಪೈಪೋಟಿ ಇದ್ದುದ್ದು ಟ್ರಾಟಸ್ಕಿ ಮತ್ತು ಸ್ಟ್ಯಾಲಿನ್‌ರ ಮಧ್ಯೆ ಮಾತ್ರ. ಇದು ಕೇವಲ

ವೈಯುಕ್ತಿಕ ಹೋರಾಟವಾಗಿರದೆ, ಸೈದ್ಧಾಂತಿಕ ಹೋರಾಟವೂ ಆಗಿತ್ತು. ಟ್ರಾಟಸ್ಕಿ ಸಾಮಾನ್ಯ ಕ್ರಾಂತಿಯಲ್ಲಿ ನಂಬಿಕೆಯನ್ನಿಟ್ಟಿದ್ದ ನಾಯಕರು ಸೂಕ್ತ ಸಮಾಜವಾದೀ ನೀತಿಯನ್ನವಲಂಬಿಸಿದರೆ ಕಾರ್ಮಿಕರು ಅದನ್ನೇ ಅನುಸರಿಸುವರೆಂಬುದು ಈತನ ಆಶಾಭಾವನೆಯಾಗಿತ್ತು. ಆದರೆ ಸ್ಟ್ಯಾಲಿನ್ನನಿಗೆ ಸಮಾಜವಾದದ ಜನಪ್ರಿಯತೆಯಲ್ಲಿ ನಂಬಿಕೆ ಇರಲಿಲ್ಲ. ಜನರ ಹಿತದೃಷ್ಟಿಯಿಂದ ಸಮಾಜವಾದವನ್ನು ಬಲತ್ಕಾರದಿಂದ ಹೇರುವುದೇ ಸರಿಯಾದ ಕ್ರಮವೆಂದು ಅವನು ಭಾವಿಸಿದ್ದ. ಕ್ರಾಂತಿಯ ನೆಲೆಯನ್ನು ನಿರಂತರವಾಗಿ ವಿಸ್ತರಿಸದಿದ್ದರೆ, ರಷ್ಯಾದಂತಹ ಹಿಂದುಳಿದ ರಾಷ್ಟ್ರದಲ್ಲಿ ಸಮಾಜವಾದೀ ಕ್ರಾಂತಿ ಯಶಸ್ವಿಯಾಗಲಾರದು ಎಂಬುದು ಟ್ರಾಟಸ್ಕಿಯ ಅಭಿಮತ. ಆದರೆ ಒಂದು ರಾಷ್ಟ್ರದ ಅಸಹಾಯಕ ಬಲವೇ ಆ ರಾಷ್ಟ್ರದಲ್ಲಿ ಸಮಾಜವಾದದ ಸ್ಥಾಪನೆಗೆ ನೆರವಾಗುದೆಂಬುದು ಸ್ಟ್ಯಾಲಿನ್ನನ ನಂಬಿಕೆ. ಕಮ್ಯೂನಿಸ್ಟರ ವಿಶ್ವ ಕ್ರಾಂತಿಯ ಅಂತಿಮ ಗುರಿಯನ್ನು ಸ್ಟ್ಯಾಲಿನ್ ಪೂರ್ಣವಾಗಿ ತಳ್ಳಿಹಾಕಲಿಲ್ಲ. ಆದರೆ ಸಮಾಜವಾದದ ಗುರಿಯನ್ನು ಸಾಧಿಸಲು ರಷ್ಯಾ ವಿಶ್ವಕ್ರಾಂತಿಯ ಯಶಸ್ಸಿನವರೆಗೆ ಕಾಯಬೇಕಾಗಿಲ್ಲ ಎಂದು ಪ್ರತಿಪಾದಿಸಿದ.

ಈ ಸೈದ್ಧಾಂತಿಕ ವಿಭಜನೆ ಈ ಇಬ್ಬರು ನಾಯಕರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಕಮೆನೆವ್ ಮತ್ತು ಜಿರೋವಿವ್‌ರಂತಹ ಪಾಲಿಟ್‌ಬ್ಯೂರೋದ ಸದಸ್ಯರೂ ಕೂಡ ವಿವಾದದಲ್ಲಿ ಭಾಗಿಗಳಾಗಿದ್ದರು. 1925 ರ ಪಕ್ಷದ ಹದಿನಾಲ್ಕನೇ ಸಮಾವೇಶದಲ್ಲಿ ಅಂತಿಮ ನಿರ್ಧಾರವನ್ನು ಕೈಗೊಳ್ಳಲಾಯಿತು. 'ಒಂದೇ ರಾಷ್ಟ್ರದಲ್ಲಿ ಸಮಾಜವಾದ' ಎಂಬ ಸ್ಟ್ಯಾಲಿನ್ನನ ಯೋಜನೆಗೆ ಬಹುಮತ ದೊರೆಯಿತು. ಸ್ಟ್ಯಾಲಿನ್ ಪಕ್ಷದ ಹೊಸನಾಯಕನಾಗಿ ಹೊರಹೊಮ್ಮಿದ.

## 115.14 ಸ್ಟ್ಯಾಲಿನ್‌ನಿಂದ ಪಕ್ಷದ ನಿಯಂತ್ರಣ

ಪಕ್ಷದ ಹದಿನಾಲ್ಕನೇ ಸಮಾವೇಶ ಸ್ಟ್ಯಾಲಿನ್ನನ ಯೋಜನೆಯನ್ನು ಒಪ್ಪಿಕೊಂಡುದರಿಂದ ಟ್ರಾಟಸ್ಕಿ ಮೂಲೆಗುಂಪಾದ ಎಂಬುದು ಅದರ ಅರ್ಥವಲ್ಲ. ಮೋತೀಖಾನೆಯ ಇಲಾಖೆಯ ಮೇಲ್ವಿಚಾರಣೆಯ ಹುದ್ದೆಯಿಂದ ವಜಾಗೊಂಡ ಟ್ರಾಟಸ್ಕಿ ಬಲಹೀನನಾಗಿದ್ದು ನಿಜ. ಆದರೆ ಸಮಾವೇಶದಲ್ಲಿ ಟ್ರಾಟಸ್ಕಿಯನ್ನು ಬೆಂಬಲಿಸಿದ ಕಮೆನೆವ್ ಮತ್ತು ಜಿರೋವಿವ್ ಪಾಲಿಟ್‌ಬ್ಯೂರೋದಲ್ಲಿ ಸ್ಟ್ಯಾಲಿನ್ನನ ವಿರುದ್ಧ ಪ್ರತ್ಯೇಕ ಗುಂಪನ್ನೇ ರಚಿಸಿದರು. ಸ್ಟ್ಯಾಲಿನ್ ಪ್ರತಿಯಾಗಿ ಬುಖನಿನ್, ಟಾಮ್‌ಸ್ಕಿ ಮತ್ತು ಟೈಕೋವ್‌ರೊಡಗೂಡಿ ಪ್ರತ್ಯೇಕ ಗುಂಪನ್ನು ರಚಿಸಿದ. 1926 ರಲ್ಲಿ ಪಾಲೀಟ್‌ಬ್ಯೂರೋಗೆ ನಡೆದ ಚುನಾವಣೆಯಲ್ಲಿ ವೋರೋಶಿಟೋವ್, ಕಲಿನಿನ್ ಮತ್ತು ಮೋಲೋಟೋವ್ ಚುನಾಯಿತರಾಗುವಂತೆ ನೋಡಿಕೊಂಡ. 1927 ರಲ್ಲಿ ಟ್ರಾಟಸ್ಕಿಯನ್ನು ಪಾಲಿಟ್‌ಬ್ಯೂರೋದಿಂದ ವಜಾಮಾಡಲಾಯಿತು. 1927 ರ ಡಿಸೆಂಬರ್‌ನಲ್ಲಿ ಪಕ್ಷದ ಹದಿನೈದನೇ ಸಮಾವೇಶದಲ್ಲಿ ಪಕ್ಷದಿಂದಲೇ ಉಚ್ಚಾಟಿಸಲಾಯಿತು. 1928 ರ ಜನವರಿಯಲ್ಲಿ ತುರ್ಕಿಸ್ಥಾನದ ಆಲ್ಮ ಆಟ ಎಂಬಲ್ಲಿಗೆ ಗಡೀ ಪಾರುಮಾಡಲಾಯಿತು. ಟ್ರಾಟಸ್ಕಿ ಅಲ್ಲಿಯೂ ಭೂಗತ ಚಳುವಳಿಯನ್ನು ಹುಟ್ಟುಹಾಕಿದಾಗ ಆತನನ್ನು 1929 ರ ಜನವರಿಯಲ್ಲಿ ದೇಶದಿಂದಲೇ ಉಚ್ಚಾಟಿಸಲಾಯಿತು. ಪಕ್ಷ ವಿರೋಧೀ ಚಟುವಟಿಕೆಗಳಿಗಾಗಿ ಉಳಿದ ಸದಸ್ಯರನ್ನು ಸಹ ಪಕ್ಷದಿಂದ ಉಚ್ಚಾಟಿಸಲಾಯಿತು. 1927 ರ ಅಂತ್ಯದ ವೇಳೆಗೆ ಸ್ಟ್ಯಾಲಿನ್ ಪಕ್ಷದ ಪೂರ್ಣ ನಿಯಂತ್ರಣವನ್ನೂ ಪಡೆದ. ಹಾಗೆಯೇ ರಾಜ್ಯಯಂತ್ರದ ನಿಯಂತ್ರಣಾಧಿಕಾರವೂ ಲಭಿಸಿತು.

## 115.15 ಸಮಾಜವಾದದ ಪ್ರಚಾರಕ್ಕಾಗಿ ಕ್ರಮ

ಪಕ್ಷದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಸ್ಟ್ಯಾಲಿನ್ ದೇಶದಲ್ಲಿ ಸಮಾಜವಾದದ ಪ್ರಚಾರ ಕಾರ್ಯವನ್ನು ಕೈಗೊಂಡನು. 1927 ರ ಡಿಸೆಂಬರ್‌ನಲ್ಲಿ ನಡೆದ ಪಕ್ಷದ 15ನೇ ಸಮಾವೇಶದಲ್ಲಿ ಶೀಘ್ರ ಕೈಗಾರಿಕೀಕರಣದ ಯೋಜನೆಗೆ ಅಂಗೀಕಾರವನ್ನು ಪಡೆದಿದ್ದನು. ಪ್ರಥಮ

ಪಂಚವಾರ್ಷಿಕ ಯೋಜನೆಯೆಂದು ಜನಪ್ರಿಯವಾದ ಈ ಯೋಜನೆಗೆ ಮೂರು ಬಿಲಿಯನ್ ಡಾಲರುಗಳು ಖರ್ಚಾಗುವುದೆಂದು ನಿರೀಕ್ಷಿಸಲಾಯಿತು. ಯೋಜನೆಗೆ ಸಂಬಂಧಿಸಿದ ಕಾರ್ಯ 1928 ರ ಅಕ್ಟೋಬರ್ 1 ರಂದು ಆರಂಭವಾಗಿ 1933 ರ ಸೆಪ್ಟೆಂಬರ್ 30 ರಂದು ಮುಕ್ತಾಯಗೊಳ್ಳುವುದೆಂದು ನಿರ್ಧಾರವಾಯಿತು. ಕೃಷಿ, ಶಿಕ್ಷಣ, ಸಾರಿಗೆ, ಗಣಿಗಾರಿಕೆ, ಮೀನುಗಾರಿಕೆ, ಅರಣ್ಯೀಕರಣ, ಕೈಗಾರಿಕೆ, ಸಾರ್ವಜನಿಕ ಆರೋಗ್ಯ ಹೀಗೆ ಸೋವಿಯತ್ ಒಕ್ಕೂಟದ ಜನಜೀವನದ ಎಲ್ಲ ರಂಗಗಳನ್ನು ತಟ್ಟುವಂತಹ ಯೋಜನೆ ಅದಾಗಿತ್ತು. ಯೋಜನೆಯ ಅಂತ್ಯದ ವೇಳೆಗೆ ಸಮಾಜವಾದೀ ಕೈಗಾರಿಕಾ ಸಮಾಜ ಸೃಷ್ಟಿಯಾಗಬೇಕೆಂಬುದು ಸ್ಟ್ಯಾಲಿನ್ನನ ಉದ್ದೇಶವಾಗಿತ್ತು.

## 115.16 ಪ್ರಥಮ ಪಂಚವಾರ್ಷಿಕ ಯೋಜನೆ *(1928-1932)*

ಕೈಗಾರಿಕಾ ಕ್ಷೇತ್ರದಲ್ಲಿ ಖಾಸಗೀ ಕೈಗಾರಿಕೋದ್ಯಮಗಳನ್ನು ರದ್ದುಗೊಳಿಸಲಾಯಿತು. ಹಾಗೆಯೇ ರಾಷ್ಟ್ರೀಯ ಕೈಗಾರಿಕೆಗಳನ್ನು ವಿಸ್ತರಿಸಲು ಕ್ರಮಕೈಗೊಳ್ಳಬೇಕಾಗಿತ್ತು. ವಿದ್ಯುಚ್ಛಕ್ತಿ, ಕಲ್ಲಿದ್ದಲು, ಕಬ್ಬಿಣ, ತೈಲ ಮೊದಲಾದ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿತ್ತು. ಸುಮಾರು 10,000 ಮೈಲಿಗಳುದ್ದದ ರೈಲ್ವೆ ಮಾರ್ಗಗಳನ್ನು ನಿರ್ಮಾಣ ಮಾಡಬೇಕಾಗಿತ್ತು. ಕಾರ್ಖಾನೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ನುರಿತ ಕಾರ್ಮಿಕರು, ಅಭಿಯಂತ್ರರು ಮತ್ತು ನಿಪುಣ ವ್ಯವಸ್ಥಾಪಕರು ಬೇಕಾಗಿದ್ದರು. ಕಾರ್ಮಿಕರಿಗೆ ಅನುಭವದ ತರಬೇತಿ ನೀಡಲು ವಿಶೇಷ ಶಾಲೆಗಳನ್ನು ಸ್ಥಾಪಿಸಲಾಯಿತು. ವಿಶ್ವವಿದ್ಯಾನಿಲಯಗಳಲ್ಲಿ ತಾಂತ್ರಿಕ ಪದವಿಗಳಿಗಾಗಿ ಹೆಚ್ಚಿನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಯಿತು.

ಕಾರ್ಮಿಕರು ತಮ್ಮ ಕಾರ್ಯದತ್ತ ಪೂರ್ಣ ತಲ್ಲೀನರಾಗಿರುವಂತೆ ಮಾಡಲು 'ಬಿಡಿಗೂಲಿ ಗುತ್ತಿಗೆ ವೇತನ' ಪದ್ಧತಿಯನ್ನು ಆರಂಭಿಸಲಾಯಿತು. ಸಾಧಾರಣ ಮಟ್ಟಕ್ಕಿಂತ ಹೆಚ್ಚು ಉತ್ಪಾದಿಸಿದವರಿಗೆ ಹೆಚ್ಚಿನ ಉತ್ಪಾದನೆಗನುಗುಣವಾಗಿ ಹೆಚ್ಚಿನ ವೇತನ ನೀಡಲಾಯಿತು. ಕೈಗಾರಿಕಾ ಘಟಕಗಳು ಗುರಿಯನ್ನು ಮೀರಿ ಉತ್ಪಾದಿಸಿದಲ್ಲಿ ಅಧೀಕ್ಷಕರು ಮತ್ತು ನಿರ್ದೇಶಕರಿಗೆ ಬೋನಸ್ ನೀಡಲಾಯಿತು. ಮೂಲ ಕೈಗಾರಿಕೆಗಳ ವಿಸ್ತರಣೆ ಹಾಗೂ ಆಧುನೀಕರಣಕ್ಕಾಗಿ ಈ ಯೋಜನೆಯ ಅವಧಿಯಲ್ಲಿ ಹೆಚ್ಚಿನ ಗಮನ ಹರಿಸಲಾಯಿತು. ಹಿಂದುಳಿದ ಪ್ರದೇಶಗಳಲ್ಲಿ ಪ್ರಕೃತಿ ಸಂಪತ್ತಿನ ಮೂಲಗಳನ್ನು ನಿರ್ಲಕ್ಷಿಸಿದ್ದಲ್ಲಿ, ಅಂತಹ ಪ್ರದೇಶಗಳ ಅಭಿವೃದ್ಧಿಗೂ ಆದ್ಯತೆ ನೀಡಲಾಯಿತು.

ನಾಲ್ಕು ವರ್ಷಗಳಲ್ಲಿಯೇ ಸುಮಾರು 1500 ಕೈಗಾರಿಕಾ ಘಟಕಗಳು ಸ್ಥಾಪನೆಗೊಂಡವು. ಪರಿಣಾಮವಾಗಿ ರಷ್ಯಾದಲ್ಲಿ ಕೈಗಾರಿಕೋತ್ಪನ್ನ ದ್ವಿಗುಣಗೊಂಡಿತು. ಕೈಗಾರಿಕೀಕರಣದ ನಿಟ್ಟಿನಲ್ಲಿ ಅಪಾರ ಪ್ರಗತಿಯನ್ನು ಸಾಧಿಸಲಾಯಿತು. ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಈ ಯೋಜನೆಯ ಅವಧಿಯಲ್ಲಿ ಕೃಷಿಗೊಳಪಡಿಸಬೇಕಾದ ಜಮೀನನ್ನು ವಿಸ್ತರಿಸಲು ಬೆಂಬಲ ನೀಡಲಾಯಿತು. ಯಂತ್ರೀಕರಣಗೊಳಿಸಲು ಆದ್ಯತೆ ನೀಡಲಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಧಿಸಬೇಕಾದ ಗುರಿಯನ್ನು ಒಂಬತ್ತು ತಿಂಗಳ ಮುಂಚಿತವಾಗಿಯೇ ಸಾಧಿಸಲಾಯಿತೆಂದು ರಷ್ಯಾದ ನಾಯಕರು ಹೇಳಿಕೊಂಡರು. ಪ್ರಥಮ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿದ ಕಾರ್ಯವನ್ನಾರಂಭಿಸಲಾಯಿತು. ಅದರ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಸಿದ್ಧಗೊಳಿಸಲಾಯಿತು.

### *115.16.1 ದ್ವಿತೀಯ ಪಂಚವಾರ್ಷಿಕ ಯೋಜನೆ (1933-1937)*

ವ್ಯಾಪ್ತಿಯಲ್ಲಿ ಈ ಯೋಜನೆ ಪ್ರಥಮ ಯೋಜನೆಯನ್ನು ಮೀರಿಸಿತು. ಪ್ರಥಮ ಯೋಜನೆ ಪ್ರಮಾಣಕ್ಕೆ ಆದ್ಯತೆ ನೀಡಿದರೆ ದ್ವಿತೀಯ ಪಂಚವಾರ್ಷಿಕ ಯೋಜನೆ ಗುಣಮಟ್ಟಕ್ಕೆ ಆದ್ಯತೆ ನೀಡಿತು.

ವಾಸ್ತವಾಂಶಕ್ಕೆ ಜೋತುಬಿದ್ದು ಆಡಳಿತದ ವಿಕೇಂದ್ರಿಕರಣಕ್ಕೆ ಪ್ರಯತ್ನಿಸಲಾಯಿತು. ಉತ್ಪಾದನೆಯನ್ನು ಹೆಚ್ಚಿಸುವ ಮೂಲ ಗುರಿಯನ್ನು ಉಳಿಸಿಕೊಳ್ಳಲಾಯಿತು. ವರ್ಗರಹಿತ ಸಮಾಜವಾದೀ ಸಮಾಜದ ಕಾಳಜಿಯನ್ನೂ ಉಳಿಸಿಕೊಳ್ಳಲಾಯಿತು. ಜೊತೆಗೆ ದುಡಿಮೆಗಾರರ ಜೀವನ ಮಟ್ಟವನ್ನು ಉತ್ತಮಪಡಿಸಿ, ಆರೋಗ್ಯದ ರಕ್ಷಣೆಯ ಭರವಸೆ ನೀಡಿ ಅವರನ್ನು ವಿದ್ಯಾವಂತರನ್ನಾಗಿಸುವುದರ ಕಡೆಗೂ ಗಮನ ಹರಿಸಲಾಯಿತು. ಸಾಕಷ್ಟು ಸಾರಿಗೆ ಸೌಲಭ್ಯವನ್ನು ಕಲ್ಪಿಸುವುದರ ಕಡೆಗೂ ಗಮನ ನೀಡಲಾಯಿತು. ಅರಣ್ಯ, ಖನಿಜ, ಮತ್ಸ್ಯ ಮತ್ತು ಚರ್ಮ ಸಂಪತ್ತನ್ನು ಸೂಕ್ತ ರೀತಿಯಲ್ಲಿ ವಿನಿಯೋಗಿಸುವುದಕ್ಕೆ ವ್ಯವಸ್ಥೆ ಮಾಡಲಾಯಿತು.

### 115.16.2 *ತೃತೀಯ ಪಂಚವಾರ್ಷಿಕ ಯೋಜನೆ (1938-1942)*

ಈ ಯೋಜನೆಯನ್ನು 1938 ಮತ್ತು 1942 ರ ಅವಧಿಯಲ್ಲಿ ಕಾರ್ಯಗತಗೊಳಿಸುವ ಉದ್ದೇಶವಿತ್ತು. ಆದರೆ ದ್ವಿತೀಯ ಮಹಾಯುದ್ಧ ಆರಂಭವಾದುದರಿಂದ ಸಾಧ್ಯವಾಗಲಿಲ್ಲ. ತಾರತಮ್ಯ ವೇತನ ನೀತಿಯಿಂದಾಗಿ ದುಡಿಮೆಗಾರರಲ್ಲಿ ಹೆಚ್ಚಿನ ಅತೃಪ್ತಿ ತಲೆದೋರಿತು. ಪರಿಣಾಮವಾಗಿ ಕಳಪೆ ಗುಣಮಟ್ಟದ ವಸ್ತುಗಳು ಉತ್ಪಾದನೆಯಾದವು. ಸಮಾಜದಲ್ಲಿ ಹೊಸ ಅಧಿಕಾರಯುಕ್ತರ ವರ್ಗ ಸೃಷ್ಟಿಯಾಯಿತು. ಅನುಭೋಗಿ ವಸ್ತುಗಳ ಉತ್ಪಾದನೆ ಮತ್ತು ದುಡಿಮೆಗಾರರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವುದರ ಕಡೆಗೆ ಹೆಚ್ಚಿನ ಗಮನ ಹರಿಸಲಾಯಿತು. ಅದರ ಮೂಲಕ ತೃತೀಯ ಯೋಜನೆಯ ನ್ಯೂನತೆಗಳನ್ನು ಹೋಗಲಾಡಿಸಲು ಪ್ರಯತ್ನಿಸಲಾಯಿತು. ಕಾರ್ಮಿಕ ಶಿಸ್ತಿನ ಉಯಿಲು ಬಿಗಿಗೊಂಡಿತು. ತಂತ್ರಗಾರಿಕೆಯ ದೃಷ್ಟಿಯಿಂದ ಈ ಯೋಜನೆ ದೂರದ ಪ್ರದೇಶಗಳಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದರತ್ತ ಒಲವು ತೋರಿತು. ಐರೋಪ್ಯ ರಷ್ಯಾದಲ್ಲಿ ಕೈಗಾರಿಕೆಗಳ ಕೇಂದ್ರೀಕರಣವಾದುದು ಸೈನಿಕ ಸಾಮರ್ಥ್ಯ ಕುಗ್ಗಿದುದಕ್ಕೆ ಕಾರಣ ಎಂಬುದನ್ನು ರಷ್ಯಾದ ನಾಯಕರು ಅರಿತುಕೊಂಡರು. ಯೂರಲ್ ಪರ್ವತ ಶ್ರೇಣಿಯ ಪೂರ್ವಕ್ಕೆ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಅವು ಆಕ್ರಮಣರಹಿತ ಪ್ರದೇಶಗಳಾಗಿರಬಲ್ಲವು ಎಂಬುದು ತಿಳಿಯಿತು. ಅದೇ ವೇಳೆಗೆ ಜಪಾನ್‌ನ ವಿರುದ್ಧ ರಕ್ಷಣ ಬಲವನ್ನು ಹೆಚ್ಚಿಸಬಹುದೆಂಬ ಅಂಶವು ಮನವರಿಕೆಯಾಯಿತು. ರಷ್ಯಾದ ಸೈನ್ಯದ ಬೇಡಿಕೆಗಳನ್ನು ಈಡೇರಿಸಲು ಸೋವಿಯತ್ ದೂರ ಪ್ರಾಚ್ಯವನ್ನು ಅಭಿವೃದ್ಧಿಪಡಿಸುವುದೂ ಕೂಡ ಈ ಯೋಜನೆಯ ಉದ್ದೇಶವಾಗಿತ್ತು.

## 115.17 ಪಕ್ಷದ ಶುದ್ಧೀಕರಣ

ಪಂಚವಾರ್ಷಿಕ ಯೋಜನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ರಷ್ಯಾದ ಸರಕಾರ ಬಂಡವಾಳಶಾಹಿ ವಿಧಾನಗಳನ್ನೂ ಅಳವಡಿಸಿಕೊಂಡು ಯಶಸ್ವಿಯಾಯಿತು ಎಂಬುದು ಮನದಟ್ಟಾಗುತ್ತದೆ. ಬಿಡಿಗೂಲಿಗುತ್ತಿಗೆ, ಅಧಿಕ ಉತ್ಪಾದನೆಗೆ ಬೋನಸ್, ಸಾಮೂಹಿಕ ಕೃಷಿಯನ್ನನುಸರಿಸಿದ ರೈತರಿಗೆ ರಿಯಾಯಿತಿ, ಖಾಸಗೀ ಭೂಮಾಲೀಕತ್ವಕ್ಕೆ ಮಾನ್ಯತೆ, ಪೈಪೋಟಿಗೆ ಉತ್ತೇಜನ ನೀಡಿ ಉತ್ಪಾದನೆಯನ್ನು ಹೆಚ್ಚಿಸಿದ ಅಂಶಗಳು. ಈ ಬೆಳವಣಿಗೆಗಳನ್ನು ಕಮ್ಯೂನಿಸ್ಟರು ತೀವ್ರವಾಗಿ ವಿರೋಧಿಸಿದರು. ಮಾರ್ಕ್ಸ್‌ವಾದದ ಮೂಲ ತತ್ವಗಳಿಂದ ವಿಮುಖವಾದ ಬಗೆಯನ್ನು ಖಂಡಿಸಿದರು. ಸಾಮೂಹಿಕ ಕೃಷಿಕರು ಮತ್ತು ಬಿಡಿಗೂಲಿ ಕಾರ್ಮಿಕರನ್ನು ಒಳಗೊಂಡ ಮಧ್ಯಮವರ್ಗದ ಸೃಷ್ಟಿ ಕಾರ್ಲ್‌ಮಾರ್ಕ್ಸ್‌ನ ವರ್ಗರಹಿತ ಸಮಾಜದ ಪರಿಕಲ್ಪನೆಗೆ ವಿರುದ್ಧವಾದ ದಿಕ್ಕಿನಲ್ಲಿ ಸಾಗಿದ ಬೆಳವಣಿಗೆ ಎಂಬುದು ಅವರ ಅಭಿಪ್ರಾಯವಾಗಿತ್ತು. ನಾಯಕತ್ವವನ್ನು ಉಳಿಸಿಕೊಳ್ಳಲು ಲೆನಿನ್ನನೂ ಸಹ ಪಕ್ಷದ ಶುದ್ಧೀಕರಣದ ಕಾರ್ಯವನ್ನು ಕೈಗೊಂಡಿದ್ದಾನೆಂಬುದು ನಿಜ. ಆತನೂ ಕೂಡ ಭಿನ್ನಮತೀಯರನ್ನು ಪಕ್ಷದಿಂದ ಉಚ್ಚಾಟಿಸಿದ್ದ. ಆದರೆ ಸ್ಟ್ಯಾಲಿನ್ ಪಕ್ಷದ ಶುದ್ಧೀಕರಣದ ಕಾರ್ಯವನ್ನು ಭಾರೀ ಪ್ರಮಾಣದಲ್ಲಿ ಕೈಗೊಂಡ. 1933 ರಲ್ಲಿ ಪಕ್ಷದಿಂದ ಸುಮಾರು 800,000 ಸದಸ್ಯರನ್ನು ಹೊರಹಾಕಲಾಯಿತು. ಅವರಲ್ಲಿ ನಿಜವಾದ ಹಾಗೂ ಕಾಲ್ಪನಿಕ

ವಿರೋಧಿಗಳೂ ಸೇರಿದ್ದರು. ರಾಷ್ಟ್ರೀಯ ನಾಯಕತ್ವಕ್ಕೆ ತೀವ್ರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ ಉಕ್ರೇನಿಯಾ ಮತ್ತು ಬೈಲೋ ರಷ್ಯಾದ ಮೇಲೆ ಪಕ್ಷದ ಶುದ್ಧೀಕರಣದ ಪ್ರಯತ್ನ ಭಾರೀ ಪರಿಣಾಮ ಬೀರಿತು.

### *115.17.1 ಪಕ್ಷವನ್ನು ಶುದ್ಧೀಕರಣಗೊಳಿಸಲು ಕೈಗೊಂಡ ಕ್ರಮಗಳು*

1933 ರಲ್ಲಿಯೇ ಪಕ್ಷವನ್ನು ಶುದ್ಧೀಕರಣಗೊಳಿಸುವ ನಿಟ್ಟಿನಲ್ಲಿ ಮೊದಲ ಕ್ರಮವನ್ನು ಕೈಗೊಳ್ಳಲಾಯಿತು. ಆದರೆ 1934 ರಲ್ಲಿ ಸ್ಟ್ಯಾಲಿನ್ನನ ಸಹಪಾಠಿ ಕಿರೋವ್ ಕೊಲೆಯಾದ ಮೇಲೆ ಶುದ್ಧೀಕರಣದ ಕಾರ್ಯಕ್ಕೆ ಪ್ರಾಮುಖ್ಯತೆ ದೊರೆಯಿತು. 1936 ರಲ್ಲಿ ಪಕ್ಷದ ನಾಯಕರ ವಿರುದ್ಧದ ವಿಚಾರಣೆಯ ಸರಣಿ ಆರಂಭವಾಯಿತು. 1936 ರ ಆಗಸ್ಟ್ ತಿಂಗಳಲ್ಲಿ ನಡೆದ ವಿಚಾರಣೆಯಲ್ಲಿ ಜಿನೋವಿವ್, ಕಮೆನೆವ್, ಐ.ಎನ್. ಸ್ಮಿನೋವ್ ಮತ್ತು ಜಿ.ಇಯೆವ್‌ಡೋಕಿಮೋವ್ ಒಳಗೊಂಡಿದ್ದರು. ಇವರನ್ನು ಸ್ಟ್ಯಾಲಿನ್ನನ ವಿರುದ್ಧ ಭಯೋತ್ಪಾದಕ ಯೋಜನೆಯನ್ನು ವ್ಯವಸ್ಥೆಗೊಳಿಸಿದ ಹಾಗೂ ಸರಕಾರವನ್ನು ಉರುಳಿಸುವ ಸಂಚಿನಲ್ಲಿ ಭಾಗಿಯಾದ ಆರೋಪದ ಮೇಲೆ ವಿಚಾರಣೆಗೊಳಪಡಿಸಲಾಯಿತು.

ಎರಡನೇ ಹಂತದ ವಿಚಾರಣೆ 1937 ರ ಜನವರಿಯಲ್ಲಿ ಆರಂಭವಾಯಿತು. ಟ್ರಾಟಸ್ಕಿ-ಜಿನೋವಿವ್ ಬಣದ ಯೋಜನೆಗಳನ್ನು ಬಯಲಿಗೆಳೆಯುವುದೇ ಇದರ ಉದ್ದೇಶವಾಗಿತ್ತು. 1937 ರ ಜುಲೈ ತಿಂಗಳಲ್ಲಿ ಸ್ಟ್ಯಾಲಿನ್ ಸೈನ್ಯದ ಶುದ್ಧೀಕರಣದ ಕಾರ್ಯವನ್ನು ಕೈಗೊಂಡನು. ಕೆಂಪು ಸೈನ್ಯದಲ್ಲಿ ಭಾರೀ ಶುದ್ಧೀಕರಣದ ಕಾರ್ಯವನ್ನು ಕೈಗೊಳ್ಳಲಾಯಿತು. ಮೂರನೇ ಹಂತದ ವಿಚಾರಣೆ ವಿರೋಧ ಪಕ್ಷಗಳ ನಾಯಕರ ವಿರುದ್ಧ ಆರಂಭವಾಯಿತು. ಅವರಲ್ಲಿ ಬುಖರಿನ್, ರಿಕೋವ್, ಯೋಗೋಡ ಸೇರಿದ್ದರು. ಅವರ ಮೇಲೆ ಸ್ಟ್ಯಾಲಿನ್ ಮತ್ತಿತರ ನಾಯಕರ ವಿರುದ್ಧ ಪಿತೂರಿ ನಡೆಸಿದ ಆರೋಪವನ್ನು ಹೊರಿಸಲಾಯಿತು. ಜರ್ಮನಿ ಮತ್ತು ಜಪಾನಿನೊಂದಿಗೆ ಮಾತುಕತೆ ನಡೆಸಿ ಸೋವಿಯತ್ ಒಕ್ಕೂಟದ ಪತನದ ಬಗ್ಗೆ ಚರ್ಚಿಸಿದ ದೇಶದ್ರೋಹದ ಆರೋಪವನ್ನು ಹೊರಿಸಲಾಯಿತು.

ಪಕ್ಷದಿಂದ ದಂಗೆಕೋರ ಸದಸ್ಯರನ್ನು ಹೊರದೂಡುವ ಪ್ರಯತ್ನ, ಜರ್ಮನಿ ಮತ್ತು ಜಪಾನಿ ದೇಶಗಳೊಂದಿಗೆ ಪಿತೂರಿಯಲ್ಲಿ ಭಾಗವಹಿಸಿದುದಕ್ಕೆ ಸಂಬಂಧಿಸಿದುದಾಗಿತ್ತು. ರಷ್ಯಾದ ಪ್ರದೇಶಗಳನ್ನು ಬಿಟ್ಟುಕೊಡುವುದು ಮತ್ತು ಬಂಡವಾಳಶಾಹಿತ್ವವನ್ನು ಪುನಶ್ಚೇತನಗೊಳಿಸುವುದು ಅವರ ಉದ್ದೇಶಗಳಾಗಿದ್ದವೆಂದು ಸ್ಟ್ಯಾಲಿನ್ ನಂಬಿದ್ದ. ಆದರೆ ಸ್ಟ್ಯಾಲಿನ್ ಕ್ರಮಬದ್ಧವಾಗಿ ದುಷ್ಟಶಕ್ತಿಗಳನ್ನು ನಿರ್ಮೂಲನೆ ಮಾಡಿದನು. ಈ ಶುದ್ಧೀಕರಣದ ಪ್ರಯತ್ನದಿಂದಾಗಿ ಸೋವಿಯತ್ ಅಧಿಕಾರಿಗಳು ಗೊಂದಲಕ್ಕೊಳಗಾದರೂ, ಜನಸಾಮಾನ್ಯರಿಗೆ ಇದರಿಂದ ಯಾವುದೇ ರೀತಿಯ ತೊಂದರೆಯುಂಟಾಗಲಿಲ್ಲ. ಬದಲಾಗಿ ರಕ್ತಪಾತ ಮತ್ತು ಅತೀವ ದುಃಖಕ್ಕೆ ಕಾರಣರಾದ ಅಧಿಕಾರಿಗಳು ಮಾಡಿದ ಪಾಪದ ಫಲವನ್ನನುಭವಿಸುತ್ತಿದ್ದಾರೆ ಎಂದು ಭಾವಿಸಿದರು.

ವಿದೇಶಿಯ ರಾಷ್ಟ್ರಗಳಲ್ಲಿ ಶುದ್ಧೀಕರಣದ ಪ್ರಯತ್ನವು ಸಖೇದಾಶ್ಚರ್ಯವನ್ನುಂಟುಮಾಡಿತು. ಈ ಭಯಾನಕ ಅವಧಿಯಿಂದಾಗಿ ಸೋವಿಯತ್ ಒಕ್ಕೂಟದ ಬೆಂಬಲಿಗರೂ ಕೂಡ ಆಶ್ಚರ್ಯ ಚಕಿತರಾದರು. ಆದ್ದರಿಂದ ಸ್ಟ್ಯಾಲಿನ್ ಕ್ರಾಂತಿಗೆ ದ್ರೋಹ ಬಗೆದಿದ್ದಾನೆ ಎಂದು ಆರೋಪಿಸಿದರು. ಇದರಿಂದಾಗಿ ವಿದೇಶಗಳಲ್ಲಿ ಸ್ಟ್ಯಾಲಿನ್ನನ, ಸೋವಿಯತ್ ಒಕ್ಕೂಟದ ಪ್ರತಿಷ್ಠೆಗೆ ಕುಂದುಂಟಾಯಿತು. ರಷ್ಯಾವನ್ನು ವಿಶ್ವದ ರಾಜಕೀಯದಿಂದ ಪೂರ್ಣವಾಗಿ ಪ್ರತ್ಯೇಕಿಸಲಾಯಿತು.

## 115.18 1936 ರ ರಾಜ್ಯಾಂಗ

1918 ರಲ್ಲಿ ರಷ್ಯಾದ ಸಮಾಜವಾದಿ ಸಂಯುಕ್ತ ಸೋವಿಯತ್ ಗಣರಾಜ್ಯದ ರಾಜ್ಯಾಂಗ ಮತ್ತು 1924 ರಲ್ಲಿ ಸುಧಾರಿತ ರಾಜ್ಯಾಂಗವನ್ನು ಅನುಷ್ಠಾನಕ್ಕೆ ತಂದ ಮೇಲೆ ದೇಶದಲ್ಲಿ ಅನೇಕ ಬದಲಾವಣೆಗಳುಂಟಾಗಿದ್ದವು. ಆದ್ದರಿಂದ ರಾಜ್ಯಾಂಗವನ್ನು ಪೂರ್ಣವಾಗಿ ಬದಲಾಯಿಸುವ ಅಗತ್ಯವನ್ನು ಸ್ಟ್ಯಾಲಿನ್ ಮನಗಂಡನು. 1935 ರಲ್ಲಿ ರಾಜ್ಯಾಂಗವನ್ನು ರಚಿಸಲು ರಾಜ್ಯಾಂಗ ಸಮಿತಿಯನ್ನು ಕರೆಯಲಾಯಿತು. ಸ್ಟ್ಯಾಲಿನ್ನನೇ ನಾಯಕತ್ವ ವಹಿಸಿದ್ದ ಈ ಸಮಿತಿಯು ರಾಜ್ಯಾಂಗಕ್ಕೆ ಸಂಬಂಧಿಸಿದ ಹೊಸ ಯೋಜನೆಯನ್ನು ಮುಂದಿಟ್ಟಿತು. ಅದರ ಬಗ್ಗೆ ಅದ್ದೂರಿಯ ಪ್ರಚಾರ ನೀಡಲಾಯಿತು. ಸೋವಿಯತ್ ಒಕ್ಕೂಟದಾದ್ಯಂತ ಅದರ ಬಗ್ಗೆ ಚರ್ಚೆ ನಡೆಯಿತು. ಅಂತಿಮ ಕರಡು ರಾಜ್ಯಾಂಗವು ರೂಪುಗೊಂಡಿತು. ಈಗಾಗಲೇ ರಷ್ಯನ್ನರು ಸಾಧಿಸಿದ ಅಂಶಗಳನ್ನು ಅದರಲ್ಲಿ ಅಳವಡಿಸಲಾಯಿತು. ಸಮತಾವಾದದ ಸಾಧನೆಯ ಬಗ್ಗೆ ಒತ್ತಿ ಹೇಳಲಾಯಿತು. ಸ್ಟ್ಯಾಲಿನ್ ಇದನ್ನೇ 'ವಿಶ್ವದ ಏಕಮಾತ್ರ ಪ್ರಜಾ ತಾಂತ್ರಿಕ ರಾಜ್ಯಾಂಗ' ಎಂದು ವಿವರಿಸಿದನು.

### *115.18.1 ರಾಜ್ಯಾಂಗದ ಮುಖ್ಯಾಂಶಗಳು*

ಸ್ಟ್ಯಾಲಿನ್‌ನ ರಾಜ್ಯಾಂಗ ರಷ್ಯಾವನ್ನು 'ದುಡಿಮೆಗಾರರ ಮತ್ತು ರೈತರ ಸಮಾಜವಾದೀ ರಾಜ್ಯ'ವೆಂದು ವಿವರಿಸಿತು. ಸಣ್ಣ ಪ್ರಮಾಣದಲ್ಲಿ ಖಾಸಗೀ ಅರ್ಥ ವ್ಯವಸ್ಥೆಗೆ ಅನುವು ಮಾಡಿಕೊಟ್ಟು ರಾಜ್ಯಾಂಗವು ಇತರ ಕಡೆಗಳಲ್ಲಿ ನಡೆಯುತ್ತಿದ್ದ ಕಾರ್ಮಿಕರ ಶೋಷಣೆಯನ್ನು ತಪ್ಪಿಸಿತು. ರಾಜಕೀಯ ವ್ಯವಸ್ಥೆಯಲ್ಲಿ ಸಂಯುಕ್ತ ಪದ್ಧತಿಯನ್ನು ಜಾರಿಗೆ ತಂದು ವ್ಯಕ್ತಿಗತ ಗಣರಾಜ್ಯಗಳು ಸ್ವತಂತ್ರವಾಗಿ ವ್ಯವಹರಿಸುವುದಕ್ಕೆ ಅವಕಾಶ ಕಲ್ಪಿಸಿತು. ಪ್ರಜೆಗಳ ಕೆಲವು ಮೂಲಭೂತ ಹಕ್ಕುಗಳನ್ನು ಖಾತರಿಗೊಳಿಸಲಾಯಿತು. ಅಂತಹ ಹಕ್ಕುಗಳಲ್ಲಿ ವಂಶಗಳ ಸಮಾನತೆಯ ಹಕ್ಕು ಕೂಡ ಸೇರಿತ್ತು. ರಷ್ಯಾದ ಮತದಾನದ ವ್ಯವಸ್ಥೆಯಲ್ಲೂ ಸುಧಾರಣೆಗಳನ್ನು ಸೂಚಿಸಲಾಯಿತು. ಚರ್ಚಿನ ಆಡಳಿತದಲ್ಲೂ ಬದಲಾವಣೆಗೆ ಅವಕಾಶವನ್ನು ಕಲ್ಪಿಸಿತು. ಈ ರಾಜ್ಯಾಂಗವು ಪ್ರಜಾಪ್ರಭುತ್ವಕ್ಕೆ ಅಡಿಗಲ್ಲನ್ನು ಹಾಕಿದರೂ ಸಮಾಜವಾದಕ್ಕಿಂತ ಭಿನ್ನವಾದ ಪ್ರಜಾಪ್ರಭುತ್ವವನ್ನೇನೂ ಸ್ಟ್ಯಾಲಿನ್ ಸಾಧಿಸಲಿಲ್ಲ.

## 115.19 ಸ್ಟ್ಯಾಲಿನ್‌ನ ಕಾಲದಲ್ಲಿ ಶಿಕ್ಷಣ

ಸ್ಟ್ಯಾಲಿನ್ನನ ಕಾಲದಲ್ಲಿ ಭಾರೀ ಪ್ರಮಾಣದ ಶೈಕ್ಷಣಿಕ ಪ್ರಗತಿ ಕಂಡು ಬಂದಿತು. ಅನಕ್ಷರತೆಯನ್ನು ಹೋಗಲಾಡಿಸಲು ಪ್ರಯತ್ನಗಳು ನಡೆದವು. 1930 ರ ಆಗಸ್ಟ್‌ನಲ್ಲಿ ಜಾರಿಗೆ ಬಂದ ಕಾಯಿದೆಯು ಎಂಟು ವರ್ಷಗಳ ನಂತರದ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಶಿಕ್ಷಣ ನೀಡಬೇಕೆಂದು ನಿರ್ಬಂಧಿಸಿತು. ಶೈಕ್ಷಣಿಕ ಪದ್ಧತಿಯನ್ನು ಪುನರ್‌ವಿಮರ್ಶಿಸಲಾಯಿತು. ಇತಿಹಾಸ, ಬೀಜಗಣಿತ, ಭೂಗೋಳಶಾಸ್ತ್ರ ಮತ್ತು ಭಾಷೆಗಳ ಅಧ್ಯಯನಕ್ಕೆ ಆದ್ಯತೆ ನೀಡಲಾಯಿತು. ಉನ್ನತ ಶಿಕ್ಷಣ ಪದ್ಧತಿಯಲ್ಲಿ ವಿಶ್ವವಿದ್ಯಾನಿಲಯಗಳ ಕ್ರಮಗಳಿಗೆ ಬೆಂಬಲವಾಗಿ ಉನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಗಳನ್ನು ನುರಿತ ಕುಶಲ ಕರ್ಮಿಗಳಿಗೆ ತರಭೇತಿ ನೀಡುತ್ತಿದ್ದ ಕೈಗಾರಿಕೆಗಳ ಆಡಳಿತ ವ್ಯವಸ್ಥೆಯೊಂದಿಗೆ ಸೇರಿಸಲಾಯಿತು. ಉನ್ನತ ಶಿಕ್ಷಣದಲ್ಲಿ ರಾಜಕೀಯ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಸೇನಾ ಶಿಕ್ಷಣಕ್ಕೂ ಪ್ರಾಮುಖ್ಯತೆ ನೀಡಲಾಯಿತು. ಪ್ರತೀ ಶಿಕ್ಷಣ ಸಂಸ್ಥೆಗೂ ವಿದ್ಯಾರ್ಥಿಗಳಿಗೆ ಯುದ್ಧ ಕಲೆಯಲ್ಲಿ ತರಭೇತಿ ನೀಡುವ ಜವಾಬ್ದಾರಿಯನ್ನು ವಹಿಸಲಾಯಿತು. ಪರಿಣಾಮವಾಗಿ ಸ್ಟ್ಯಾಲಿನ್ನನ ಕಾಲದಲ್ಲಿ ಅನಕ್ಷರತೆ ಪೂರ್ಣ ಮಾಯವಾಯಿತು. ವಾಸ್ತವವಾಗಿ ಶೈಕ್ಷಣಿಕ ಕ್ಷೇತ್ರದ ಈ ಪ್ರಗತಿಯೇ ಕೈಗಾರಿಕೀಕರಣದ ಯೋಜನೆಗಳನ್ನು ಜೀವಂತವಾಗಿರಿಸಿದುದು.

### 115.19.1 ಸ್ಟ್ಯಾಲಿನ್ನನ ಕಾಲದಲ್ಲಿ ಧರ್ಮ

ಸ್ಟ್ಯಾಲಿನ್ನನ ಆಳ್ವಿಕೆಯ ಕಾಲದಲ್ಲಿ ಧರ್ಮದ ಬಗ್ಗೆ ಕಮ್ಯೂನಿಸ್ಟರ ನಿಲುವು ಬದಲಾದುದಕ್ಕೆ ಪುರಾವೆಗಳಿಲ್ಲ. ಆತ ಪಾದ್ರಿಗಳನ್ನು ಬಲಹೀನಗೊಳಿಸುವುದಕ್ಕಾಗಿ ಚರ್ಚಿನ ವಿರುದ್ಧ ಕ್ರಮಗಳನ್ನು ಕೈಗೊಂಡನು. ಪಕ್ಷದ ಶುದ್ಧೀಕರಣದ ವರ್ಷಗಳಲ್ಲಿ ಸಾಕಷ್ಟು ಮಂದಿ ಪಾದ್ರಿಗಳನ್ನು ಪಕ್ಷದಿಂದ ಹೊರಹಾಕಿದ್ದ. ಸೆಮಿನರಿಗಳಲ್ಲಿ ಮತೀಯ ಶಿಕ್ಷಣವನ್ನು ಹತ್ತಿಕ್ಕಿದನು. ಹಳ್ಳಿ ಮತ್ತು ನಗರಗಳಲ್ಲಿ ಸಾಕಷ್ಟು ಸಂಖ್ಯೆಯ ಚರ್ಚುಗಳನ್ನು ಮುಚ್ಚಿಸಿದನು. ಚರ್ಚ್‌ಗಳ ಪ್ರಭಾವವನ್ನು ಕಡಿಮೆ ಮಾಡುವುದಕ್ಕಾಗಿ ಧಾರ್ಮಿಕ ಶಿಕ್ಷಣದ ಹಕ್ಕನ್ನೂ ಕುಂಠಿತಗೊಳಿಸಿದನು. ಧಾರ್ಮಿಕ-ವಿರೋಧೀ ಪ್ರಚಾರವನ್ನು ಸರಕಾರವೇ ಕೈಗೊಂಡಿತು. 1936ರ ರಾಜ್ಯಾಂಗ ಆರಾಧನಾ ಸ್ವಾತಂತ್ರ್ಯವನ್ನು ನೀಡಿದ ಹಾಗೆ ಧರ್ಮವಿರೋಧೀ ಪ್ರಚಾರ ಸ್ವಾತಂತ್ರ್ಯಕ್ಕೂ ಅವಕಾಶ ನೀಡಿತು. ಸಂಪೂರ್ಣ ರಾಜ್ಯಯಂತ್ರವೇ ಧರ್ಮ-ವಿರೋಧೀ ಪ್ರಚಾರಕ್ಕೆ ಮೀಸಲಾಗಿತ್ತು. 1928 ಮತ್ತು 1940 ರ ಅವಧಿಯಲ್ಲಿ ಮುದ್ರಣದ ಕಂಪೆನಿಯೊಂದು ಧರ್ಮ-ವಿರೋಧೀ ಸಾಹಿತ್ಯಕ್ಕೆ ಸಂಬಂಧಿಸಿದ 1832 ಶೀರ್ಷಿಕೆಗಳನ್ನು ಪ್ರಕಟಿಸಿತು. ಇವುಗಳನ್ನು ಶಾಲೆಗಳಲ್ಲಿ ಹಂಚಲಾಯಿತು.

ಈ ಕ್ರಮಗಳನ್ನು ಕ್ರೈಸ್ತಮತ ಮಾತ್ರವಲ್ಲದೆ, ಇಸ್ಲಾಮ್ ಮತ್ತು ಜಡಾಯಿಸಮ್ ವಿರುದ್ಧವೂ ಕೈಗೊಳ್ಳಲಾಯಿತು. ಯು.ಎಫ್.ಎ ನಲ್ಲಿ ಇಸ್ಲಾಮಿಕ್ ಆಡಳಿತದ ಕೇಂದ್ರವನ್ನು ಮುಚ್ಚಲಾಯಿತು. ಇಸ್ಲಾಮಿನ ಅನುಯಾಯಿಗಳಿಂದ ನಡೆಯುತ್ತಿದ್ದ ಅನೇಕ ಶಾಲೆಗಳು ಮತ್ತು ಮಸೀದಿಗಳು ಮುಚ್ಚಲ್ಪಟ್ಟವು. ಮತೀಯ ಸಾಹಿತ್ಯದ ಪ್ರಕಟಣೆ ಮತ್ತು ಕುರಾನಿನ ವಿವರಣೆಗಳನ್ನು ಬಹಿಷ್ಕರಿಸಲಾಯಿತು. ಅರಬ್ಬೀ ಸಾಹಿತ್ಯವನ್ನು ಸಹ ನಿಷೇದಿಸಲಾಯಿತು. ಯಹೂದ್ಯರು ಬಳಸುತ್ತಿದ್ದ ಹಿಬ್ರೂ ಭಾಷೆಯನ್ನೂ ಸಹ ನಿಷೇದಿಸಲಾಯಿತು.

### 115.19.2 ಸಮಾಜ ಕಲ್ಯಾಣ

ಸ್ಟ್ಯಾಲಿನ್ನನ ಕಾಲದಲ್ಲಿ ಒಂದು ವ್ಯವಸ್ಥಿತ ಸಮಾಜ ಕಲ್ಯಾಣ ಕಾರ್ಯಕ್ರಮವನ್ನು ರೂಪಿಸಲಾಯಿತು. ಕಾಯಿಲೆ, ಅಂಗವಿಕಲತೆ, ವೃದ್ಧಾಪ್ಯ ಮೊದಲಾದವುಗಳಿಗೆ ಸಂಬಂಧಿಸಿದ ವೈದ್ಯಕೀಯ ಹಾಗೂ ಆರೋಗ್ಯಭಾಗ್ಯದ ಯೋಜನೆಗಳನ್ನು ಕೈಗೊಳ್ಳಲಾಯಿತು. ದುಡಿಮೆಗಾರರ ಮನರಂಜನೆಗಾಗಿ ಉದ್ಯಾನವನಗಳು, ವಿಶ್ರಾಂತಿಗೃಹಗಳು, ಸಾಂಸ್ಕೃತಿಕ ಕೇಂದ್ರಗಳು ಸ್ಥಾಪನೆಗೊಂಡವು. ನರ್ಸರಿ ಶಾಲೆಗಳು, ಅಂಗನವಾಡಿಗಳು, ಉಪಹಾರಮಂದಿರಗಳು ಸ್ಥಾಪನೆಗೊಂಡುದರಿಂದಾಗಿ ಮಹಿಳೆಯರಿಗೆ ದುಡಿಯಲು ಅನುಕೂಲವಾದುದಲ್ಲದೆ, ಪಂಚವಾರ್ಷಿಕ ಯೋಜನೆಗಳಿಗೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ದೊರೆತರು. ಈ ಎಲ್ಲಾ ಕ್ರಮಗಳಿಂದಾಗಿ ವ್ಯಕ್ತಿಗತ ಕುಟುಂಬ ಪದ್ಧತಿ ಬಲಹೀನಗೊಂಡು ದುಡಿಮೆಗಾರರು ಮತ್ತು ರೈತರು ಸಮೂಹ ಜೀವನ ನಡೆಸುವುದು ಸಾಧ್ಯವಾಯಿತು. ಆದರೆ ದುಡಿಮೆಗಾರರ ಮತ್ತು ರೈತರ ಜೀವನ ಮಟ್ಟ ಉತ್ತಮಗೊಳ್ಳಲು ಇನ್ನೂ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು.

### 115.19.3 ಬೌದ್ಧಿಕ ಜೀವನದ ಮೇಲಿನ ನಿಯಂತ್ರಣ

1930 ರ ವೇಳೆಗೆ ಜಾಗತಿಕ ಕ್ರಾಂತಿ ನಡೆಯುವ ಸಾಧ್ಯತೆ ಕಡಿಮೆ ಎಂಬುದು ಮನವರಿಕೆಯಾಯಿತು. ಜೊತೆಗೆ ಆ ಕಲ್ಪನೆ ಹಿಂದಿನ ವರ್ಷಗಳಂತೆ ಪ್ರಾಮುಖ್ಯತೆ ಪಡೆಯಲಿಲ್ಲ. ಆದುದರಿಂದ 'ಸೋವಿಯತ್ ರಾಷ್ಟ್ರೀಯತೆ' ಯನ್ನೇ ಪ್ರೋತ್ಸಾಹಿಸುವ ಎಲ್ಲಾ ಪ್ರಯತ್ನಗಳೂ ನಡೆದವು. 'ಸಮಾಜವಾದೀ ವಾಸ್ತವವಾದಿ' ಗಳ ವಿಧಾನಗಳನ್ನು ಅನುಸರಿಸುವಂತೆ ಸೋವಿಯತ್ ಬರವಣಿಗೆಕಾರರನ್ನು ಪ್ರೋತ್ಸಾಹಿಸಲಾಯಿತು. ಕಲಾಕಾರರು ಮತ್ತು ಬರವಣಿಗೆಕಾರರು ತಮ್ಮ ಕೃತಿಗಳನ್ನು ಸೋವಿಯತ್ ಸಮಾಜ ಮತ್ತು ಸಾಮಾನ್ಯ ಸಾಂಸ್ಕೃತಿಕ ಮೌಲ್ಯಗಳಿಗೆ ಸಂಬಂಧಿಸಿದಂತೆ

ಜನರಿಗೆ ತಿಳುವಳಿಕೆ ನೀಡುವ ಸಾಧನಗಳನ್ನಾಗಿ ಬಳಸಿಕೊಳ್ಳಬೇಕಾಯಿತು. ಮೈಕೇಲ್ ಶೋಲೋಕೋವ್, ಅಲೆಕ್ಸಿಸ್ ಟಾಲ್‌ಸ್ಟಾಯ್ ಮತ್ತು ನಿಕೊಲಸ್ ಆಸ್ಟ್ರಿಯೋಸ್ಕಿ ಈ ಕಾಲದ ಪ್ರಮುಖ ಬರವಣಿಗೆಕಾರರು. ಸಂಗೀತದ ಕ್ಷೇತ್ರದಲ್ಲೂ ಸಾಕಷ್ಟು ಪ್ರಗತಿ ಕಂಡುಬಂದಿತು.

## 115.20 ಮಾದರಿ ಪ್ರಶ್ನೆಗಳು

1. ಸೋವಿಯತ್ ರಷ್ಯಾಕ್ಕೆ ಲೆನಿನ್ ಸಲ್ಲಿಸಿದ ಸೇವೆಗಳನ್ನು ಮೌಲ್ಯೀಕರಿಸಿ.
2. ನವ ಆರ್ಥಿಕ ನೀತಿಯ ಮುಖ್ಯ ಲಕ್ಷಣಗಳನ್ನು ಚರ್ಚಿಸಿ.
3. ರಷ್ಯಾವನ್ನು ಪ್ರಬಲ ಕಮ್ಯೂನಿಸ್ಟ್ ದೇಶವನ್ನಾಗಿ ಪರಿವರ್ತಿಸುವಲ್ಲಿ ಸ್ಟ್ಯಾಲಿನ್ನನ ಪಾತ್ರವನ್ನು ಪರಿಶೀಲಿಸಿ.
4. ಸ್ಟ್ಯಾಲಿನ್ನನ ಪಂಚವಾರ್ಷಿಕ ಯೋಜನೆಗಳ ಪರಿಣಾಮಗಳನ್ನು ವಿವರಿಸಿ.
5. ರಷ್ಯನ್ನರ ಜೀವನದ ವಿವಿಧ ರಂಗಗಳಲ್ಲಿ ಸ್ಟ್ಯಾಲಿನ್ ನಿರ್ವಹಿಸಿದ ಪಾತ್ರವನ್ನು ಮೌಲ್ಯೀಕರಿಸಿ.

## 115.21 ಮುಂದಿನ ಅಧ್ಯಯನಕ್ಕಾಗಿ ಗ್ರಂಥಗಳು


| | | | |
|---|---|---|---|
| 1) | E.H. Carr......... | : | History of Soviet Russia ( 7 Vols) 1950 |
| 2) | Donald Treadgold | : | Twentieth Century Russia (1959) |
| 3) | Hugh Seton-Watson | : | From Lenin to Khrushchev (1960) |
| 4) | Louis Aragon | : | A History of USSR: From Lenin to Khrushchev (1964) |
| 5) | Robert Payne | : | The Life and Death of Lenin (1964) |
| 6) | Robert Conquest | : | The Great Terror; Stalin's purge of the Thirties (1968) |
| 7) | D.J. Dallin............ | : | From Purge to Co-existence (1964) |
| 8) | ಆರ್.ಜಿ. ಶಿವಣ್ಣ | : | ಆಧುನಿಕ ಯುರೋಪಿನ ಇತಿಹಾಸ |
| 9) | ರಾಮಲಿಂಗಪ್ಪ | : | ಯುರೋಪಿನ ಇತಿಹಾಸ |



ಮೂಲ : ಡಾ. ಸುಂದರರಾಜನ್

ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ

# ಟಿಪ್ಪಣಿಗಳು

# ಘಟಕ -116

## ಮುಸ್ಸೋಲಿನಿ ಮತ್ತು ಇಟಲಿಯ ಫ್ಯಾಸಿಸಂ

*ರಚನಾಕ್ರಮ*


116.0 ಉದ್ದೇಶಗಳು

116.1 ಪೀಠಿಕೆ

116.2 ಫ್ಯಾಸಿಸಂನ ಏಳಿಗೆ

116.3 ಮುಸ್ಸೋಲಿನಿಯ ಏಳಿಗೆ

116.3.1 ಫ್ಯಾಸಿಸಂನ ಗುರಿ ಮತ್ತು ನೀತಿಗಳು

116.3.2 ಮುಸ್ಸೋಲಿನಿಯ ವಿದೇಶಾಂಗ ನೀತಿ

116.3.3 ಇಟಲಿಯ ವಿದೇಶಾಂಗ ನೀತಿಯ ಉದ್ದೇಶಗಳು

116.4 ಆಗ್ನೇಯ ಯುರೋಪಿನ ಮೇಲಿನ ನಿಯಂತ್ರಣ

116.5 ತಿರಾನ ಒಪ್ಪಂದ (1926)

116.6 ಇಟಲಿಯಿಂದ ಅಬಿಸ್ಸೀನಿಯಾದ ಮೇಲಿನ ಧಾಳಿ

116.6.1 ಲೀಗ್ ಆಫ್ ನೇಷನ್ಸ್‌ನಿಂದ ಪ್ರತಿಭಟನೆ

116.6.2 ಅಬಿಸ್ಸೀನಿಯಾದ ಆಕ್ರಮಣದ ಪರಿಣಾಮ

116.7 ಆಸ್ಟ್ರಿಯಾದೊಂದಿಗಿನ ಸಂಬಂಧ

116.8 ಫ್ರಾನ್ಸ್‌ನತ್ತ ಮುನ್ನಡೆ

116.9 ಜರ್ಮನಿಯೊಂದಿಗಿನ ಸಂಬಂಧ

116.10 ಇಂಗ್ಲೆಂಡ್‌ನೊಂದಿಗಿನ ಸಂಬಂಧ

116.11 ಮುಸ್ಸೋಲಿನಿ ಮತ್ತು ಹಿಟ್ಲರ್

116.12 ದ್ವಿತೀಯ ಮಹಾಯುದ್ಧದ ಅವಧಿಯಲ್ಲಿ ಇಟಲಿ

116.13 ಫ್ಯಾಸ್ಸಿಸ್ಟ್ ಇಟಲಿಯ ಪತನ

116.14 ಮಾದರಿ ಪ್ರಶ್ನೆಗಳು

116.15 ಅಧ್ಯಯನಕ್ಕಾಗಿ ಗ್ರಂಥಗಳು

## 116.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ಈ ಕೆಳಗೆ ಪಟ್ಟಿ ಮಾಡಿದ ಅಂಶಗಳ ಪರಿಚಯವಾಗುತ್ತದೆ

1) ಇಟಲಿಯಲ್ಲಿ ಮುಸ್ಸೋಲಿನಿ ಮತ್ತು ಫ್ಯಾಸಿಸಂನ ಏಳಿಗೆ.

2) ವಿಶ್ವರಾಜಕೀಯದಲ್ಲಿ ಮುಸ್ಸೋಲಿನಿ ನಿರ್ವಹಿಸಿದ ಪಾತ್ರ

3) ಇಟಲಿಯ ವಿದೇಶಾಂಗ ನೀತಿ

4) ವಿವಿಧ ಐರೋಪ್ಯ ರಾಷ್ಟ್ರಗಳೊಂದಿಗಿನ ಸಂಬಂಧ ಮತ್ತು

5) ಮುಸ್ಸೋಲಿನಿ ಮತ್ತು ಫ್ಯಾಸ್ಸೀ ಪಕ್ಷದ ಪತನ.

## 116.1 ಪೀಠಿಕೆ

ಪ್ರಥಮ ಮಹಾಯುದ್ಧಾನಂತರ ಇಟಲಿಯಲ್ಲಿ ಅತೃಪ್ತಿ ಮತ್ತು ಅವ್ಯವಸ್ಥೆ ತಾಂಡವವಾಡುತ್ತಿತ್ತು. ಯುದ್ಧದಲ್ಲಿ ವಿಜಯಿಯಾದ ಮಿತ್ರಕೂಟವನ್ನೇ ಬೆಂಬಲಿಸಿ ಇಟಲಿ ಹೋರಾಡಿದ್ದರೂ ಯುದ್ಧದಿಂದ ಹೊರಬಂದ ಸೋತ ರಾಷ್ಟ್ರವೆನಿಸಿತ್ತು. ಶಾಂತಿ ಒಪ್ಪಂದದಿಂದ ಇಟಲಿಗೆ ಸಂತುಷ್ಟವಾಗಲಿಲ್ಲ. ಲಂಡನ್ ಒಪ್ಪಂದ ನೀಡಿದ್ದ ಭರವಸೆಯ ಪ್ರಕಾರ ಪ್ರದೇಶಗಳು ಲಭಿಸದಿದ್ದುದೇ ಅದಕ್ಕೆ ಮುಖ್ಯ ಕಾರಣವಾಗಿತ್ತು. ಇಟಲಿ ಮತ್ತು ಯುಗೋಸ್ಲಾವಿಯಾದ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿದ್ದುದರಿಂದ ಮಿತ್ರಕೂಟವು ಯುಗೋಸ್ಲಾವಿಯವನ್ನೇ ಬೆಂಬಲಿಸಿದಾಗ ಇಟಲಿಯನ್ನರು ತೀರಾ ನಿರಾಶೆಗೊಂಡರು. 1919 ರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಇಟಲಿ ಹೆಚ್ಚಿನದೇನೂ ಪಡೆಯಲಿಲ್ಲ. ಅತೃಪ್ತ, ಹತಾಶ ಇಟಲಿಯನ್ನರ ಆತ್ಮ ಗೌರವಕ್ಕೆ ಕೊಡಲಿಯ ಪೆಟ್ಟು ಬಿದ್ದಿತು.

ನೈತಿಕ ಸ್ಥೈರ್ಯ ಕಳೆದುಕೊಂಡ ಇಟಲಿಯ ಸಾರ್ವಜನಿಕರು ಶಾಂತಿ ಸಮ್ಮೇಳನದಲ್ಲಿ ನಿರೀಕ್ಷಿಸಿದ ಪ್ರತಿಫಲ ಬರದಿದ್ದುದಕ್ಕೆ ರಾಷ್ಟ್ರನಾಯಕರನ್ನು ದೂಷಿಸಿದರು. ಈ ತೆರನಾದ ಅತೃಪ್ತಿ ಮತ್ತು ಅವ್ಯವಸ್ಥೆ ಬೆನಿಟೋ ಮುಸ್ಸೋಲಿನಿಯ ನೇತೃತ್ವದಲ್ಲಿ ಫ್ಯಾಸ್ಸೀ ಆಡಳಿತಕ್ಕೆ ದಾರಿ ಮಾಡಿಕೊಟ್ಟಿತು.

## 116.2 ಫ್ಯಾಸಿಸಂನ ಏಳಿಗೆ

ಯುದ್ಧಾನಂತರದ ಸಮಸ್ಯೆಗಳನ್ನು ಪರಿಹರಿಸಲು ಇಟಲಿಯ ಸರಕಾರಕ್ಕೆ ಸಾಮರ್ಥ್ಯವಿರಲಿಲ್ಲ. ಸೈನ್ಯವನ್ನು ಹಿಂತೆಗೆದುಕೊಂಡದುದರಿಂದ ಸೈನಿಕರಲ್ಲಿ ನಿರುದ್ಯೋಗ ಹೆಚ್ಚಾಯಿತು. ಆರ್ಥಿಕವಾಗಿ ದಿವಾಳಿಯಾಗಿದ್ದ ದೇಶ ಉಪವಾಸ, ಹಣದುಬ್ಬರದ ಸ್ಥಿತಿಯನ್ನು ಎದುರಿಸಿತು. ಮುಷ್ಕರಗಳು, ಬೀಗಮುದ್ರೆಗಳು, ಜನರ ದಂಗೆಗಳು ಮನೆಮಾತಾಗಿದ್ದವು. ರಾಷ್ಟ್ರೀಯ ನಾಣ್ಯದ ಮೌಲ್ಯ ತೀವ್ರವಾಗಿ ಕುಸಿದು ಜೀವನದ ಬೆಲೆ ತುಟ್ಟಿಯಾಯಿತು. ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸರಕಾರ ಎಷ್ಟರಮಟ್ಟಿಗೆ ಅಸಹಾಯಕವಾಗಿತ್ತೆಂದರೆ, 1919 ಮತ್ತು 1922 ರ ಅವಧಿಯಲ್ಲಿ ಇಟಲಿಯಲ್ಲಿ ಆರು ಸಮ್ಮಿಶ್ರ ಸರಕಾರಗಳು ರಚನೆಗೊಂಡವು. ಈ ಎಲ್ಲಾ ಕಾರಣಗಳ ಪರಿಣಾಮವಾಗಿ ಫ್ಯಾಸಿಸಂ ಉದಯಿಸಿತು. ಗ್ಯಾಟ್ರೋನ್ ಹಾರ್ಡಿ ಇಟಲಿಯಲ್ಲಿ ಫ್ಯಾಸಿಸಂ ಬೆಳವಣಿಗೆಯನ್ನು ಕಂಡ ಸನ್ನವೇಶವನ್ನು ಹೀಗೆ ವಿವರಿಸಿದರು. "ಪ್ರಜಾತಾಂತ್ರಿಕ ಭಾವನೆಗಳು ಪರಿಣಾಮಕಾರಿ ಸಂಸದೀಯ ಸರಕಾರದ ಆಳ್ವಿಕೆಗೆ ಅನುವು ಮಾಡಿಕೊಡದ ನಿರಂಕುಶ ಸ್ಥಿತಿಯನ್ನು ನಿರ್ಮಾಣಮಾಡಿತು".

## 116.3 ಮುಸ್ಸೋಲಿನಿಯ ಏಳಿಗೆ

ದೇಶದಲ್ಲಿ ಹೆಚ್ಚಾಗುತ್ತಿದ್ದ ಅತೃಪ್ತಿಯನ್ನು ಮುಸ್ಸೋಲಿನಿ ಸೂಕ್ತ ರೀತಿಯಲ್ಲಿ ವಿನಿಯೋಗಿಸಿಕೊಂಡು ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದನು. 1883 ರಲ್ಲಿ ಮುಸ್ಸೋಲಿನಿ ಬಡಕುಟುಂಬವೊಂದರಲ್ಲಿ ಜನಿಸಿದನು. ತಂದೆ ಕಮ್ಮಾರನಾಗಿದ್ದರೆ, ತಾಯಿ ಶಾಲಾ ಅಧ್ಯಾಪಕಿಯಾಗಿದ್ದಳು. ಪ್ರಥಮ ಮಹಾಯುದ್ಧದಲ್ಲಿ ಇಟಲಿಯ ಸೈನ್ಯದಲ್ಲಿ ಯೋಧನಾಗಿ ಸೇವೆ ಸಲ್ಲಿಸಿದನು. ಯುದ್ಧಾನಂತರ ಯುವ ಇಟಲಿಯನ್ನರ ಸ್ವಯಂಸೇವಕ ತಂಡವನ್ನು ರಚಿಸಿದನು. ಅವರೇ 1919 ರಲ್ಲಿ ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಅವರು ಕಪ್ಪು ಅಂಗಿಯ ಸಮವಸ್ತ್ರವನ್ನು ಧರಿಸುತ್ತಿದ್ದುದರಿಂದ 'ಕಪ್ಪು ಅಂಗಿಯ ಯೋಧ'ರೆಂದು ಕರೆಯಲ್ಪಟ್ಟರು. ಮುಸ್ಸೋಲಿನಿ ಅವರನ್ನು ನಮ್ರ ಸೇವಕರನ್ನಾಗಿ ಶಿಸ್ತಿನ ಕಟ್ಟುಪಾಡಿಗೆ ಒಳಪಡಿಸಿದನು. "ನಂಬಿ, ವಿದೇಯರಾಗಿ, ಹೋರಾಡಿ" - ಇವು ಅವರ ಮೂಲ ಮಂತ್ರಗಳಾದವು. ಫ್ಯಾಸಿಸ್ಟ್ ಪಕ್ಷ ತನ್ನ ಬಲವನ್ನು ವೃದ್ಧಿಸಿಕೊಂಡರೂ ಚುನಾವಣೆಯಲ್ಲಿ ಬಹುಮತ ಪಡೆಯಲಿಲ್ಲ. ಚುನಾವಣೆಯ ಮೂಲಕ ಅಧಿಕಾರ ಪಡೆಯುವಲ್ಲಿ ವಿಫಲವಾದಾಗ 1922 ರ ಅಕ್ಟೋಬರ್ ಕೊನೆಯ ಹೊತ್ತಿಗೆ ಮುಸ್ಸೋಲಿನಿ ತನ್ನ ಅನುಯಾಯಿಗಳಿಗೆ ರೋಮ್‌ಗೆ ಪ್ರಯಾಣ ಬೆಳೆಸಲು ಆದೇಶ ನೀಡಿದನು. ಮುಸ್ಸೋಲಿನಿಯನ್ನು ದೊರೆಯನ್ನಾಗಿ ನೇಮಕಮಾಡುವಂತೆ ದೊರೆಯನ್ನು ಬೆದರಿಸುವುದೇ ಆತನ ಉದ್ದೇಶವಾಗಿತ್ತು. ಹೀಗಾಗಿ ಮುಸ್ಸೋಲಿನಿ ಅಧಿಕಾರಕ್ಕೆ ಬಂದನು.

### *116.3.1 ಫ್ಯಾಸಿಸಂನ ಗುರಿ ಮತ್ತು ನೀತಿಗಳು*

ಫ್ಯಾಸಿಸಂ ಮೂರು ಗುರಿಗಳನ್ನು ಹೊಂದಿತ್ತು. ದೇಶದ ಸ್ಥಾನವನ್ನು ಮೇಲಕ್ಕೇರಿಸುವುದು, ಖಾಸಗೀ ಪಕ್ಷದ ರಕ್ಷಣೆ ಮತ್ತು ಉತ್ಸಾಹೀ ವಿದೇಶಾಂಗ ನೀತಿ ಇವೇ ಆ ಮೂರು ಗುರಿಗಳು.

"ಎಲ್ಲವೂ ರಾಜ್ಯದೊಳಗೆ, ಯಾವುದೂ ರಾಜ್ಯದ ವಿರುದ್ಧವಲ್ಲ ಮತ್ತು ಯಾವುದೂ ರಾಜ್ಯದ ಹೊರಗಿಲ್ಲ" - ಇದೇ ಫ್ಯಾಸಿಸ್ಟರ ಪರಮ ಗುರಿಯಾಗಿತ್ತು. ಫ್ಯಾಸಿಸಂ ಏಕಪಕ್ಷ ಪದ್ಧತಿಯಲ್ಲಿ ನಂಬಿಕೆಯನ್ನಿಟ್ಟಿತ್ತು. ಆದುದರಿಂದ ಮುಸ್ಸೋಲಿನಿ ವಿರೋಧ ಪಕ್ಷಗಳನ್ನೆಲ್ಲಾ ಮಟ್ಟಹಾಕುವ ನೀತಿಯನ್ನು ಅನುಸರಿಸಿದನು. ಪತ್ರಿಕಾ ಸ್ವಾತಂತ್ರ್ಯವನ್ನು ರದ್ದುಗೊಳಿಸಿದ. ಸ್ಥಳೀಯ ಸ್ವಾಯತ್ತ ಘಟಕಗಳು, ಪ್ರಜಾತಾಂತ್ರಿಕ ಸಂಸ್ಥೆಗಳನ್ನು ರದ್ದುಗೊಳಿಸಿದ. ಫ್ಯಾಸಿಸ್ಟ್ ಪಕ್ಷದ ಪರವಾಗಿ ಚುನಾವಣಾ ಕಾಯಿದೆಗಳನ್ನು ಮಾರ್ಪಡಿಸಿದ. ಕೆಳಮನೆ ಛೇಂಬರ್ ಆಫ್ ಡೆಪ್ಯೂಟೀಸ್ ಅನ್ನು ವಿಸರ್ಜಿಸಿದ. ಅದರ ಸ್ಥಾನದಲ್ಲಿ 22 ಮಂದಿ ಸದಸ್ಯರ ಸಭೆಯನ್ನು ರಚಿಸಿದ. ಹೀಗೆ ಫ್ಯಾಸಿಸ್ಟ್ ಪಕ್ಷದ ಸರ್ವಾಧಿಕಾರತ್ವ ಇಟಲಿಯಲ್ಲಿ ಸ್ಥಾಪನೆಗೊಂಡಿತು.

### 116.3.2 ಮುಸ್ಸೋಲಿನಿಯ ವಿದೇಶಾಂಗ ನೀತಿ

ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ 1915 ರಲ್ಲಿ ನೀಡಿದ್ದ ಭರವಸೆಯಂತೆ ಪ್ರದೇಶಗಳನ್ನು ಪಡೆಯಲು ವಿಫಲವಾದ ಮೇಲೆ ಇಟಲಿಯಲ್ಲಿ ಅತೃಪ್ತಿ ಮತ್ತು ಪ್ರತೀಕಾರದ ಭಾವನೆ ಬೆಳೆಯಿತು. ಆದುದರಿಂದ ಮುಸ್ಸೋಲಿನಿ ಮುನ್ನಡೆಯ ವಿದೇಶಾಂಗ ನೀತಿಯನ್ನು ಅನುಸರಿಸಿದನು. ಇತರ ಪ್ರಬಲ ರಾಷ್ಟ್ರಗಳ ನೋಟಕ್ಕೆ ಇಟಲಿಯ ಹೆಚ್ಚಾದ ಪ್ರತಿಷ್ಠೆಯನ್ನು ಪ್ರದರ್ಶಿಸಲು ಈ ನೀತಿ ಅಗತ್ಯವಾಗಿತ್ತು. ಇಟಲಿ ಬಲಿಷ್ಠವಾಗಿದೆ ಹಾಗೂ 1915 ರ ಲಂಡನ್ ಒಪ್ಪಂದದ ಸಮಯದಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸಿಕೊಳ್ಳಬಲ್ಲದು ಎಂಬುದನ್ನು ತೋರಿಸಿಕೊಡುವುದರ ಮೂಲಕ ಅದು ಸಾಧ್ಯವಾಗಿತ್ತು. ಹಾಗೆಯೇ ಆಕ್ರಮಣಕಾರಿ ವಿದೇಶಾಂಗ ನೀತಿಯ ಮೂಲಕ ಆಂತರಿಕ ರಾಜಕೀಯದಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸಬಹುದೆಂದೂ ಮುಸ್ಸೋಲಿನಿ ಭಾವಿಸಿದ್ದನು. ನಿರಂತರವಾಗಿ ಆಸ್ಫೋಟನೆಗೊಳ್ಳುತ್ತಿದ್ದ ಜನಸಂಖ್ಯಾ ಸಮಸ್ಯೆಯನ್ನು ಬಗೆಹರಿಸಲು

ಈ ನೀತಿ ಅಗತ್ಯವಾಗಿತ್ತು. ತಾಯ್ನಾಡಿನಲ್ಲಿ ಉದ್ಯೋಗ ಕಳೆದುಕೊಂಡವರ ಮಕ್ಕಳಿಗೆ ನೆಲೆ ಒದಗಿಸಲು ಇಟಲಿಗೆ ವಸಾಹತುಗಳು ಬೇಕಾಗಿದ್ದವು. ವಿದೇಶೀಯ ರಾಷ್ಟ್ರಗಳು ವಲಸೆಯ ಮೇಲೆ ನಿರ್ಬಂಧ ಹೇರಿದ್ದುದರಿಂದ ಇವರು ವಲಸೆ ಹೋಗುವಂತೆಯೂ ಇರಲಿಲ್ಲ. "ನಮಗೆ ಭೂಮಿ ಕಬಳಿಸುವ ಆಸೆಯಾಗಿದೆ; ಕಾರಣ ನಾವು ಪರಿಣಿತರು ಮತ್ತು ಹಾಗೆಯೇ ಮುಂದುವರಿಯಲು ಇಚ್ಛಿಸುತ್ತೇವೆ" ಎಂದು ಮುಸ್ಸೋಲಿನಿ ಬಹಿರಂಗವಾಗಿ ಘೋಷಿಸಿದನು.

### *116.3.3 ಇಟಲಿಯ ವಿದೇಶಾಂಗ ನೀತಿಯ ಉದ್ದೇಶಗಳು*

ಕ್ಯಾಥರೀನ್ ಡಫ್ ಇಟಲಿಯ ವಿದೇಶಾಂಗ ನೀತಿಯನ್ನು ಹೀಗೆ ವಿವರಿಸಿದ್ದಾರೆ "ವಸ್ತು ಸ್ಥಿತಿಯೆಂದರೆ, ಆಕೆಯ ಸಾಮ್ರಾಜ್ಯದಿಂದ ದೂರವಿದ್ದ ಭೂಮಧ್ಯ ಸಮುದ್ರ ಒಂದು ಸೆರೆಮನೆ ಇದ್ದಂತೆ : ಕಾರ್ಸಿಕಾ, ಮಾಲ್ಟಾ, ಟ್ಯೂನಿಸ್ ಮತ್ತು ಸೈಪ್ರಸ್ ಆ ಸೆರೆಮನೆಯ ಸರಳುಗಳು. ಗಿಬ್ರಾಲ್ಟರ್ ಮತ್ತು ಸುಯೆಜ್ ಅದರ ಬಾಗಿಲನ್ನು ಕಾಯುತ್ತಿದ್ದವು. ಗ್ರೀಸ್, ತುರ್ಕಿ ಮತ್ತು ಈಜಿಪ್ಟ್ ಆಕೆಯನ್ನು ಸುತ್ತಿವರಿಯುವ ಸರಪಳಿಯ (ಸಂಕೋಲೆಯ) ಕಾರ್ಯವನ್ನು ನಿರ್ವಹಿಸುವುದಕ್ಕೆ ಸಿದ್ಧವಾಗಿದ್ದವು. ಮೊದಲು ಸೆರೆಮನೆಯ ಸರಳುಗಳನ್ನು ಮುರಿದು ಸ್ವಾತಂತ್ರ್ಯಕ್ಕೆ ಅಗತ್ಯವಾದ ಸಾಗರ ಸಂಪರ್ಕವನ್ನು ಪಡೆಯಲು ನಿರ್ಧರಿಸಲಾಯಿತು. ಸೂಡಾನ್‌ನ ಮೂಲಕ ಲಿಬಿಯಾವನ್ನು ಇತಿಯೋಪಿಯಾದೊಂದಿಗೆ ಸಂಪರ್ಕಿಸಿ ಹಿಂದೂ ಮಹಾ ಸಾಗರವನ್ನು ವಿಸ್ತರಿಸುವುದು ಹಾಗೂ ಫ್ರೆಂಚ್ ಉತ್ತರ ಆಫ್ರಿಕಾದ ಮೂಲಕ ಅಟ್ಲಾಂಟಿಕ್‌ವರೆಗೆ ವಿಸ್ತರಿಸುವುದು ಇಟಲಿಯ ಉದ್ದೇಶ". ಆದುದರಿಂದ ಆಗ್ನೇಯ ಯುರೋಪ್ ಆಫ್ರಿಕಾ ಮತ್ತು ಸಾಧ್ಯವಾದರೆ ಇನ್ನೂ ದೂರದ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸಲು ಇಟಲಿ ಕಾತರದಿಂದಿತ್ತು.

## 116.4 ಆಗ್ನೇಯ ಯುರೋಪಿನ ಮೇಲಿನ ನಿಯಂತ್ರಣ

ಮೊದಲು ಮುಸ್ಸೋಲಿನಿ ಆಗ್ನೇಯ ಯೂರೋಪಿನತ್ತ ತನ್ನ ಗಮನವನ್ನು ಕೇಂದ್ರಿಕರಿಸಿದನು. 1923 ರ ಲಾಸ್ಸೇನ್ ಒಪ್ಪಂದದ ಪ್ರಕಾರ 1920 ರಲ್ಲಿ ಗ್ರೀಸ್‌ಗೆ ಒಪ್ಪಿಸಿದ್ದ ದೊಡಕಾನದ ದ್ವೀಪಗಳನ್ನು ಇಟಲಿ ಹಿಂದಕ್ಕೆ ಪಡೆಯಿತು. ಅದೇ ವರ್ಷ ಇಟಲಿಯ ಸೈನ್ಯ ಕಾರ್ಫು ದ್ವೀಪದ ಮೇಲೆ ಬಾಂಬ್ ಧಾಳಿ ನಡೆಸಿ ಅದನ್ನು ಆಕ್ರಮಿಸಿಕೊಂಡಿತು. ಗ್ರೀಸ್ ಲೀಗ್ ಆಫ್ ನೇಷನ್ಸ್‌ಗೆ ದೂರು ಸಲ್ಲಿಸಿತು. ಲೀಗ್‌ನ ಮಧ್ಯಪ್ರವೇಶದಿಂದಾಗಿ ಗ್ರೀಸ್‌ನಿಂದ ಪರಿಹಾರವನ್ನು ಪಡೆದ ಇಟಲಿ ಕಾರ್ಫು ದ್ವೀಪವನ್ನು ಬಿಟ್ಟುಕೊಟ್ಟಿತು. 1924 ರ ಜನವರಿಯಲ್ಲಿ ಯುಗೋಸ್ಲಾವಿಯಾದೊಂದಿಗೆ ರೋಮ್ ಒಪ್ಪಂದವನ್ನು ಏರ್ಪಡಿಸಿಕೊಳ್ಳಲಾಯಿತು. ಫ್ಯೂಮ್ ರಾಜ್ಯವನ್ನು ಇಬ್ಬರೂ ಹಂಚಿಕೊಂಡರು. ಫ್ಯೂಮ್ ನಗರ ಇಟಲಿಗೆ ಸೇರಿತು. ಯುಗೋಸ್ಲಾವಿಯಾಕ್ಕೆ ನೆರೆಯ ಪಟ್ಟಣ ಪೋರ್ಟೋ ಬಾರೋಸ್ ದೊರೆಯಿತು.

## 116.5 ತಿರಾನ ಒಪ್ಪಂದ (1926)

1926ರಲ್ಲಿ ಮುಸ್ಸೋಲಿನಿ ತಿರಾನ ಎಂಬಲ್ಲಿ ಆಲ್ಬೇನಿಯಾದೊಂದಿಗೆ ಒಂದು ಒಪ್ಪಂದವನ್ನು ಏರ್ಪಡಿಸಿಕೊಂಡನು. ಅದರ ಪ್ರಕಾರ ಆಲ್ಬೇನಿಯಾ ಪೂರ್ಣವಾಗಿ ಇಟಲಿಯ ಆಶ್ರಿತ ರಾಜ್ಯವಾಯಿತು. 1939 ರಲ್ಲಿ ಯಾವುದೇ ಪ್ರತಿಭಟನೆಯಿಲ್ಲದೆ ಆಲ್ಬೇನಿಯಾವನ್ನು ಇಟಲಿಗೆ ಸೇರಿಸಿಕೊಳ್ಳಲಾಯಿತು. 1928ರಲ್ಲಿ ಇಟಲಿಯನ್ನು ಮೊರಾಕ್ಕೋದ ಪಶ್ಚಿಮ ಕರಾವಳಿಯ ಸ್ವತಂತ್ರ ನಗರ ಟ್ಯಾಂಜಿಯರ್‌ನ ಆಡಳಿತದಲ್ಲಿ ಭಾಗವಹಿಸುವಂತೆ ಆಹ್ವಾನಿಸಲಾಯಿತು. ಇದನ್ನು ರೋಮ್‌ನಲ್ಲಿ ಮುಸ್ಸೋಲಿನಿಯ ಭಾರೀ ರಾಜತಾಂತ್ರಿಕ ವಿಜಯವೆಂದು ಮನಗಾಣಲಾಯಿತು. 1930 ರ ಲಂಡನ್ ನೌಕಾ ಸಮ್ಮೇಳನದಲ್ಲಿ ಮುಸ್ಸೋಲಿನಿ ಫ್ರಾನ್ಸ್‌ನೊಂದಿಗೆ ನೌಕಾ ಸಮಬಲದ ಬೇಡಿಕೆಯನ್ನು ಮುಂದಿಟ್ಟನು. 1931 ರಲ್ಲಿ ಶಾಂತಿ ಒಪ್ಪಂದಗಳ ಪರಿಷ್ಕರಣೆಗಾಗಿ ಪ್ರಚಾರ

ಮಾಡಿದನು. ಈ ಕ್ರಮಗಳಿಂದಾಗಿ ಮುಸ್ಸೋಲಿನಿ ಏಡ್ರಿಯಾಟಿಕ್‌ನ ಮೇಲೆ ಇಟಲಿಯ ನಿಯಂತ್ರಣವನ್ನು ಬಲಪಡಿಸಿದ್ದಲ್ಲದೆ, ಭೂಮಧ್ಯ ಸಮುದ್ರದ ಪ್ರದೇಶಗಳ ಮೇಲೂ ಪ್ರಭಾವವನ್ನು ಹೆಚ್ಚಿಸಿದನು. ಆಗ್ನೇಯ ಯುರೋಪಿನಲ್ಲಿ ರಾಜತಾಂತ್ರಿಕ ಮತ್ತು ವಾಣಿಜ್ಯ ಸಂಬಂಧದ ಪ್ರಭಾವವನ್ನು ವಿಸ್ತರಿಸಿದನು.

## 116.6 ಇಟಲಿಯಿಂದ ಅಬಿಸ್ಸೀನಿಯಾದ ಮೇಲೆ ಧಾಳಿ

ಮುಸ್ಸೋಲಿನಿಯ ಆಕ್ರಮಣ ನೀತಿಯ ಮತ್ತೊಂದು ಬಲಿ ಅಬಿಸ್ಸೀನಿಯಾ. ಇಟಲಿ ಅಬಿಸ್ಸೀನಿಯಾದ ಆಕ್ರಮಣದ ಯೋಜನೆಯನ್ನು ಕೈಗೊಳ್ಳಲು ಈ ಕೆಳಗಿನ ಕಾರಣಗಳನ್ನು ನೀಡಬಹುದು.

(1) ಹೆಚ್ಚಾದ ಜನಸಂಖ್ಯೆಗೆ ನೆಲೆಯೊದಗಿಸಲು ಕೆಲವು ಪ್ರದೇಶಗಳು ಬೇಕಾಗಿದ್ದವು.

(2) ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳು ಮತ್ತು ಉತ್ಪಾದಿತ ಸಿದ್ಧ ವಸ್ತುಗಳಿಗೆ ಮಾರುಕಟ್ಟೆಗಳು ಬೇಕಾಗಿದ್ದವು.

(3) ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿಯಿಂದ ಇಟಲಿಯನ್ನರ ಗಮನವನ್ನು ಬೇರೆಡೆ ಸೆಳೆಯಬೇಕಾಗಿತ್ತು.

(4) ಅಬಿಸ್ಸೀನಿಯಾ ಆಯಕಟ್ಟಿನ ಮೌಲ್ಯವನ್ನು ಹೊಂದಿತ್ತು. ಅದು ಇಟಲಿಯ ಸ್ವಾಸ್ಥ್ಯಗಳಾಗಿದ್ದ ಸೋಮಾಲಿಲ್ಯಾಂಡ್, ಇರಿತ್ರಿಯಾ ಆಗ್ನೇಯ ಆಫ್ರಿಕಾದೊಂದಿಗೆ ಸಂಪರ್ಕ ಕಲ್ಪಿಸಲಿತ್ತು.

(5) 1896 ರಲ್ಲಿ ಅಬಿಸ್ಸೀನಿಯಾದ ವಿರುದ್ಧ ಅನುಭವಿಸಿದ ಸೋಲಿನ ಸೇಡು ತೀರಿಸಿಕೊಂಡು ಇಟಲಿಯನ್ನರ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಕೆರಳಿಸಬೇಕಾಗಿತ್ತು.

ಬಹಳ ದಿನಗಳಿಂದ ಅಬಿಸ್ಸೀನಿಯಾದ ಮೇಲೆ ಆಕ್ರಮಣ ಮಾಡುವ ಯೋಜನೆ ಮುಸ್ಸೋಲಿನಿಯಲ್ಲಿದ್ದರೂ ಸೇನಾವಿಜಯದ ಬಗ್ಗೆ ಖಾತರಿಪಡಿಸಿಕೊಳ್ಳದೆ ಅಂತಹ ಯೋಜನೆಯನ್ನು ಕೈಗೊಳ್ಳಲು ಇಚ್ಛಿಸಲಿಲ್ಲ. ಜಪಾನ್ ಮಂಚೂರಿಯಾವನ್ನು ಆಕ್ರಮಿಸಿದಾಗ (1931) ಲೀಗ್ ವರ್ತಿಸಿದ ರೀತಿ, ಬೃಹತ್ ರಾಷ್ಟ್ರಗಳ ನಿಲುವನ್ನು ಗಮನಿಸಿದ ಮುಸ್ಸೋಲಿನಿಗೆ ಸಾಮೂಹಿಕ ಭದ್ರತೆಯ ಜವಾಬ್ದಾರಿ ಇದ್ದರೂ, ಯಾರೂ ತನ್ನ ಅಬಿಸ್ಸೀನಿಯಾದ ಆಕ್ರಮಣವನ್ನು ತಡೆಗಟ್ಟಲಾರರು ಎಂಬುದು ತಿಳಿಯಿತು.

### 116.6.1 ಲೀಗ್ ಆಫ್ ನೇಷನ್ಸ್‌ನಿಂದ ಪ್ರತಿಭಟನೆ

ಪರಿಣಾಮವಾಗಿ ಇಟಲಿಯ ಸೈನ್ಯ 1935 ರ ಅಕ್ಟೋಬರ್‌ನಲ್ಲಿ ಅಬಿಸ್ಸೀನಿಯಾವನ್ನು ಪ್ರವೇಶಿಸಿತು. ಕೂಡಲೇ ಲೀಗಿನ ಭದ್ರತಾ ಸಮಿತಿ ಲೀಗಿನ ಪರಿಚ್ಛೇದವನ್ನು ಉಲ್ಲಂಘಿಸಿ ಇಟಲಿ ಯುದ್ಧದಲ್ಲಿ ನಿರತವಾಗಿದೆಯೆಂದು ಘೋಷಿಸಿತು. ಎರಡು ದಿನಗಳ ನಂತರ ಲೀಗಿನ ಸಾಮಾನ್ಯ ಸಭೆಯು ಒಂದು ಸಮನ್ವಯ ಸಮಿತಿಯ ನೇಮಕಕ್ಕೆ ಶಿಫಾರಸ್ಸು ಮಾಡಿತು. ಈ ಸಮಿತಿಯು ಇಟಲಿಗೆ ನೀಡುತ್ತಿದ್ದ ಎಲ್ಲಾ ಸಾಲಗಳು ಹಾಗೂ ಪಾವತಿಗಳನ್ನು ನಿಷೇಧಿಸಬೇಕೆಂದು ಲೀಗಿನ ಸದಸ್ಯ ರಾಷ್ಟ್ರಗಳಿಗೆ ತಿಳಿಸಿತು. ಆದರೆ ಈ ರೀತಿಯ ಆರ್ಥಿಕ ದಿಗ್ಬಂಧನದಿಂದ ಸಂಪೂರ್ಣ ಯುರೋಪ್ ಯುದ್ಧದಲ್ಲಿ ಮುಳುಗಬಹುದೆಂಬ ಭಯ ಫ್ರಾನ್ಸ್‌ನ್ನು ಕಾಡಿದ್ದರಿಂದ ಅಸಂತುಷ್ಟತೆಯನ್ನು ವ್ಯಕ್ತಪಡಿಸಿತು. ಅಬಿಸ್ಸೀನಿಯಾದಲ್ಲಿ ಆ ವೇಳಾಗಾಗಲೇ ಸಾಕಷ್ಟು ಮುನ್ನಡೆದಿದ್ದ ಇಟಲಿಯ ಸೈನ್ಯ 1936 ರ ಮೇನಲ್ಲಿ ಅದನ್ನಾಕ್ರಮಿಸಿಕೊಂಡಿತು.

### *116.6.2 ಅಬಿಸ್ಸೀನಿಯಾದ ಆಕ್ರಮಣದ ಪರಿಣಾಮ*

ಅಬಿಸ್ಸೀನಿಯಾದ ಆಕ್ರಮಣ ಯುದ್ಧೋತ್ತರ ಇತಿಹಾಸದ ಗತಿಯನ್ನೇ ಬದಲಾಯಿಸಿದ ಘಟನೆಯೆಂದು ಗ್ಯಾಥೋರ್ನ್ ಹಾರ್ಡಿ ಅಭಿಪ್ರಾಯ ಪಟ್ಟಿದ್ದಾರೆ. ನಿಚ್ಚಳ, ನಾಚಿಕೆಗೇಡಿನ ಇಟಲಿಯ ಆಕ್ರಮಣದ ವಿಜಯ ಸಂಪೂರ್ಣ ವಿಶ್ವದ ಮೇಲೆ ಕೆಲವು ಮೂಲಭೂತ ಪರಿಣಾಮಗಳನ್ನು ಬೀರಿತು. ಇಂಗ್ಲೆಂಡಿಗೆ ಲೀಗ್‌ನಂತಹ ಸಂಸ್ಥೆಯ ವಿನಾಶಕ್ಕೆ ತಾನೇ ಕಾರಣ ಎಂಬಂತೆ ಅನಿಸಿತು. ವಿವಿಧ ಪಕ್ಷಗಳ ಸರಕಾರಗಳು ಲೀಗಿನ ಬಗೆಗಿನ ನಿಲುವನ್ನೇ ತಮ್ಮ ವಿದೇಶಾಂಗ ನೀತಿಯ ತಿರುಳೆಂದು ಪ್ರತಿಪಾದಿಸಿದವು. ಭಯಾನಕ ಶತ್ರುವೆಂದು ಪರಿಗಣಿಸಲ್ಪಟ್ಟಿದ ಇಟಲಿಯನ್ನು ಹೊಸ ಉದ್ದಟತನಕ್ಕೆ ಪ್ರೋತ್ಸಾಹಿಸಿದಂತೆ ಫ್ರಾನ್ಸಿಗೆ ಅನಿಸಿತು. ಹಾಗೆಯೇ ಹಿಂದಿನ ಉಲ್ಲಂಘನೆಗಾಗಿ ಒಳಗಾಗಬೇಕಾಗಿದ್ದ ಶಿಕ್ಷೆಯಿಂದ ಪಾರುಮಾಡಿದಂತೆ ಅನಿಸಿತು.

ಡ್ಯಾನೂಬ್‌ನಲ್ಲಿ ಅದರ ಪ್ರಭಾವದ ಅಂತ್ಯದೊಂದಿಗೆ ಬ್ರೆನ್ನರ್‌ನಲ್ಲಿ ಜರ್ಮನ್ ಪಡೆಯ ಆಗಮನವನ್ನು ಅದು ಸೂಚಿಸಿತು.

## 116.7 ಆಸ್ಟ್ರಿಯಾದೊಂದಿಗಿನ ಸಂಬಂಧ

ಯುದ್ಧಗಳ ನಡುವಣ ಅವಧಿಯಲ್ಲಿ ಮುಸ್ಸೋಲಿನಿ ಆಸ್ಟ್ರಿಯಾದೊಂದಿಗೆ ಜರ್ಮನಿಯ ಸೇರ್ಪಡೆಯನ್ನು ವಿರೋಧಿಸಿದನು. ಅಂತಹ ಐಕ್ಯತೆ ಯುರೋಪಿನಲ್ಲಿ ಇಟಲಿಯ ಪ್ರಭಾವವನ್ನು ಅಂತ್ಯಗೊಳಿಸಬಹುದೆಂಬ ಭಯ ಆತನಿಗಿತ್ತು. 1931 ರಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿ ದೇಶಗಳ ನಡುವಣ ಸುಂಕದ ಒಮ್ಮತವನ್ನು ಅವನು ವಿರೋಧಿಸಿದನು. 1934 ರಲ್ಲಿ ನಾಜಿಗಳು ಆಸ್ಟ್ರಿಯಾದ ವಿರುದ್ಧ ದಂಗೆಯೆದ್ದು, ಆಸ್ಟ್ರಿಯಾದ ಛಾನ್ಸಲರ್ ಡೋಲ್‌ಫಸ್‌ನನ್ನು ಗಾಯಗೊಳಿಸಿದಾಗ, ಮುಸ್ಸೋಲಿನಿ ಆಸ್ಟ್ರಿಯಾದ ನೆರವಿಗಾಗಿ ಸೇನೆಯನ್ನೇ ರವಾನಿಸಿದನು. ಹಿಟ್ಲರ್‌ನ ಆಕ್ರಮಣದಿಂದ ಆಸ್ಟ್ರಿಯಾವನ್ನು ರಕ್ಷಿಸಿದನು.

## 116.8 ಫ್ರಾನ್ಸ್‌ನತ್ತ ಮುನ್ನಡೆ

ಆಗ್ನೇಯ ಯುರೋಪಿನಲ್ಲಿ ಫ್ರಾನ್ಸಿಗೆ ವಿರುದ್ಧವಾದ ಅಭಿಪ್ರಾಯವನ್ನು ಮುಸ್ಸೋಲಿನಿ ರೂಪಿಸಿದನು. ಫ್ರಾನ್ಸ್‌ಗಿಂತ ಇಟಲಿಯೊಂದಿಗೆ ಆ ಪ್ರದೇಶದ ರಾಜ್ಯಗಳು ಮೈತ್ರಿಗೆ ಸಿದ್ಧವಾಗಿವೆ ಎನ್ನುವ ಅಭಿಪ್ರಾಯ ಮೂಡಿಸಿದನು. ಸಣ್ಣಪುಟ್ಟ ರಾಜ್ಯಗಳಂತೂ, ಫ್ರಾನ್ಸ್ ಇಲ್ಲವೇ ಇಟಲಿಯೊಂದಿಗೆ ಮೈತ್ರಿಯನ್ನು ಏರ್ಪಡಿಸಲು ಕಾತರದಿಂದಿದ್ದವು. ಆದರೆ ಯಾವ ರಾಜ್ಯವೂ ಈ ಇಬ್ಬರ ಸಾರ್ವಭೌಮಾಧಿಕಾರವನ್ನು ಒಪ್ಪಲು ಸಿದ್ಧವಿರಲಿಲ್ಲ. ಆರಂಭದಲ್ಲಿ ಯುಗೋಸ್ಲಾವಿಯಾ ಮತ್ತು ಜೆಕೋಸ್ಲಾವಾಕಿಯಾದೊಂದಿಗೆ ಮೈತ್ರಿಯನ್ನು ಏರ್ಪಡಿಸಿಕೊಳ್ಳುವುದರ ಮೂಲಕ ಇಟಲಿ ಫ್ರಾನ್ಸ್‌ನ ವಿರುದ್ಧ ಜಯ ಗಳಿಸಿತು. ಫ್ರಾನ್ಸ್ ಜೆಕೋಸ್ಲಾವಾಕಿಯಾದೊಂದಿಗೆ ಮಾತ್ರ ಸಖ್ಯವನ್ನು ಬೆಳೆಸಲು ಶಕ್ತವಾಯಿತು. ಆದರೆ ಕ್ರಮೇಣ ಫ್ರಾನ್ಸ್ ಆ ಪ್ರದೇಶಗಳ ರಾಜ್ಯಗಳ ಮೇಲೆ ತನ್ನ ಪ್ರಭಾವವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು. 'ಪುಟ್ಟಮೈತ್ರಿ' ಯನ್ನು ವಿಸರ್ಜಿಸುವುದರ ಮೂಲಕ ಇಟಲಿ ಫ್ರಾನ್ಸ್‌ನ ರಾಜಕೀಯ ಪ್ರಭಾವವನ್ನು ಅಂತ್ಯಗೊಳಿಸಲು ಪ್ರಯತ್ನಿಸಿತು. ಆದರೆ ಈ ಮೈತ್ರಿಗಳ ಮೇಲೆ ಏಕಸ್ವಾಮ್ಯ ಸಾಧಿಸಲು ವಿಫಲವಾದಾಗ ಇಟಲಿ ಫ್ರೆಂಚರ ಪುನರ್ ನಿರ್ಮಾಣದ ಯೋಜನೆಗಳ ವಿರುದ್ಧ ಜರ್ಮನಿಯನ್ನು ಎತ್ತಿ ಕಟ್ಟಲು ಪ್ರಯತ್ನಿಸಿತು.

## 116.9 ಜರ್ಮನಿಯೊಂದಿಗಿನ ಸಂಬಂಧ

ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಜರ್ಮನಿ ಮತ್ತು ಫ್ರಾನ್ಸ್‌ನ ಬಲಗಳಲ್ಲಿ ಸಮಾನತೆ ಇರಬೇಕೆಂಬ ಜರ್ಮನಿಯ ನಿಲುವನ್ನು ಇಟಲಿ ಬೆಂಬಲಿಸಿತು. ಈ ಕ್ರಮದಿಂದಾಗಿ ಯುರೋಪ್

ಖಂಡದಲ್ಲಿ ಇಟಲಿಯ ಸೈನ್ಯಕ್ಕೆ ಅಧಿಕಾರ ಸಮತೋಲನವನ್ನು ನೀಡಿದಂತೆ ಮಾಡಿದ ಸಮಾಧಾನ ಮುಸ್ಸೋಲಿನಿಯದಾಗಿತ್ತು. ಇಲ್ಲಿ ಇಟಲಿಯ ಲೆಕ್ಕಾಚಾರ ಸರಿಯಾಗಿಯೇ ಇತ್ತು. ಫ್ರೆಂಚರ ಮಟ್ಟಕ್ಕೆ ಜರ್ಮನರು ಶಸ್ತ್ರೀಕರಣಗೊಂಡಾಗ ಇಟಲಿ ಅಬಿಸ್ಸೀನಿಯಾದ ಯುದ್ಧದ ಸಂದರ್ಭದಲ್ಲಿ ಇಂಗ್ಲೆಂಡನ್ನು ಧಿಕ್ಕರಿಸಿ ವರ್ತಿಸುವ ಸ್ಥಿತಿಯಲ್ಲಿತ್ತು.

ಇಟಲಿ ಜರ್ಮನಿಯ ಸಹಕಾರವನ್ನು ಪಡೆಯಲು ಕಾತರದಿಂದಿದ್ದರೂ ಆಸ್ಟ್ರೋ-ಜರ್ಮನ್ ಸಂಬಂಧಕ್ಕೆ ಸಂಬಂಧಿಸಿದ ಇಟಲಿಯ ನಿಲುವು ಇಬ್ಬರೂ ಹತ್ತಿರ ಬರುವುದು ಸಾಧ್ಯವೇ ಇಲ್ಲ ಎಂಬಂತಾಗಿಸಿತ್ತು. ಪರಿಣಾಮವಾಗಿ 1935 ರ ಜನವರಿ 7 ರಂದು ಇಟಲಿ ರೋಮ್‌ನಲ್ಲಿ ಫ್ರಾನ್ಸ್‌ನೊಂದಿಗೆ ಒಪ್ಪಂದಕ್ಕೆ ಸಹಿಹಾಕಿತು. ಈ ಒಪ್ಪಂದದ ಪ್ರಕಾರ ಫ್ರಾನ್ಸ್ ಆಫ್ರಿಕಾದಲ್ಲಿ ಇಟಲಿಯ ಬೇಡಿಕೆಗಳನ್ನು ಈಡೇರಿಸಿತು. ಅದಕ್ಕೆ ಇಟಲಿ ಪರಿಹಾರವನ್ನು ನೀಡುವುದಾಗಿಯೂ ಒಪ್ಪಿಕೊಂಡಿತು. ಮಧ್ಯ ಮತ್ತು ಆಗ್ನೇಯ ಯೂರೋಪಿನಲ್ಲಿ ಫ್ರಾನ್ಸ್ ಇಟಲಿಗೆ ಸುಮಾರು 44,500 ಚದರ ಮೈಲಿಗಳ ವಿಸ್ತೀರ್ಣದ ಪ್ರದೇಶಗಳನ್ನು ಬಿಟ್ಟುಕೊಟ್ಟಿತು. ಈ ಪ್ರದೇಶಗಳು ಈಜಿಪ್ಟಿನ ಸೂಡಾನ್‌ನಿಂದ ಫ್ರೆಂಚ್ ಸೋಮಾಲಿ ಲ್ಯಾಂಡ್‌ನವರೆಗೂ ವಿಸ್ತರಿಸಿದ್ದವು. ಪರಸ್ಪರ ತಮ್ಮ ಪ್ರದೇಶಗಳ ಎಲ್ಲೆಯನ್ನು ಗೌರವಿಸುವುದಾಗಿ ಉಭಯ ಪಕ್ಷಗಳೂ ಒಪ್ಪಿಕೊಂಡವು. ಹಾಗೆಯೇ ಪರಸ್ಪರ ತಮ್ಮ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸುವುದಿಲ್ಲವೆಂದು ಒಪ್ಪಿಕೊಂಡವು. ಜರ್ಮನಿಯ ನಿಶ್ಯಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಏಕಪಕ್ಷೀಯ ನಿರ್ಧಾರವನ್ನು ವಿರೋಧಿಸಲು ಒಪ್ಪಿಕೊಂಡವು. ಅಬಿಸ್ಸೀನಿಯಾದ ವ್ಯವಹಾರದಲ್ಲಿ ಇಟಲಿ ಹಸ್ತಕ್ಷೇಪ ನಡೆಸಿದಾಗ , ಇಟಲಿಯ ವಿರುದ್ಧ ಹೇರಿದ ಆರ್ಥಿಕ ದಿಗ್ಬಂಧನದಲ್ಲಿ ಫ್ರಾನ್ಸ್ ಭಾಗಿಯಾದುದರಿಂದ ಉಭಯ ರಾಷ್ಟ್ರಗಳ ನಡುವಣ ಸುಮಧುರ ಬಾಂಧವ್ಯಕ್ಕೆ ಧಕ್ಕೆಯುಂಟಾಯಿತು.

## 116.10 ಇಂಗ್ಲೆಂಡ್‌ನೊಂದಿಗಿನ ಸಂಬಂಧ

ಹಿಟ್ಲರ್‌ನ ಏಳಿಗೆಯ ನಂತರ, ಇಟಲಿ ಇಂಗ್ಲೆಂಡಿನೊಂದಿಗಿನ ಸಂಬಂಧವನ್ನು ಉತ್ತಮಪಡಿಸಿಕೊಂಡಿತು. ಯುರೋಪಿನಲ್ಲಿಯೇ ಇಂಗ್ಲೆಂಡ್ ಅತಿ ಬಲಿಷ್ಠ ನೌಕಾಬಲವನ್ನು ಹೊಂದಿದೆ ಹಾಗೂ ಭೂಮಧ್ಯ ಸಮುದ್ರದಲ್ಲಿ ಪ್ರಭಾವವನ್ನು ಹೊಂದಿದೆ ಎಂಬುದು ಮನವರಿಕೆಯಾದುದರಿಂದ ಅದನ್ನು ಕಡೆಗಣಿಸುವಂತಿರಲಿಲ್ಲ. ಆದುದರಿಂದಲೇ ಸ್ಟ್ರೆಸ್ಸಾ ಸಮ್ಮೇಳನದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡನ್ನು ಬೆಂಬಲಿಸಿತು. 1937 ರ ಜನವರಿಯಲ್ಲಿ ಭೂಮಧ್ಯಸಮುದ್ರದಲ್ಲಿ 'ಯಥಾಸ್ಥಿತಿ' ಯನ್ನು ಕಾಪಾಡುವುದಾಗಿ ಒಪ್ಪಿಕೊಂಡಿದ್ದೇವೆ ಎಂಬ ಘೋಷಣೆಯನ್ನು ಇಂಗ್ಲೆಂಡ್ ಮತ್ತು ಇಟಲಿ ಹೊರಡಿಸಿದವು. 1938 ರ ಏಪ್ರಿಲ್‌ನಲ್ಲಿ ಉಭಯರಾಷ್ಟ್ರಗಳು ಮತ್ತೊಂದು ಒಪ್ಪಂದವನ್ನು ಏರ್ಪಡಿಸಿಕೊಂಡವು. ಅದು ಭೂಮಧ್ಯ ಸಮುದ್ರ ಮತ್ತು ಸಮೀಪ ಪ್ರಾಚ್ಯದ ಪ್ರದೇಶಕ್ಕೆ ಸಂಬಂಧಿಸಿದುದಾಗಿತ್ತು. ಇಟಲಿ ಅಬಿಸ್ಸೀನಿಯಾವನ್ನು ಆಕ್ರಮಿಸಿದ ಮೇಲೆ ಈ ಪ್ರದೇಶಗಳಲ್ಲಿ ಹಲವು ಸಮಸ್ಯೆಗಳು ತಲೆದೋರಿದ್ದವು. ಇಟಲಿ ಸ್ಪೈನ್‌ನಿಂದ ಸಾಕಷ್ಟು ಸಂಖ್ಯೆಯ ಫ್ಯಾಸೀಸ್ವಯಂ ಸೇವಕರನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಒಪ್ಪಿದರೆ, ಇಂಗ್ಲೆಂಡ್ ಇಟಲಿಯ ಆಫ್ರಿಕಾದ ಸಾಮ್ರಾಜ್ಯವನ್ನು ಮಾನ್ಯಮಾಡಿತು. 1939 ರಲ್ಲಿ ಚೇಂಬರ್‌ಲೀನ್ ಮತ್ತು ಹ್ಯಾಲಿಫ್ಯಾಕ್ಸ್ ಇಟಲಿಯೊಂದಿಗಿನ ಮುಂದಿನ ಮಾತುಕತೆಗಳಿಗಾಗಿ ರೋಮ್‌ಗೆ ತೆರಳಿದರೂ ಅದರಿಂದ ಸಾಕಷ್ಟು ಪ್ರಯೋಜನವಾಗಲಿಲ್ಲ.

## 116.11 ಮುಸ್ಸೋಲಿನಿ ಮತ್ತು ಹಿಟ್ಲರ್

ತತ್ವ ಮತ್ತು ನಡತೆಯಲ್ಲಿ ಮುಸ್ಸೋಲಿನಿ ಹಿಟ್ಲರ್‌ನಿಗೆ ತುಂಬಾ ಹತ್ತಿರವಾಗಿದ್ದನು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗೆ ಸಂಬಂಧಿಸಿದಂತೆ ಇಟಲಿಯ ನಿಲುವು ಅಳುಕು, ನಿರ್ಲಿಪ್ತತೆಯಿಂದ

ಕೂಡಿದ್ದರೆ, ಜರ್ಮನಿಯೊಂದಿಗಿನ ಸ್ನೇಹಕ್ಕೆ ಸಂಬಂಧಿಸಿದಂತೆ ಅದು ನಿರಾತಂಕ ಹಾಗೂ ಅವಿಚ್ಛಿನ್ನತೆಯಿಂದ ಕೂಡಿತ್ತು. 1937 ರಲ್ಲಿ ಇಟಲಿ, ಬರ್ಲಿನ್-ರೋಮ್-ಟೋಕಿಯೋ ಮೈತ್ರಿಕೂಟವು ಏರ್ಪಟ್ಟಿತು. ಈ ಮೈತ್ರಿಕೂಟವನ್ನು ವಿಶ್ವದ ಭಾರೀ ತ್ರಿಕೋನ ಬಲವೆಂದು ಹಿಟ್ಲರ್ ಕರೆದನು. ಇದು ನಿರ್ವೀಯ ಕೂಟವಾಗಿರದೆ, ತಮ್ಮ ಹಕ್ಕಗಳು ಮತ್ತು ಮುಖ್ಯ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಸಿದ್ಧವಾಗಿರುವ ಸ್ವತಂತ್ರ ರಾಜ್ಯಗಳೆಂದು ಪರಿಗಣಿಸಿದನು.

1938 ರ ಮಾರ್ಚ್‌ನಲ್ಲಿ ಹಿಟ್ಲರ್ ಆಸ್ಟ್ರಿಯಾವನ್ನು ಆಕ್ರಮಿಸಿದನು. 1934 ರ ಜುಲೈನಲ್ಲಿ ಆಸ್ಟ್ರಿಯಾದ ರಕ್ಷರನೆಂದು ಕರೆದುಕೊಂಡ ಮುಸ್ಸೋಲಿನಿ ಅಬಿಸ್ಸೀನಿಯಾದ ಪ್ರಕರಣದ ನಂತರ ಪಾಶ್ಚಾತ್ಯ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳ ಮನಸ್ತಾಪವನ್ನು ಕಟ್ಟಿಕೊಂಡು ಏನೂ ಮಾಡಲಾಗಲಿಲ್ಲ. ಬದಲಾಗಿ ಆಸ್ಟ್ರಿಯಾದ ಬಗ್ಗೆ ತನಗೆ ಆಸಕ್ತಿಯೇ ಇಲ್ಲವೆಂದು ಹಿಟ್ಲರನಿಗೆ ತಿಳಿಸುವುದರ ಮೂಲಕ ಗೊಂದಲವನ್ನು ಸೃಷ್ಟಿಮಾಡಿದ. ಇದರಿಂದಾಗಿ ಹಿಟ್ಲರ್ ಕೃತಜ್ಞತೆ ಸಲ್ಲಿಸಿದ ನಿಜ. ಸ್ವತಂತ್ರ ನೀತಿಯನ್ನನುಸರಿಸಿ ಆಸ್ಟ್ರಿಯಾವನ್ನು ಇಟಲಿಯ ಆಶ್ರಿತರಾಜ್ಯವಾಗಿಸುವ ಮುಸ್ಸೋಲಿನಿಯ ಕನಸು ನನಸಾಗಲಿಲ್ಲ. 1939ರಲ್ಲಿ ಬ್ರಿಟನ್‌ನ 'ಸಂತುಷ್ಟ ನೀತಿ' ಯ ಬೆಂಬಲಿಗರು ಇಟಲಿಯನ್ನು ಒಲಿಸಿಕೊಳ್ಳುವ ಮತ್ತೊಂದು ಪ್ರಯತ್ನವನ್ನು ಮಾಡಿದರು. ಈ ಪ್ರಯತ್ನ 1939 ರ ಏಪ್ರಿಲ್ 16 ರಂದು ಏರ್ಪಟ್ಟ ಒಪ್ಪಂದದಲ್ಲಿ ಮುಕ್ತಾಯಗೊಂಡಿತು. ಒಪ್ಪಂದದ ಪ್ರಕಾರ ಉಭಯ ಪಕ್ಷಗಳೂ ಪರಸ್ಪರ ವೈಮನಸ್ಯದ ಪ್ರಚಾರವನ್ನು ನಿಲ್ಲಿಸಲು ಒಪ್ಪಿಕೊಂಡವು. ಹಾಗೆಯೇ ಭೂಮಧ್ಯ ಸಮುದ್ರದಲ್ಲಿ 'ಯಥಾಸ್ಥಿತಿ'ಯನ್ನು ಕಾಪಾಡುವುದಾಗಿಯೂ, ಬ್ರಿಟನ್ ತ್ಯಾನಾ ಸರೋವರದಲ್ಲಿ ಕೆಲವು ರಿಯಾಯಿತಿಗಳನ್ನು ಪಡೆಯುವುದಾಗಿಯೂ ತೀರ್ಮಾನವಾಯಿತು. ಇಟಲಿ ಸ್ಪೈನ್‌ನಿಂದ ಫ್ಯಾಸ್ಸೀ ಸ್ವಯಂ ಸೇವಕರನ್ನು ಹಿಂದಕ್ಕೆ ಕರೆಯಿಸಿಕೊಳ್ಳುವುದಾಗಿ ಒಪ್ಪಿಕೊಂಡಿತು. ಆದರೆ ಈ ಯಾವ ಷರತ್ತುಗಳನ್ನೂ ಇಟಲಿ ಪಾಲಿಸಲಿಲ್ಲ. ಒಪ್ಪಂದದಿಂದ ಏನೂ ಪ್ರಯೋಜನವಾಗದಿದ್ದರೂ ಇಟಲಿಯ ಪ್ರತಿಷ್ಠೆಯನ್ನು ಮಾತ್ರ ಹೆಚ್ಚಿಸಿತು. ಹಿಟ್ಲರ್ ಆಸ್ಟ್ರಿಯಾವನ್ನು ಆಕ್ರಮಿಸಿದ ಮೇಲಂತೂ ಇಟಲಿಯ ಪ್ರತಿಷ್ಠೆ ಬಹಳಷ್ಟು ಕುಂದಿತ್ತು. ಈಗ ಇಟಲಿಗೆ ಸ್ನೇಹಿತರ ಕೊರತೆಯಿಲ್ಲವೆಂದು ಹಿಟ್ಲರ್‌ನೊಂದಿಗೆ ಹೇಳಿಕೊಳ್ಳುವಂತಾಯಿತು.

## 116.12 ದ್ವಿತೀಯ ಮಹಾಯುದ್ಧದ ಅವಧಿಯಲ್ಲಿ ಇಟಲಿ

1939 ರ ಸೆಪ್ಟೆಂಬರ್‌ನಲ್ಲಿ ದ್ವಿತೀಯ ಮಹಾಯುದ್ಧ ಆರಂಭವಾಗಿದ್ದರೂ ಇಟಲಿ ತಟಸ್ಥವಾಗಿತ್ತು. ಮಿತ್ರರಾಷ್ಟ್ರಗಳು ಅತಿಯಾಗಿ ಬಳಲಿದ್ದ ಕಾಲದಲ್ಲಿಯೇ ಆಕ್ರಮಣ ನಡೆಸಬೇಕೆಂಬುದು ಇಟಲಿಯ ಯೋಜನೆಯಾಗಿತ್ತು. ಆಗಲೇ ವಿಶ್ವವು ಯುದ್ಧ ವಿನಾಶದಿಂದ ಇಟಲಿಯನ್ನು ರಕ್ಷಿಸಿ ಯುದ್ಧ ಸಂಪತ್ತಿನ ಹಂಚಿಕೆಯಲ್ಲಿ ಭಾಗವಹಿಸುವಂತೆ ಮಾಡುವುದೆಂದು ಮುಸ್ಸೋಲಿನಿ ನಂಬಿದ್ದನು. 1940 ರ ಜೂನ್‌ನಲ್ಲಿ ಫ್ರಾನ್ಸ್ ಪತನಗೊಳ್ಳುವ ಹಂತದಲ್ಲಿ ಅಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. 1940 ರ ಜೂನ್ 10 ರಂದು ಇಟಲಿ, ಬ್ರಿಟನ್ ಮತ್ತು ಫ್ರಾನ್ಸ್ ಮೇಲೆ ಯುದ್ಧ ಘೋಷಿಸಿತು. ಜರ್ಮನಿಯೊಂದಿಗೆ ಅಧಿಕೃತವಾಗಿ ತ್ರಿಕೂಟ ಮೈತ್ರಿಕೂಟವನ್ನು ಸೇರಿದ ಇಟಲಿ 1941 ರ ಜೂನ್‌ನಲ್ಲಿ ರಷ್ಯಾದ ವಿರೂದ್ಧವೂ, 1941ರ ಡಿಸೆಂಬರ್‌ನಲ್ಲಿ ಅಮೆರಿಕಾದ ವಿರುದ್ಧವೂ ಯುದ್ಧ ಘೋಷಿಸಿತು.

## 116.13 ಫ್ಯಾಸ್ಸಿಸ್ಟ್ ಇಟಲಿಯ ಪತನ

1942ರ ನಂತರ ಯುದ್ಧದ ಪಥ ಬದಲಾಯಿತು. ಇಟಲಿಯ ಸೈನ್ಯ ನಿರಂತರ ಸೋಲನ್ನನುಭವಿಸುವುದರೊಂದಿಗೆ ಮುಸ್ಸೋಲಿನಿ ಹಾಗೂ ಇಟಲಿಯ ಪತನ ಅನಿವಾರ್ಯವಾಯಿತು. ಜೊತೆಗೆ ಆಂತರಿಕ ಆರ್ಥಿಕ ಬಿಕ್ಕಟ್ಟು ಜನರನ್ನು ಕಂಗೆಡಿಸಿತ್ತು. 1943 ರ ಜುಲೈನಲ್ಲಿ ಮಿತ್ರರಾಷ್ಟ್ರಗಳು

ಸಿಸಿಲಿಯ ಮೇಲೆ ಧಾಳಿ ಮಾಡಿದವು. ಕೂಡಲೇ ಇಟಲಿಯ ದೊರೆ ಮುಸ್ಸೋಲಿನಿಯ ಬಂಧನಕ್ಕೆ ಆಜ್ಞೆ ಮಾಡಿದನು. ಆದರೆ ಜರ್ಮನಿಯ ಸೈನ್ಯ ಮುಸ್ಸೋಲಿನಿಯನ್ನು ಬಿಡುಗಡೆ ಮಾಡುವಲ್ಲಿ ಯಶಸ್ವಿಯಾಯಿತು. 1945 ರಲ್ಲಿ ಮಿತ್ರ ರಾಷ್ಟ್ರಗಳು ಉತ್ತರ ಇಟಲಿಯ ಮೇಲೆ ಧಾಳಿ ಮಾಡಿದಾಗ ಇಟಲಿ ಬೇಷರತ್ ಶರಣಾಗತಿಯನ್ನು ಪ್ರಕಟಿಸಿತು. ತನಗೂ ತನ್ನ ದೇಶಕ್ಕೂ ಒದಗಿದ್ದ ದುಸ್ಥಿತಿಯನ್ನು ಮನಗಂಡ ಮುಸ್ಸೋಲಿನಿ ದೇಶಬಿಟ್ಟು ಪಲಾಯನ ಮಾಡಲು ಯತ್ನಿಸಿದನು. ಇಟಲಿಯ ರಾಷ್ಟ್ರೀಯವಾದಿಯೊಬ್ಬ ಆತನನ್ನು ಗುಂಡಿಕ್ಕಿ ಕೊಂದನು. ಹೀಗಾಗಿ ಫ್ಯಾಸಿಸ್ಟ್ ಇಟಲಿ ಪತನಗೊಂಡಿತು.

## 116.14 ಮಾದರಿ ಪ್ರಶ್ನೆಗಳು

1) 1920-1945ರ ಅವಧಿಯ ಅಂತರರಾಷ್ಟ್ರೀಯ ಸಂಬಂಧದಲ್ಲಿ ಇಟಲಿಯ ಪಾತ್ರವನ್ನು ಚರ್ಚಿಸಿ.

2) ಫ್ಯಾಸಿಸ್ಟ್ ಇಟಲಿಯ ವಿದೇಶಾಂಗ ನೀತಿಯನ್ನು ಮತ್ತು ಅದಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ವ್ಯಕ್ತಪಡಿಸಿದ ಪ್ರತಿಕ್ರಿಯೆಯನ್ನು ಚರ್ಚಿಸಿ

3) ಎರಡು ಮಹಾಯುದ್ಧಗಳ ನಡುವಣ ಅವಧಿಯಲ್ಲಿ ಇಟಲಿ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ನೊಂದಿಗೆ ಹೊಂದಿದ್ದ ಸಂಬಂಧವನ್ನು ಚರ್ಚಿಸಿ.

4) ಇಟಲಿಯ ನೀತಿಯ ಮೂಲ ಉದ್ದೇಶಗಳೇನು? ಅವುಗಳನ್ನು ಇಟಲಿ ಹೇಗೆ ಈಡೇರಿಸಿತು?

## 116.15 ಅಧ್ಯಯನಕ್ಕಾಗಿ ಗ್ರಂಥಗಳು


1) Ernst Nolte : Three Faces of Fascism (1966)

2) F.L. Carsten : The Rise of Fascism (1967)

3) Benito Mussolini : My Autobiography (1938)

4) Gaudens Megaro : Mussolini in the Making (1938)

5) G. Salvemini : The Fascist Dictatorship in Italy (Vol.I 1935)

6) S.W. Halperin : Mussolini and Italian Fascism (1964)

7) E. Wiskemann : Fascism in Italy : Its Development and Influence (1969)

8) ಆರ್.ಜಿ. ಶಿವಣ್ಣ : ಆಧುನಿಕ ಯುರೋಪಿನ ಇತಿಹಾಸ

9) ರಾಮಲಿಂಗಪ್ಪ : ಯುರೋಪಿನ ಇತಿಹಾಸ



**ಮೂಲ : ಡಾ. ಸುಂದರರಾಜನ್**

**ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ**

# ಟಿಪ್ಪಣಿಗಳು

# ಘಟಕ-117

## ಹಿಟ್ಲರ್ ಮತ್ತು ನಾಝಿಸಂನ ಏಳಿಗೆ

*ರಚನಾಕ್ರಮ*


117.0 ಉದ್ದೇಶಗಳು

117.1 ಪೀಠಿಕೆ

117.2 ವೀಮರ್ ಗಣರಾಜ್ಯದ ಸಾಧನೆಗಳು

117.3 ಜರ್ಮನಿಯ ವಿದೇಶಾಂಗ ನೀತಿಯ ಉದ್ದೇಶಗಳು

117.4 ಜರ್ಮನಿ ಸಹಿಮಾಡಿದ ವಿವಿಧ ಒಪ್ಪಂದಗಳು

117.5 ಜರ್ಮನಿಯಲ್ಲಿ ನಾಝಿಸಂನ ಏಳಿಗೆ

117.6 ಹಿಟ್ಲರನ ಏಳಿಗೆ

117.7 ನಾಝಿಸಂನ ಬೆಳವಣಿಗೆಗೆ ನೆರವಾದ ಅಂಶಗಳು

117.7.1 ವರ್ಸೈಲ್ಸ್ ಒಪ್ಪಂದ

117.7.2 ಕಮ್ಯೂನಿಸಂನಿಂದ ಅಪಾಯ

117.7.3 ಆರ್ಥಿಕ ಬಿಕ್ಕಟ್ಟು

117.7.4 ಬಲಿಷ್ಠ ರಾಷ್ಟ್ರವಾದದ ಪುನಶ್ಚೇತನ

117.7.5 ಅಡಾಲ್ಫ್ ಹಿಟ್ಲರನ ನಾಯಕತ್ವ

117.7.6 ಇತರ ಅಂಶಗಳು

117.8 ಹಿಟ್ಲರನ ನೇತೃತ್ವದಲ್ಲಿ ಜರ್ಮನಿಯ ವಿದೇಶಾಂಗ ನೀತಿ

117.8.1 ರಾಷ್ಟ್ರಗಳ ಸಂಘ (ಲೀಗ್) ದಿಂದ ಹೊರಬಂದುದು

117.8.2 ಜರ್ಮನಿ ಮತ್ತು ಪೋಲೆಂಡ್ ನಡುವಣ ನಿರಾಕ್ರಮಣದ ಒಪ್ಪಂದ

117.8.3 ಸ್ಸಾರ್ ಪ್ರದೇಶದ ಪುನರ್ವಶ

117.8.4 ಆಸ್ಟ್ರೋ-ಜರ್ಮನ್ ಒಪ್ಪಂದ

117.8.5 ಇಟಲಿಯೊಂದಿಗಿನ ಒಪ್ಪಂದ

117.8.6 ಬರ್ಲಿನ್-ರೋಮ್-ಟೋಕಿಯೋ ಮೈತ್ರಿಕೂಟ

117.8.7 ಜರ್ಮನಿಯ ಶಸ್ತ್ರೀಕರಣ

117.8.8 ಸ್ಪೈನ್‌ನ ಅಂತರ್ಯುದ್ಧದಲ್ಲಿ ಮಧ್ಯಪ್ರವೇಶ

117.9 ಜೆಕೋಸ್ಲೊವಾಕಿಯಾದ ಮೇಲಿನ ಧಾಳಿ

117.9.1 ಜೆಕೋಸ್ಲೊವಾಕಿಯಾದಲ್ಲಿ ಹಿಟ್ಲರನ ಆಸಕ್ತಿ

117.9.2 ಮ್ಯೂನಿಚ್ ಒಪ್ಪಂದ

117.9.3 ಜೆಕೋಸ್ಲೊವಾಕಿಯಾದಿಂದ ಕೆಲವು ಪ್ರದೇಶಗಳ ನಿರ್ಗಮನ

117.10 ಹಿಟ್ಲರನ ಪ್ರಭಾವ

117.10.1 ಸೋವಿಯತ್ ರಷ್ಯಾದ ಮೇಲಿನ ಪರಿಣಾಮ

117.10.2 ಇಟಲಿಯ ಮೇಲಿನ ಪರಿಣಾಮ

117.10.3 ಫ್ರಾನ್ಸ್‌ನ ಮೇಲಿನ ಪರಿಣಾಮ

117.10.4 ಮಿತ್ರಕೂಟದ ಸಣ್ಣ ರಾಜ್ಯಗಳ ಮೇಲಿನ ಪರಿಣಾಮ

117.10.5 ಬಾಲ್ಕನ್ ರಾಷ್ಟ್ರಗಳ ಮೇಲಿನ ಪರಿಣಾಮ

117.10.6 ಇಂಗ್ಲೆಂಡ್‌ನ ಮೇಲಿನ ಪರಿಣಾಮ

117.11 ಮಾದರಿ ಪ್ರಶ್ನೆಗಳು

117.12 ಅಧ್ಯಯನಕ್ಕಾಗಿ ಗ್ರಂಥಗಳು

## 117.0 ಉದ್ದೇಶಗಳು

ಈ ಘಟಕದ ಅಧ್ಯಯನವು ವಿದ್ಯಾರ್ಥಿಗಳಿಗೆ ಈ ಕೆಳಗಿನ ಅಂಶಗಳನ್ನು ಪರಿಚಯಿಸುತ್ತದೆ.

1) ಹಿಟ್ಲರ್ ಮತ್ತು ನಾಜಿ ಜರ್ಮನಿಯ ಏಳಿಗೆ

2) ನಾಜಿಸಂನ ಬೆಳವಣಿಗೆಗೆ ಪ್ರೇರಣೆ ನೀಡಿದ ಅಂಶಗಳು

3) ನಾಜಿ ಜರ್ಮನಿಯ ವಿದೇಶಾಂಗ ನೀತಿ

4) ಜೆಕೋಸ್ಲೊವಾಕಿಯಾದಲ್ಲಿ ಹಿಟ್ಲರನ ಆಸಕ್ತಿ

5) ಹಿಟ್ಲರನ ಪ್ರಭಾವ ಮತ್ತು ಕೆಲವು ಐರೋಪ್ಯ ರಾಷ್ಟ್ರಗಳ ಮೇಲೆ ನಾಜಿಸಂ ಬೀರಿದ ಪ್ರಭಾವ

## 117.1 ಪೀಠಿಕೆ

ಪ್ರಥಮ ಮಹಾಯುದ್ಧದಲ್ಲಿ ಜರ್ಮನಿಯ ಪತನ ದೇಶದಲ್ಲಿ ಅಪೂರ್ವ ರಾಜಕೀಯ ಬೆಳವಣಿಗೆಗೆ ಕಾರಣವಾಯಿತು. ಜರ್ಮನ್ ಸೈನ್ಯದ ಹಿಮ್ಮೆಟ್ಟುವಿಕೆ ಹಾಗೂ ಜರ್ಮನ್ನರ ಸಂಕಷ್ಟಗಳಿಗೆ ಎರಡನೇ ಕೈಸರ್ ವಿಲಿಯಂನನ್ನು ಹೊಣೆಗಾರನನ್ನಾಗಿ ಮಾಡಲಾಯಿತು. ದೇಶದಾದ್ಯಂತ ನಡೆದ ರಾಜಪ್ರಭುತ್ವ ವಿರೋಧಿ ಕ್ರಾಂತಿಯು ಚಕ್ರವರ್ತಿಯನ್ನು ಸಿಂಹಾಸನ ತ್ಯಜಿಸುವಂತೆ ಮಾಡಿತು. ಆತ ತನ್ನ ಪರಿವಾರದೊಂದಿಗೆ ಹಾಲೆಂಡ್‌ನಲ್ಲಿ ಆಶ್ರಯ ಪಡೆದನು. ಅವನ ಸಿಂಹಾಸನ ಪರಿತ್ಯಾಗದೊಂದಿಗೆ ಜರ್ಮನಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಿತು. ಪ್ರಜಾತಾಂತ್ರಿಕ ರಾಷ್ಟ್ರೀಯ ಸಭೆಗೆ ಜರ್ಮನ್ ಗಣರಾಜ್ಯಕ್ಕೆ ಒಂದು ಪ್ರಜಾತಾಂತ್ರಿಕ ರಾಜ್ಯಾಂಗವನ್ನು ರೂಪಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಹೊಸ ರಾಜ್ಯಾಂಗವು 1918ನೇ ಆಗಸ್ಟ್ 11 ರಂದು ಜಾರಿಗೆ ಬಂದಿತು. ಅದನ್ನು ವೀಮರ್ ರಾಜ್ಯಾಂಗವೆಂದು ಕರೆಯಲಾಯಿತು.

## 117.2 ವೀಮರ್ ಗಣರಾಜ್ಯದ ಸಾಧನೆಗಳು

ಹೋಹೆನ್‌ಜೋಲರ್ನ್ ಪ್ರಭುಗಳು ಮತ್ತು ನಾಜಿಗಳ ಆಳ್ವಿಕೆಯ ವರ್ಷಗಳ ನಡುವೆ ಸಂಪರ್ಕ ಸೇತುವೆಯನ್ನು ನಿರ್ಮಿಸಿದ ವೀಮರ್ ಗಣರಾಜ್ಯಕ್ಕೆ ಅನೇಕ ಅದ್ವಿತೀಯ ಸಾಧನೆಗಳ ಕೀರ್ತಿ ಸಲ್ಲುತ್ತದೆ. 1924 ರಲ್ಲಿ ಡಾವ್ಸ್‌ಯೋಜನೆಯನ್ನು ಜಾರಿಗೆ ತಂದುದರಿಂದಾಗಿ ಜರ್ಮನಿ ಹಿಂದೆಂದೂ ಕಾಣದಿದ್ದ ಸಂಪದಭಿವೃದ್ಧಿಯನ್ನು ಕಂಡಿತು. ಕೈಗಾರಿಕೋತ್ಪನ್ನ ಭಾರೀ ಹೆಚ್ಚಳವನ್ನು ದಾಖಲಿಸಿತು. ವಿದೇಶೀಯ ರಾಷ್ಟ್ರಗಳು ನೀಡಿದ ಮುಂಗಡ ಹಣವು ಜರ್ಮನಿಯ ನಾಣ್ಯ ಪದ್ಧತಿಯನ್ನು ಪುನಶ್ಚೇತನಗೊಳಿಸಿತು. ಬದಲಾದ ಜರ್ಮನರ ಕೈಗಾರಿಕಾ ಮತ್ತು ಔದ್ಯಮಿಕ ಜೀವನವು ವಿನಾಶಕಾರಿ ಪೈಪೋಟಿಯನ್ನು ತಡೆಗಟ್ಟಿತು. ಜರ್ಮನಿಯಲ್ಲಿ ವಿದೇಶೀಯ ಕಂಪೆನಿಗಳ ಶಾಖೆಗಳನ್ನು ತೆರೆದುದರಿಂದಾಗಿ ಜರ್ಮನ್ ಕಚ್ಚಾ ವಸ್ತುಗಳ ವಿನಿಯೋಗ ಸಾಧ್ಯವಾದುದಲ್ಲದೆ ಜರ್ಮನ್ ಕಾರ್ಮಿಕರಿಗೆ ಉದ್ಯೋಗದ ಅವಕಾಶವೂ ದೊರೆಯಿತು.

## 117.3 ಜರ್ಮನಿಯ ವಿದೇಶಾಂಗ ನೀತಿಯ ಉದ್ದೇಶಗಳು

ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಜರ್ಮನಿ ಈ ಅವಧಿಯಲ್ಲಿ ಐದು ಉದ್ದೇಶಗಳನ್ನು ಪಾಲಿಸಿತು.

1) ಜರ್ಮನಿಯ ಆಕ್ರಮಿತ ಪ್ರದೇಶಗಳನ್ನು ತೆರವು ಮಾಡುವಂತೆ ಮಿತ್ರರಾಷ್ಟ್ರಗಳ ಮನವೊಲಿಸಿತು.

2) ಜರ್ಮನ್ ಸಂಸತ್ ರೀಚ್‌ಸ್ಟ್ಯಾಗ್‌ನ ಪರಮಾಧಿಕಾರವನ್ನು ಪುನರ್ ಸ್ಥಾಪಿಸುವುದು.

3) ಡ್ಯಾನ್‌ಜಿಗ್ ಅನ್ನು ಮರಳಿ ಪಡೆಯುವುದು.

4) ಮೇಲ್‌ಸೈಲಿಸಿಯಾದೊಂದಿಗೆ ಜರ್ಮನಿಯ ಗಡಿಯನ್ನು ಜೋಡಿಸುವುದು ಮತ್ತು

5) ಪರಿಹಾರದ ಸಮಸ್ಯೆಗಳನ್ನು ಜರ್ಮನಿಯ ಸಾಮರ್ಥ್ಯಕ್ಕನುಗುಣವಾಗಿ ನಿರ್ಧರಿಸುವುದು. ಈ ಉದ್ದೇಶಗಳನ್ನು ಈಡೇರಿಸುವುದರ ಮೂಲಕ ಜರ್ಮನಿ ಸ್ವತಃ ನಿರ್ಣಯಗಳನ್ನು ಕೈಗೊಳ್ಳಲು ಬಯಸಿತು.

## 117.4 ಜರ್ಮನಿ ಸಹಿ ಮಾಡಿದ ವಿವಿಧ ಒಪ್ಪಂದಗಳು

ಈ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಜರ್ಮನಿ 'ಲೊಕಾರ್ನೋ' ಒಪ್ಪಂದಗಳಿಗೆ ಸಹಿ ಹಾಕಿತು. ಅದರ ಮೂಲಕ ಫ್ರಾನ್ಸ್‌ನೊಂದಿಗಿನ ಎಲ್ಲೆಗಳನ್ನು ನಿರ್ಧರಿಸಲಾಯಿತು. 1922 ರಲ್ಲಿ ರಷ್ಯಾದೊಂದಿಗೆ 'ರಪಾಲ್ಲೋ' ಒಪ್ಪಂದವನ್ನು ಏರ್ಪಡಿಸಿಕೊಳ್ಳಲಾಯಿತು. ಇದರ ಮೂಲಕ ಉಭಯ ಪಕ್ಷಗಳೂ ಪರಸ್ಪರ ವಿರುದ್ಧವಾದ ಬೇಡಿಕೆಗಳನ್ನು ಕೈಬಿಟ್ಟು, ವಾಣಿಜ್ಯ ಕ್ಷೇತ್ರದಲ್ಲಿ ಪರಸ್ಪರ ಸಹಕರಿಸುವಂತೆ ಒಪ್ಪಿಕೊಂಡವು. 1926 ಜರ್ಮನಿ ಲೀಗ್ ಆಫ್ ನೇಷನ್ಸ್‌ನ ಸದಸ್ಯತ್ವವನ್ನು ಪಡೆಯಿತು. ಭದ್ರತಾ ಸಮಿತಿಯ ತಾತ್ಕಾಲಿಕ ಸದಸ್ಯ ಸ್ಥಾನವೂ ಲಭಿಸಿತು. 1924 ರಲ್ಲಿ ರೂರ್ ಕಣಿವೆ ಪ್ರದೇಶದಿಂದ ವಿದೇಶೀಯ ಸೈನ್ಯವನ್ನು ಹಿಂತೆಗೆದುಕೊಳ್ಳುವ ಭರವಸೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು. 1930 ರಲ್ಲಿ ಕಣಿವೆಯನ್ನು ಮುಕ್ತಗೊಳಿಸಲಾಯಿತು. 1930 ರಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಬೆಲ್ಜಿಯಂ ರೈನ್‌ಲ್ಯಾಂಡ್ ಪ್ರದೇಶದಿಂದ ತಮ್ಮ ಸೈನ್ಯವನ್ನು ಹಿಂತೆಗೆದುಕೊಳ್ಳುವುದಾಗಿ ಒಪ್ಪಿಕೊಂಡವು. ಪರಿಹಾರದ ಸಮಸ್ಯೆಯು ಬಹುಮಟ್ಟಿಗೆ 'ಯಂಗ್‌ಯೋಜನೆ' ಯಿಂದ ಇತ್ಯರ್ಥವಾಯಿತು. 1932 ರ ಜೂನ್‌ನಲ್ಲಿ ನಡೆದ ಲಾಸೇನ್ ಸಮ್ಮೇಳನದಲ್ಲಿ ಜರ್ಮನಿಯ ಪರಿಹಾರದ ಮೊತ್ತವನ್ನು 750 ಮಿಲಿಯ ಡಾಲರುಗಳಿಗೆ ಕಡಿತಗೊಳಿಸಲಾಯಿತು. ಈ ಮೊತ್ತವನ್ನೂ ಜರ್ಮನಿ ಪೂರ್ತಿಯಾಗಿ ಪಾವತಿಸಲಿಲ್ಲ. ಆರ್ಥಿಕ ಹಾಗೂ ರಾಜತಾಂತ್ರಿಕ ಪುನಶ್ಚೇತನದೊಂದಿಗೆ ಜರ್ಮನಿ ಮತ್ತೆ ಶಸ್ತ್ರೀಕರಣದ ಕಾರ್ಯವನ್ನಾರಂಭಿಸಿತು. ಹೊಸ ಆಯುಧಗಳ ಪೂರೈಕೆಯ ಮೂಲಕ ಸೈನ್ಯವನ್ನು ಸಜ್ಜುಗೊಳಿಸಲಾಯಿತು. 1931 ರಲ್ಲಿ ವಿಶ್ವವ್ಯಾಪಿ ಆರ್ಥಿಕ ಮುಗ್ಗಟ್ಟು ತೀವ್ರ ಪರಿಣಾಮ ಬೀರಿದ್ದಾಗ ಜರ್ಮನಿ ಸೈನ್ಯಕ್ಕಾಗಿ 700 ಮಿಲಿಯ ಡಾಲರುಗಳನ್ನು ಖರ್ಚು ಮಾಡುತ್ತಿತ್ತು. 1925 ಜರ್ಮನಿಯ ಸಮೃದ್ಧಿಯ ಮೊದಲನೆಯ ವರ್ಷವಾಗಿತ್ತು. ಆಗ ಸೈನ್ಯಕ್ಕಾಗಿ ಖರ್ಚು ಮಾಡುವುದಕ್ಕಿಂತ 250 ಮಿಲಿಯ ಡಾಲರುಗಳಷ್ಟು ಹೆಚ್ಚು ಹಣವನ್ನು 1931 ರಲ್ಲಿ ಸೈನ್ಯಕ್ಕಾಗಿ ಖರ್ಚು ಮಾಡುತ್ತಿತ್ತು. 1933 ರ ಆರಂಭದಲ್ಲಿ ಜರ್ಮನಿ ಹಿಟ್ಲರನ ಅಧೀನಕ್ಕೊಳಪಟ್ಟಿತು.

## 117.5 ಜರ್ಮನಿಯಲ್ಲಿ ನಾಝಿಸಂನ ಏಳಿಗೆ

ಜರ್ಮನಿಯಲ್ಲಿ ನಾಝಿ ಚಳುವಳಿಯ ನಾಯಕ ಅಡಾಲ್ಫ್ ಹಿಟ್ಲರ್ ಆಸ್ಟ್ರಿಯಾದ ಪೌರ. ಒಬ್ಬ ಸುಂಕದ ಅಧಿಕಾರಿಯ ಮಗ. ಪ್ರಥಮ ಮಹಾಯುದ್ಧ ಆರಂಭವಾದಾಗ ಬವೇರಿಯಾದ ಸೈನ್ಯದಲ್ಲಿ ಸ್ವಯಂ ಸೇವಕನಾಗಿ ಸೇರಿದನು. ಯುದ್ಧಾನಂತರ ರಾಜಕೀಯ ಜೀವನವನ್ನು ಆರಂಭಿಸಿದನು. 1920 ರಲ್ಲಿ ಜರ್ಮನ್ ದುಡಿಮೆಗಾರರ ಪಕ್ಷವನ್ನು ಸೇರಿದನು. ಇದೇ ಪಕ್ಷ ಮುಂದೆ ಜರ್ಮನ್ ರಾಷ್ಟ್ರೀಯವಾದಿ ಸಮಾಜವಾದಿ ದುಡಿಮೆಗಾರರ ಪಕ್ಷ ಅಥವಾ ನಾಝಿ ಪಕ್ಷವೆನಿಸಿತು. ಪಕ್ಷದ ನಾಯಕ ಡೀಕ್ಸ್ಟರ್‌ನನ್ನು ಪದಚ್ಯುತಿಗೊಳಿಸಿ ತಾನೇ ನಾಯಕನಾದನು. 1923 ರಲ್ಲಿ ಸರಕಾರವನ್ನು ಉರುಳಿಸುವ ಪ್ರಯತ್ನ ನಡೆಸಿ ಅಧಿಕಾರಿಗಳೊಂದಿಗೆ ಸಂಘರ್ಷಕ್ಕಿಳಿದನು. 1918 ರ ದೇಶದ್ರೋಹಿಗಳ ವಿರುದ್ಧ ತೀವ್ರ ದೇಶದ್ರೋಹ ಎಂಬ ಆಪಾದನೆ ಇಲ್ಲ ಎಂದು ವಿಚಾರಣೆಯ ಸಂದರ್ಭದಲ್ಲಿ ತಿಳಿಸಿದನು. ಆತನಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಆದರೆ ಒಂಬತ್ತು ತಿಂಗಳುಗಳಲ್ಲಿಯೇ ಬಿಡುಗಡೆ ಹೊಂದಿದನು. ಈ ಜೈಲು ವಾಸದ

ಸಂದರ್ಭದಲ್ಲಿಯೇ ಆತ 'ಮೈನ್‌ಕ್ಯಾಂಫ್' ಅಥವಾ 'ನನ್ನ ಹೋರಾಟ' ಎಂಬ ಕೃತಿಯನ್ನು ರಚಿಸಿದುದು. ಈ ಕೃತಿಯಲ್ಲಿ ಬಹುಮತದ ಆಳ್ವಿಕೆಯ ಸಂಸದೀಯ ಪ್ರಯೋಗವನ್ನು ಧಿಕ್ಕರಿಸಿ ಪ್ರದೇಶಗಳನ್ನು ಕಬಳಿಸುವ ಜರ್ಮನಿಯ ಭವಿಷ್ಯದ ಯೋಜನೆಯನ್ನು ಪ್ರತಿಪಾದಿಸಿದನು.

## 117.6 ಹಿಟ್ಲರನ ಏಳಿಗೆ

ಹಿಟ್ಲರನ ಬಂಧನದ ಸಮಯದಲ್ಲಿ ನಾಝಿ ಪಕ್ಷವು ಪ್ರಾಮುಖ್ಯತೆಯನ್ನು ಕಳೆದುಕೊಂಡು ಅವನತಿಯ ಹಾದಿ ಹಿಡಿದಿತ್ತು. 1924 ರ ಚುನಾವಣೆಯಲ್ಲಿ ಅದರ ಬೆಂಬಲಿಗರ ಸಂಖ್ಯೆ ಗಮನಾರ್ಹವಾಗಿ ಕುಂಠಿತಗೊಂಡಿತು. 1925ರಲ್ಲಿ ಪಕ್ಷವನ್ನು ಪುನರ್‌ರಚಿಸಿದ ಮೇಲೆ ಅದರ ಜನಪ್ರಿಯತೆ ಹೆಚ್ಚಿತು. 1932 ರ ಚುನಾವಣೆಯಲ್ಲಿ ರಿಚ್‌ಸ್ಟಾಗಿನ 608 ಸ್ಥಾನಗಳಲ್ಲಿ ನಾಝಿ ಪಕ್ಷವು 230 ಸ್ಥಾನಗಳನ್ನು ಪಡೆಯಿತು. ಅಧಿಕಾರವನ್ನು ಪಡೆಯಲೇಬೇಕೆಂಬ ಛಲದಿಂದಿದ್ದ ಹಿಟ್ಲರ್ 1932 ರಲ್ಲಿ ಅಧ್ಯಕ್ಷೀಯ ಚುನಾವಣೆಗಳಲ್ಲಿ ಸ್ಪರ್ಧಿಸಿದನು. ಆದರೆ ಹಿಂಡನ್‌ಬರ್ಗ್‌ನಿಗೆ ತೀರಾ ಕಡಿಮೆ ಅಂತರದಿಂದ ಸೋತನು. ಹಿಂಡನ್‌ಬರ್ಗ್ ಷ್ಲೀಚರ್‌ನನ್ನು ಛಾನ್ಸಲರ್ ಪದವಿಯಿಂದ ವಜಾಮಾಡಿ ಹಿಟ್ಲರ್‌ನನ್ನೇ ಛಾನ್ಸಲರ್‌ನನ್ನಾಗಿ ನೇಮಿಸಿದನು. ರಿಚ್‌ಸ್ಟ್ಯಾಗನ್ನು ವಿಸರ್ಜಿಸಿ 1933 ರ ಮಾರ್ಚ್ 5 ರಂದು ಚುನಾವಣೆ ನಡೆಯಬೇಕೆಂದು ಆಜ್ಞೆ ಮಾಡಿದನು. ಮತದಾನಕ್ಕೆ ಆರು ದಿವಸಗಳಿದ್ದಾಗ ರಿಚ್‌ಸ್ಟ್ಯಾಗಿನ ಕಟ್ಟಡವನ್ನು ಸುಟ್ಟು ಹಾಕಲಾಯಿತು. ದೊಂಬಿ ಮತ್ತು ರಕ್ತಗತ ಕ್ರಾಂತಿಯ ಆರೋಪವನ್ನು ಕಮ್ಯೂನಿಸ್ಟರ ಮೇಲೆ ಹೊರಿಸಲಾಯಿತು. ಸಾವಿರಾರು ಕಮ್ಯೂನಿಸ್ಟರ ಮತ್ತು ಸಮಾಜವಾದಿ ಪ್ರಜಾಪ್ರಭುತ್ವವಾದಿಗಳ ಬಂಧನಕ್ಕೆ ಆಜ್ಞೆ ಮಾಡಿದನು. ನಾಜಿ ವಿರೋಧಿ ಪಕ್ಷಗಳ ಪ್ರಚಾರ ಕಾರ್ಯವನ್ನು ನಿಷೇಧಿಸಿದನು. ಮತದಾನ ಮಾಡಿದವರಲ್ಲಿ ಶೇ. 40 ರಷ್ಟು ಮತದಾರರ ಮತಗಳನ್ನು ಮಾತ್ರ ನಾಜಿ ಪಕ್ಷವು ಗಳಿಸಲು ಸಾಧ್ಯವಾಗಿತ್ತು. ಆದರೆ ಹಿಟ್ಲರ್ ಕಮ್ಯೂನಿಸ್ಟ್ ಪ್ರತಿನಿಧಿಗಳನ್ನು ಸೆರೆಯಲ್ಲಿಡುವುದುರ ಮೂಲಕ ರಿಚ್‌ಸ್ಟ್ಯಾಗ್‌ನಲ್ಲಿ ನಾಜಿಗಳು ಬಹುಮತಗಳಿಸುವಂತೆ ನೋಡಿಕೊಂಡನು. ಮೂರು ತಿಂಗಳುಗಳೊಳಗೆ ಎಲ್ಲಾ ರೀತಿಯ ವಿರೋಧಗಳನ್ನು ಹತ್ತಿಕ್ಕಲಾಯಿತು. 1934 ರ ಆಗಸ್ಟ್‌ನಲ್ಲಿ ಹಿಂಡನ್‌ಬರ್ಗ್ ಮರಣ ಹೊಂದಿದಾಗ ಹಿಟ್ಲರ್ ತಾನೇ ಜರ್ಮನಿಯ ಅಧ್ಯಕ್ಷನಾದನು. ಎನೇಬ್ಲಿಂಗ್ ಆಕ್ಟ್ (ಸಾಧ್ಯತೆಯ ಕಾಯಿದೆ) ನಿಂದ ಹಿಟ್ಲರ್ ಸರ್ವಾಧಿಕಾರಿಯ ಅಧಿಕಾರವನ್ನು ಪಡೆದನು.

## 117.7 ನಾಝಿಸಂನ ಬೆಳವಣಿಗೆಗೆ ನೆರವಾದ ಅಂಶಗಳು

1929ರವರೆಗೆ ಹಿಟ್ಲರನ ಬಗ್ಗೆ ಯಾರಿಗೂ ಹೆಚ್ಚು ತಿಳಿದಿರಲಿಲ್ಲ. 1934 ರ ವೇಳೆಗೆ ಏಕಾಏಕಿ ಜರ್ಮನಿಯ ನಿರ್ವಿವಾದಿತ ನಾಯಕನಾಗಿ ಹೊರಹೊಮ್ಮಿದನು. ಹಿಟ್ಲರ್ ಅಧಿಕಾರಕ್ಕೇರಲು ಈ ಕೆಳಗಿನ ಅಂಶಗಳು ಸಹಾಯಕವಾಗಿವೆ.

### *117.7.1 ವರ್ಸೈಲ್ಸ್ ಒಪ್ಪಂದ*

1919 ರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಜರ್ಮನಿಯೊಂದಿಗೆ ಅವಮಾನಕರ ರೀತಿಯಲ್ಲಿ ವರ್ತಿಸಿದ್ದು, ಹಿಟ್ಲರ್ ಜನಪ್ರಿಯವಾಗುವುದಕ್ಕೆ ಬಳಸಿಕೊಂಡ ಪ್ರಬಲ ಅಂಶವಾಗಿತ್ತು. ಡಾ. ಲಾಂಗ್‌ಸಮ್ ಹೇಳಿದಂತೆ "ಫ್ರಾನ್ಸಿನ ಶತ್ರುತ್ವ ನೀತಿ, ರೂರ್ ಕಣಿವೆಯ ಬಗೆಗಿನ ಸಂಘರ್ಷ, ರೈನ್‌ಲ್ಯಾಂಡಿನ ಆಕ್ರಮಣ, ಸ್ವಾರ್ ಕಣಿವೆ ಪ್ರದೇಶದ ಅಂತರರಾಷ್ಟ್ರೀಕರಣ, ನಿಶ್ಯಸ್ತ್ರೀಕರಣದ ಬಗೆಗಿನ ದ್ವಂದ್ವ ನೀತಿ" ಇವೆಲ್ಲಾ ಕಾರಣಗಳಿಂದಾಗಿ ಜರ್ಮನ್ನರ ಕೋಪ ಉಲ್ಬಣಗೊಂಡಿತು.

### 117.7.2 ಕಮ್ಯೂನಿಸಂನಿಂದ ಅಪಾಯ

ರಷ್ಯಾದಲ್ಲಿ ಬೋಲ್ಶೆವಿಕರ ಯಶಸ್ಸು ಮತ್ತು ಜರ್ಮನಿಯಲ್ಲಿ ಹೆಚ್ಚಾದ ಕಮ್ಯೂನಿಸಂನ ಬಲವನ್ನೂ ಹಿಟ್ಲರ್ ಸದುಪಯೋಗ ಪಡಿಸಿಕೊಂಡ. 1930 ರಲ್ಲಿ ರಿಚ್‌ಸ್ಟ್ಯಾಗಿನಲ್ಲಿ 77 ಮಂದಿ ಸದಸ್ಯರನ್ನು ಹೊಂದಿದ್ದ ಕಮ್ಯೂನಿಸ್ಟರು 1932 ರಲ್ಲಿ ನಡೆದ ಪ್ರಥಮ ಹಾಗೂ ದ್ವಿತೀಯ

ಚುನಾವಣೆಗಳಲ್ಲಿ ತಮ್ಮ ಸದಸ್ಯರ ಸಂಖ್ಯೆಯನ್ನು ಕ್ರಮವಾಗಿ 89 ಮತ್ತು 100 ಕ್ಕೆ ಹೆಚ್ಚಿಸಿಕೊಂಡರು. ಕಮ್ಯೂನಿಸ್ಟರ ಬಗ್ಗೆ ಜರ್ಮನರಿಗೆ ಮೊದಲೇ ಭಯವಿದ್ದುದರಿಂದ ನಾಝಿಗಳು ಈ ಅಸಹಾಯಕತೆಯನ್ನು ಪೂರ್ಣವಾಗಿ ಬಳಸಿಕೊಂಡರು. "ರಾಷ್ಟ್ರೀಯ ಸಮಾಜವಾದೀ ಪಕ್ಷ ಪತನಗೊಂಡರೆ ಜರ್ಮನಿಯಲ್ಲಿ ಮತ್ತೂ 10 ಮಿಲಿಯ ಕಮ್ಯೂನಿಸ್ಟರಿರುವರು" ಎಂಬ ಘೋಷಣೆಯನ್ನು ಹೊರಡಿಸಿದರು. ಬೋಲ್ಷೆವಿಕರ ಸಿದ್ಧಾಂತಗಳ ಬಗ್ಗೆ ಭಯದಿಂದಿದ್ದ ಅಸಂಖ್ಯ ಕೈಗಾರಿಕೋದ್ಯಮಿಗಳು ಮತ್ತು ಶ್ರೀಮಂತರು ನಾಜಿ ಪಕ್ಷವನ್ನೇ ಬೆಂಬಲಿಸಿದರು.

### *117.7.3 ಆರ್ಥಿಕ ಬಿಕ್ಕಟ್ಟು*

ಯುದ್ಧೋತ್ತರ ಜರ್ಮನಿಯಲ್ಲಿನ ಆರ್ಥಿಕ ಬಿಕ್ಕಟ್ಟನ್ನು ನಾಜಿಗಳು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡರು. ಹಣದುಬ್ಬರದಿಂದಾಗಿ ರೈತರು ಮತ್ತು ಅಂಗಡಿಗಳ ಒಡೆಯರ ಪರಿಸ್ಥಿತಿ ಹದಗೆಟ್ಟಿತು. ಸಾಮೂಹಿಕ ನಿರುದ್ಯೋಗ ನಗರ ಪ್ರದೇಶದ ಜನರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಿತು. ಕೃಷಿಕರ ಪರಿಸ್ಥಿತಿಯೇನೂ ಉತ್ತಮವಾಗಿರಲಿಲ್ಲ. ರೈತರು ಮತ್ತು ಸಣ್ಣವ್ಯಾಪಾರಿಗಳಿಗೆ ರಾಷ್ಟ್ರೀಯ ಸಮಾಜವಾದಿಗಳು ತುಂಬು ಭರವಸೆ ನೀಡಿದರು. ಒಟ್ಟಿನಲ್ಲಿ ಇಟಲಿಯ ಫ್ಯಾಸಿಸ್ಟರಂತೆ ರಾಷ್ಟ್ರೀಯ ಸಮಾಜವಾದಿಗಳೂ ಕೂಡ ಎಲ್ಲರಿಗೂ ಸ್ವರ್ಗ ಸುಖದ ಭರವಸೆಯನ್ನು ನೀಡಿದರು.

### *117.7.4 ಬಲಿಷ್ಠ ರಾಷ್ಟ್ರವಾದದ ಪುನಶ್ಚೇತನ*

ಗುಣ ಸ್ವಭಾವದಲ್ಲಿ ಜರ್ಮನರು ಪ್ರತಿಷ್ಠೆ, ವೈಭವಕ್ಕೆ ಭಾರೀ ಗೌರವ ನೀಡುತ್ತಿದ್ದ ಜನ, ದೇಶಕ್ಕೆ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲೊಬ್ಬ ಬಲಿಷ್ಠ ವ್ಯಕ್ತಿ ಬೇಕೆಂದು ಹಂಬಲಿಸುತ್ತಿದ್ದರು. ಹಿಟ್ಲರನಲ್ಲಿ ಆ ವ್ಯಕ್ತಿಯನ್ನು ಕಂಡಾಗ ಆತನಿಗೆ ಅಪೂರ್ವ ಸ್ವಾಗತವನ್ನು ನೀಡಲಾಯಿತು. ಅತೃಪ್ತ ದುಡಿಮೆಗಾರರನ್ನು ತನ್ನೆಡೆಗೆ ಸೆಳೆಯುತ್ತಿದ್ದ ಕಮ್ಯೂನಿಸಂನ ಪ್ರಭಾವವನ್ನು ತಡೆಗಟ್ಟಲು ಅಂತಹ ಬಲಿಷ್ಠ ವ್ಯಕ್ತಿ ಜರ್ಮನರಿಗೆ ಬೇಕಾಗಿದ್ದನು.

### *117.7.5 ಅಡಾಲ್ಫ್ ಹಿಟ್ಲರನ ನಾಯಕತ್ವ*

ನಾಜಿಸಂನ ಏಳಿಗೆಯಲ್ಲಿ ಹಿಟ್ಲರನ ವ್ಯಕ್ತಿತ್ವವೇ ಪ್ರಧಾನ ಅಂಶವಾಗಿತ್ತು. ರಾಜಕೀಯ ಕ್ರಾಂತಿಗಿಂತ ಮೊದಲು ಮನಶಾಸ್ತ್ರೀಯ (ಬೌದ್ಧಿಕ) ಕ್ರಾಂತಿ ನಡೆಯಬೇಕೆಂಬುದು ಅವನಿಗೆ ಮನವರಿಕೆಯಾಗಿತ್ತು. ಈ ಬೌದ್ಧಿಕ ಕ್ರಾಂತಿಯನ್ನು ತನ್ನ 'ಮೈನ್ ಕಾಂಫ್' ನ ಮೂಲಕ ಪ್ರಾರಂಭಿಸಿ ಯುವ ಜರ್ಮನರನ್ನು ಮಾನಸಿಕವಾಗಿ ಸಿದ್ಧಗೊಳಿಸಬೇಕೆಂಬುದನ್ನು ಅರಿತಿದ್ದನು. ಆಗಲೇ 1918 ರ ವಿಜಯಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಸಾಧ್ಯವೆಂದು ಮನದಟ್ಟು ಮಾಡಲು ಪ್ರಯತ್ನಿಸಿದನು.

### *117.7.6 ಇತರ ಅಂಶಗಳು*

ಜನಾಂಗ-ವಿರೋಧೀ ಪ್ರಚಾರ ಮತ್ತು ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಿನ ಅಭಾವ ನಾಜಿಗಳ ಏಳಿಗೆಗೆ ನೆರವಾದ ಇತರ ಅಂಶಗಳು. ಜರ್ಮನ್ ಸಮಾಜದ ಶ್ರೀಮಂತ ವರ್ಗಕ್ಕೆ ಸೇರಿದ್ದ ಯಹೂದ್ಯರು ಒಂದು ಪ್ರತ್ಯೇಕ ವಂಶಕ್ಕೆ ಸೇರಿದ್ದಲ್ಲದೆ ವಿದೇಶೀಯರೆಂಬ ಅಳಲನ್ನು ನಾಜಿಗಳು ತೋಡಿಕೊಂಡರು. ಜರ್ಮನರ ಕಷ್ಟಕಾರ್ಪಣ್ಯಗಳಿಗೆ ಯಹೂದ್ಯರೇ ಕಾರಣರೆಂಬ ಭಾವನೆಯನ್ನು ಮೂಡಿಸುವುದರಲ್ಲಿ ನಾಜಿಗಳು ಯಶಸ್ವಿಯಾದರು. ಒಗ್ಗಟ್ಟಿಲ್ಲದ ವಿರೋಧ ಪಕ್ಷಗಳು ನಾಜಿಗಳ ಅಧಿಕಾರಕ್ಕೆ ಕಡಿವಾಣ ಹಾಕುವಲ್ಲಿ ವಿಫಲವಾದವು. ಹೀಗಾಗಿ ಹಿಟ್ಲರ್ ರಾಜ್ಯಾಂಗ ಬದ್ಧವಾಗಿಯೇ ಅಧಿಕಾರಕ್ಕೇರಿದ. ಆಕಾಶದಲ್ಲಿಯೇ ಸ್ಥಾನವನ್ನು ಪಡೆಯುವ ಜರ್ಮನರ ಆಕಾಂಕ್ಷೆಗೆ ಹಿಟ್ಲರ್ ಪೂರ್ಣ ಒತ್ತಾಸೆ ನೀಡಿದನು.

## 117.8 ಹಿಟ್ಲರನ ನೇತೃತ್ವದಲ್ಲಿ ಜರ್ಮನಿಯ ವಿದೇಶಾಂಗ ನೀತಿ

ಮುಂದೆ ನಾಝಿ ಪಕ್ಷವೆಂದು ಕರೆಯಲಾದ ರಾಷ್ಟ್ರೀಯ ಸಮಾಜವಾದೀ ಜರ್ಮನ್ ದುಡಿಮೆಗಾರರ ಸಂಘವು ಯೋಜಿಸಿದ ಕಾರ್ಯಕ್ರಮಗಳಲ್ಲಿ ಹಿಟ್ಲರನ ನೇತೃತ್ವದ ಜರ್ಮನಿಯ ವಿದೇಶಾಂಗ ನೀತಿಯ ತತ್ವಗಳು ಅಡಗಿದ್ದವು. ಹಿಟ್ಲರನ ಕೃತಿ ಮೈನ್ ಕ್ಯಾಂಫ್‌ನಲ್ಲೂ ಅದನ್ನೇ ಪ್ರತಿಪಾದಿಸಲಾಗಿತ್ತು. ಅದರ ಮೂರು ಅಂಶಗಳ ವಿದೇಶಾಂಗ ನೀತಿಯ ಯೋಜನೆಯಲ್ಲಿ ರಾಷ್ಟ್ರೀಯ ಸಮಾಜವಾದೀ ಜರ್ಮನ್ ದುಡಿಮೆಗಾರರ ಸಂಘವು ಈ ಕೆಳಗಿನ ಉದ್ದೇಶಗಳನ್ನು ಮುಂದಿಟ್ಟಿತು. (1) ಜರ್ಮನ್ ವಂಶಸ್ಥರೆಲ್ಲಾ ಸ್ವಯಂ ನಿರ್ಣಯದ ಹಕ್ಕಿನ ಆಧಾರದ ಮೇಲೆ ವಿಶಾಲ ಜರ್ಮನಿಯಲ್ಲಿ ಸಂಘಟಿತರಾಗುವುದು. (2) ವರ್ಸೈಲ್ಸ್ ಮತ್ತು ಸೈಂಟ್ ಜರ್ಮೈನ್ ಶಾಂತಿ ಒಪ್ಪಂದಗಳನ್ನು ರದ್ದುಗೊಳಿಸುವುದು. (3) ಜರ್ಮನರ ಬೆಂಬಲಕ್ಕಾಗಿ ಮತ್ತು ಹೆಚ್ಚುವರಿ ಜರ್ಮನ್ ಜನಸಂಖ್ಯೆಯನ್ನು ತಳವೂರಿಸಲು ಹೆಚ್ಚಿನ ಪ್ರದೇಶಗಳನ್ನು ಪಡೆಯುವುದು.

ಜರ್ಮನಿಯ ವಿದೇಶಾಂಗ ನೀತಿಯ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅನುಸರಿಸಬೇಕಾದ ವಿಧಾನದ ಬಗ್ಗೆ ಹಿಟ್ಲರ್ ಹೇಳಿದ್ದೇನೆಂದರೆ -"ಸೈನ್ಯಬಲದ ಬಲತ್ಕಾರವನ್ನು ಪ್ರಯೋಗಿಸುವುದು ಮತ್ತು ರಾಜಿಯನ್ನು ವಿರೋಧಿಸುವುದು" ನೀಡುವುದಕ್ಕೆ ಬದಲಾಗಿ ಕೊಂಡುಕೊಳ್ಳುವುದೇ ಹೊಸ ಆಡಳಿತದ ಮೂಲ ಮಂತ್ರವಾಗಿತ್ತು. ಒಪ್ಪಂದಗಳನ್ನು ಪರಸ್ಪರ ಸಮಾಲೋಚನೆಯ ಮೂಲಕ ಪರಿಷ್ಕರಿಸುವುದಕ್ಕೆ ಸಹಕರಿಸುವ ಬದಲು ಏಕಪಕ್ಷೀಯವಾಗಿ ಉಲ್ಲಂಘಿಸಿ ನುಚ್ಚುನೂರು ಮಾಡುವುದೇ ಧ್ಯೇಯವಾಯಿತು. ಯಾವುದೇ ರೀತಿಯ ಎಚ್ಚರಿಕೆಯನ್ನು ನೀಡದೆ ಏಕಾಏಕಿ ತನ್ನ ಕ್ರಮಗಳನ್ನು ಹೇರುವುದರ ಮೂಲಕ ವಿಶ್ವವನ್ನು ತಲ್ಲಣಗೊಳಿಸುವುದು ಮತ್ತು ಸಂಕ್ಷೋಭೆಯ ವಾತಾವರಣವನ್ನು ಸೃಷ್ಟಿಸಿ ಯುರೋಪನ್ನು ಗೊಂದಲಕ್ಕೀಡುಮಾಡುವುದು ನಾಜಿ ಜರ್ಮನಿಯ ಉದ್ದೇಶಗಳಾಗಿದ್ದವು.

### *117.8.1 ರಾಷ್ಟ್ರಸಂಘ (ಲೀಗ್) ದಿಂದ ಹೊರಬಂದುದು*

ಹಿಟ್ಲರ್ ವರ್ಸೈಲ್ಸ್ ಒಪ್ಪಂದವನ್ನು ಒಂದು ಕಾಗದದ ಚೂರಿಗೆ ಸಮನಾಗಿಸಲು ಬಯಸಿದನು. 1933 ರ ಅಕ್ಟೋಬರಿನಲ್ಲಿ ಲೀಗಿನಿಂದ ಹೊರಬರುವುದಕ್ಕೆ ಕೈಗೊಂಡ ಕ್ರಮ ಆ ನಿಟ್ಟಿನಲ್ಲಿ ಕೈಗೊಂಡ ಮೊದಲನೆಯ ಕ್ರಮವಾಗಿತ್ತು. 1919ರ ರಾಜಕೀಯ ಒಪ್ಪಂದಗಳನ್ನು ಮುಂದುವರಿಸುವುದಕ್ಕೆ ಲೀಗ್ ಬದ್ಧವಾಗಿತ್ತು ಎಂಬುದನ್ನರಿತ ಹಿಟ್ಲರ್‌ನಿಗೆ ತನ್ನ ಉದ್ದೇಶಗಳನ್ನು ಈಡೇರಿಸುವಲ್ಲಿ ತೊಡಕಾಗಿರುವುದೇ ಲೀಗ್ ಎಂದು ತಿಳಿದಿದ್ದನು. ಆದುದರಿಂದ ಲೀಗ್‌ನಿಂದ ಹೊರಬಂದು ಅದು ವಿಧಿಸಿದ ಅಂತರರಾಷ್ಟ್ರೀಯ ಷರತ್ತುಗಳಿಂದ ಮುಕ್ತನಾದನು.

### *117.8.2 ಜರ್ಮನಿ ಮತ್ತು ಪೋಲೆಂಡ್ ನಡುವೆ ನಿರಾಕ್ರಮಣದ ಒಪ್ಪಂದ*

ಜರ್ಮನಿ ಶಾಂತಿಯುತ ಉದ್ದೇಶಗಳನ್ನು ಗೌರವಿಸುತ್ತದೆ ಎಂಬುದನ್ನು ತೋರಿಸಿಕೊಡಲು, ಹಿಟ್ಲರ್ 1934 ರ ಜನವರಿಯಲ್ಲಿ ಪೋಲೆಂಡಿನೊಂದಿಗೆ 10 ವರ್ಷಗಳ ನಿರಾಕ್ರಮಣದ ಕರಾರನ್ನು ಏರ್ಪಡಿಸಿಕೊಂಡನು. ಆ ಸಮಯದಲ್ಲಿ ಪೋಲೆಂಡ್ ತನ್ನ ಸ್ನೇಹರಾಷ್ಟ್ರ ಫ್ರಾನ್ಸನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ. ಕಾರಣ, 1925 ರ ಲೊಕಾರ್ನೋ ಕರಾರಿನ ಸಂದರ್ಭದಲ್ಲಿ ಫ್ರಾನ್ಸ್ ತನ್ನ ಭದ್ರತೆಗಾಗಿ ಪೋಲೆಂಡಿನ ಹಿತಾಸಕ್ತಿಗಳನ್ನು ಫ್ರೆಂಚ್ ಆಸಕ್ತಿಗಳ ಅಧೀನಗೊಳಿಸಿತ್ತು. ಜೊತೆಗೆ 1919 ರಿಂದಲೂ ತನ್ನ ತೊಂದರೆಗಳಿಗೆ ಮೂಲವಾಗಿರುವ ಜರ್ಮನ್ ಅಲ್ಪಸಂಖ್ಯಾತರು ಜರ್ಮನಿಯೊಂದಿಗಿನ ಒಪ್ಪಂದದಿಂದ ತೆಪ್ಪಗಾಗುವರು ಎಂದು ಪೋಲೆಂಡ್ ಭಾವಿಸಿತು.

### *117.8.3 ಸ್ಸಾರ್ ಪ್ರದೇಶದ ಪುನರ್‌ವಶ*

ವರ್ಸೈಲ್ಸ್ ಒಪ್ಪಂದದ ಪ್ರಕಾರ 15 ವರ್ಷಗಳವರೆಗೆ ಸ್ಸಾರ್ ಪ್ರದೇಶವನ್ನು ಆಕ್ರಮಿಸಿ, ಅನುಭೋಗಿಸುವ ಹಕ್ಕನ್ನು ಫ್ರಾನ್ಸ್ ಪಡೆದಿತ್ತು. ಈ ಅವಧಿಯ ನಂತರ ಜನಾಭಿಪ್ರಾಯದ ಮೂಲಕ ಸ್ಸಾರ್‌ನ ಪ್ರಜೆಗಳಿಗೆ ತಮ್ಮ ನೆಲದ ಭವಿಷ್ಯವನ್ನು ನಿರ್ಧರಿಸಬೇಕಾಗಿತ್ತು. ಈ ಕೆಲಸ ಲೀಗಿನ

ಉಸ್ತುವಾರಿಯಲ್ಲಿ ನಡೆಯಬೇಕಾಗಿತ್ತು. 1935ರಲ್ಲಿ ಜನಾಭಿಪ್ರಾಯವನ್ನು ಸಂಗ್ರಹಿಸುವ ಏರ್ಪಾಡಾಯಿತು. ಶೇ.90ರಷ್ಟು ಮಂದಿ ಜರ್ಮನಿಯೊಂದಿಗೆ ಸೇರುವುದಾಗಿ ತಿಳಿಸಿದರು. 1935ರ ಮಾರ್ಚ್ 1 ರಂದು ಸ್ಸಾರ್ ಪ್ರದೇಶ ಜರ್ಮನಿಯೊಂದಿಗೆ ವಿಲೀನಗೊಂಡಿತು.

### *117.8.4 ಆಸ್ಟ್ರೋ-ಜರ್ಮನ್ ಒಪ್ಪಂದ*

ಪ್ರಥಮ ಮಹಾಯುದ್ಧ ಮುಗಿದ ದಿನಗಳಿಂದಲೇ ಜರ್ಮನಿ ಆಸ್ಟ್ರಿಯಾದೊಂದಿಗೆ ವಿಲೀನಗೊಳ್ಳುವ ಕಾತುರದಿಂದಿತ್ತು. ಹಿಟ್ಲರ್ ಅಧಿಕಾರಕ್ಕೆ ಬಂದಮೇಲೆ ಅದನ್ನೇ ತನ್ನ ವಿದೇಶಾಂಗ ನೀತಿಯ ಗುರಿಯಾಗಿಸಿಕೊಂಡನು. 1934ರ ಜುಲೈ 25ರಂದು ಆಸ್ಟ್ರಿಯಾದ ಛಾನ್ಸಲರ್ ಡೋಲ್ಫಸ್ ಉಗ್ರಗಾಮಿಗಳಿಂದ ಹತನಾದನು. ಆಸ್ಟ್ರಿಯಾ ತೀರಾ-ಆತಂಕಗೊಂಡಿದ್ದಾಗ ಮುಸ್ಸೋಲಿನಿ ಆಸ್ಟ್ರಿಯಾದ ಸಹಾಯಕ್ಕೆ ಇಟಲಿಯ ಸೈನ್ಯವನ್ನು ಕಳುಹಿಸಿದನು. ಹಿಟ್ಲರನಿಗೆ ಅವಮಾನವಾದಂತಾಗಿ ಆಸ್ಟ್ರಿಯಾದ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸಲಿಲ್ಲ. ಆದರೆ ಎರಡು ವರ್ಷಗಳ ನಂತರ ಒಪ್ಪಂದವೊಂದರ ಮೂಲಕ ಆಸ್ಟ್ರಿಯಾದ ಸ್ವಾತಂತ್ರ್ಯವನ್ನು ಗೌರವಿಸುವುದಾಗಿ ಒಪ್ಪಿದನು. ವಿಯನ್ನಾದೊಂದಿಗಿನ ಜರ್ಮನ್ ವ್ಯಾಪಾರ ಮತ್ತು ಪ್ರವಾಸೀ ಸಂಬಂಧ ಮತ್ತೆ ತೆರೆದುಕೊಂಡಿತು. ಆದರೆ ಹಿಟ್ಲರನ ಹೃದಯಾಂತರಾಳದ ಆಸೆ ಆಸ್ಟ್ರಿಯಾವನ್ನು ಪಡೆಯುವುದಾಗಿದ್ದುದರಿಂದ ಇಟಲಿಯ ಸ್ನೇಹ ಸಂಪಾದಿಸಿ 1938 ರಲ್ಲಿ ಆಸ್ಟ್ರಿಯಾವನು ವಶಪಡಿಸಿಕೊಂಡನು.

### *117.8.5 ಇಟಲಿಯೊಂದಿಗಿನ ಒಪ್ಪಂದ*

ಮಿತ್ರರಿಲ್ಲದೆ ಯುದ್ಧವನ್ನು ಯಶಸ್ವಿಯಾಗಿ ಗೆಲ್ಲಲಾಗದು ಎಂಬುದು ಹಿಟ್ಲರನಿಗೆ ಮನವರಿಕೆಯಾಗಿತ್ತು. ಇದನ್ನರಿತ ಹಿಟ್ಲರ್ ಇಟಲಿಯ ಕಡೆ ತನ್ನ ಗಮನವನ್ನು ಹರಿಸಿದನು. 1935-36ರಲ್ಲಿ ಮುಸ್ಸೋಲಿನಿ ಅಬಿಸ್ಸೀನಿಯಾಕ್ಕೆ ಮುನ್ನುಗ್ಗಿದುದರಿಂದಾಗಿ ಒಂದು ಕಡೆ ಕಂದಕವನ್ನು ಏರ್ಪಡಿಸಿತ್ತು. ಆದುದರಿಂದ ಮುಸ್ಸೋಲಿನಿ ಜರ್ಮನಿಯೊಂದಿಗಿನ ಸ್ನೇಹವೇ ಪರಸ್ಪರ ತಮ್ಮ ಬಲವನ್ನು ವೃದ್ಧಿಸಲಿರುವ ಏಕೈಕ ಮಾರ್ಗವೆಂದು ಭಾವಿಸಿದನು. ಪರಸ್ಪರ ಸ್ನೇಹವನ್ನು ಬೆಸೆಯುವುದರ ಮೂಲಕ ಮುಸ್ಸೋಲಿನಿ ಮತ್ತು ಹಿಟ್ಲರ್ ಇಬ್ಬರಿಗೂ 1919ರ ಶಾಂತಿ ಒಪ್ಪಂದವನ್ನು ಉಲ್ಲಂಘಿಸಬೇಕಾಗಿತ್ತು. ಸ್ಪೈನಿನ ಅಂತಃಕಲಹದ ಸಮಯದಲ್ಲಿ ಮುಸ್ಸೋಲಿನಿ ಜನರಲ್ ಫ್ರ್ಯಾಂಕೋನಿಗೆ ಸೈನ್ಯ ಮತ್ತು ಶಸ್ತ್ರಾಸ್ತ್ರಗಳನ್ನು ಕಳುಹಿಸಿದಾಗ ಹಿಟ್ಲರ್ ಆತನಿಗೆ ಬೆಂಬಲ ನೀಡಿ ತನ್ನೆಡೆಗೆ ಒಲಿಸಿಕೊಂಡನು. 1936ರ ಅಕ್ಟೋಬರ್‌ನಲ್ಲಿ ಉಭಯ ರಾಷ್ಟ್ರಗಳು ಪರಸ್ಪರ ಸಹಕಾರದ ಒಪ್ಪಂದವನ್ನು ಏರ್ಪಡಿಸಿಕೊಂಡವು. ಹಾಗಾಗಿ 'ಬರ್ಲಿನ್-ರೋಮ್' ಮೈತ್ರಿಕೂಟವು ಏರ್ಪಟ್ಟಿತು.

### *117.8.6 ಬರ್ಲಿನ್-ರೋಮ್-ಟೋಕಿಯೋ ಮೈತ್ರಿಕೂಟ*

1936 ರಲ್ಲಿ ಜರ್ಮನಿ ತನ್ನ ವಿರುದ್ಧದ ಅಂಗರಚನೆಯ ವಿರುದ್ಧ ಜಪಾನಿನೊಂದಿಗೆ ಒಪ್ಪಂದವನ್ನೇರ್ಪಡಿಸಿಕೊಂಡಿತು. ಉಭಯ ಪಕ್ಷಗಳೂ ತಮ್ಮ ಪರವಾದ ಅಂಗರಚನೆಯ ಬಗ್ಗೆ ಪರಸ್ಪರ ಮಾಹಿತಿ ನೀಡಬೇಕೆಂದು ಒಪ್ಪಿಕೊಂಡವು. ತಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪರಸ್ಪರ ಸಮಾಲೋಚಿಸುವುದಾಗಿ ಒಪ್ಪಿಕೊಂಡವು. 1937ರ ನವೆಂಬರ್‌ನಲ್ಲಿ ಇಟಲಿಯು ಸಹ ಅಂಗರಚನೆ ವಿರೋಧೀ ಕೂಟವನ್ನು ಸೇರಿತು. ಪರಿಣಾಮವಾಗಿ ಬರ್ಲಿನ್-ರೋಮ್-ಟೋಕಿಯೋ ಮೈತ್ರಿಕೂಟ ಏರ್ಪಟ್ಟಿತು.

### *117.8.7 ಜರ್ಮನಿಯ ಶಸ್ತ್ರೀಕರಣ*

ಹಿಟ್ಲರ್ ಮತ್ತೆ ಜರ್ಮನಿಯ ಶಸ್ತ್ರೀಕರಣದ ಕಾರ್ಯವನ್ನು ಕೈಗೊಂಡನು. ಜರ್ಮನಿ ಲೀಗಿನಿಂದ ಹೊರಬಂದಾಗ ಜಿನೇವಾದಲ್ಲಿ ನಡೆದ ನಿಶ್ಶಸ್ತ್ರೀಕರಣದ ಸಮ್ಮೇಳನವನ್ನು ಬಹಿಷ್ಕರಿಸಿತು. 1935ರ ಮಾರ್ಚ್‌ನಲ್ಲಿ ಜರ್ಮನ್ ವಾಯುದಳ ಅಸ್ತಿತ್ವದಲ್ಲಿದೆ ಎಂದು ಹಿಟ್ಲರ್ ವಿಶ್ವಕ್ಕೆ ತಿಳಿಸಿದನು. 1935 ರ ಮಾರ್ಚ್ 16 ರಂದು ರಾಷ್ಟ್ರೀಯ ರಕ್ಷಣಾ ಬಲದ ಪುನರ್ ರಚನೆಗೆ

ಸಂಬಂಧಿಸಿದ ಕಾಯಿದೆಯನ್ನು ಜಾರಿಗೆ ತಂದನು. ಇದು ವರ್ಸೈಲ್ಸ್ ಒಪ್ಪಂದಕ್ಕೆ ತದ್ವಿರುದ್ಧವಾದ ತೀರ್ಮಾನವಾಗಿತ್ತು. 1936ರಲ್ಲಿ ಹಿಟ್ಲರ್ ಜರ್ಮನಿಯನ್ನು ಶಸ್ತ್ರೀಕರಣಗೊಳಿಸುವ ಕ್ರಮವನ್ನು ಕೈಗೊಂಡನು. ಲೊಕಾರ್ನೋ ಕರಾರಿಗೆ ವಿರುದ್ಧವಾಗಿ 1936 ರ ಮಾರ್ಚ್‌ನಲ್ಲಿ ಜರ್ಮನ್ ಸೈನ್ಯವನ್ನು ರೈನ್‌ಲ್ಯಾಂಡಿಗೆ ಕಳುಹಿಸಿಕೊಟ್ಟು ಅದರ ಪುನರ್ ಸೈನ್ಯೀಕರಣದ ಕಾರ್ಯವನ್ನು ಕೈಗೊಂಡನು.

### *117.8.8 ಸ್ಪೈನ್‌ನ ಅಂತರ್ಯುದ್ಧದಲ್ಲಿ ಮಧ್ಯಪ್ರವೇಶ*

ಜನರಲ್ ಫ್ರ್ಯಾಂಕೋ ದಂಗೆಯೆದ್ದುದರ ಪರಿಣಾಮವಾಗಿ ಸ್ಪೈನ್‌ನಲ್ಲಿ ಅಂತರ್ಯುದ್ಧ ಆರಂಭವಾಯಿತು. ಸೋವಿಯತ್ ರಷ್ಯಾ ಸ್ಪೈನ್‌ನ ಸರಕಾರವನ್ನು ಬೆಂಬಲಿಸಿದರು. ಹಿಟ್ಲರ್ ಮತ್ತು ಮುಸ್ಸೋಲಿನಿ ಜನರಲ್ ಫ್ರ್ಯಾಂಕೋನನ್ನು ಬೆಂಬಲಿಸಿದರು. ಈ ಸಹಾಯದ ಪರಿಣಾಮವಾಗಿ ಫ್ರ್ಯಾಂಕೋ ಗಣತಾಂತ್ರಿಕ ಸರಕಾರವನ್ನು ಪದಚ್ಯುತಿಗೊಳಿಸಿದ. ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ಹಿಟ್ಲರ್ ಮತ್ತು ಮುಸ್ಸೋಲಿನಿಯನ್ನು ಬೆಂಬಲಿಸಿದವು. ಅಬಿಸ್ಸೀನಿಯಾದ ಪ್ರಕರಣದಂತೆ ಸ್ಪೈನ್‌ನ ಅಂತರ್ಯುದ್ಧ ಇಟಲಿ ಮತ್ತು ಜರ್ಮನಿಯನ್ನು ಇನ್ನೂ ಹತ್ತಿರಕ್ಕೆ ತಂದಿತು.

## 117.9 ಜೆಕೋಸ್ಲೊವಾಕಿಯಾದ ಮೇಲಿನ ಧಾಳಿ

ವರ್ಸೈಲ್ಸ್ ಒಪ್ಪಂದದ ಪ್ರಕಾರ ಜೆಕೋಸ್ಲೊವಾಕಿಯಾ ರಾಜ್ಯ ನಿರ್ಮಾಣವಾಗಿತ್ತು. ಆದರೆ ಆ ದೇಶದಲ್ಲಿನ್ನೂ ಜರ್ಮನ್ ಅಲ್ಪಸಂಖ್ಯಾತರಿದ್ದರು. ಜೆಕೋಸ್ಲೊವಾಕಿಯಾದ ಸರಕಾರ ಅವರನ್ನು ಉತ್ತಮವಾಗಿಯೇ ನೋಡಿಕೊಂಡರೂ ಜರ್ಮನಿಯೊಂದಿಗಿನ ಸಂಬಂಧವನ್ನು ಮುಂದುವರಿಸಿದ್ದರು. ನಾಜಿ ಪ್ರಚಾರ ಕಾರ್ಯದ ನಿಮಿತ್ತ ತಾಯ್ನಾಡಿನೊಂದಿಗೆ ಸೇರ್ಪಡೆಗೊಳ್ಳಲು ಅನುವುಮಾಡಿಕೊಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಹಿಟ್ಲರ್ ಇದನ್ನೇ ನೆಪವಾಗಿಟ್ಟುಕೊಂಡು ಮಧ್ಯಪ್ರವೇಶಮಾಡಿದ.

### *117.9.1 ಜೆಕೋಸ್ಲೊವಾಕಿಯಾದಲ್ಲಿ ಹಿಟ್ಲರನ ಆಸಕ್ತಿ*

ಆದರೆ ಜೆಕೋಸ್ಲೊವಾಕಿಯಾದಲ್ಲಿ ಹಿಟ್ಲರನ ಆಸಕ್ತಿ ಬೇರೆಯೆ ಆಗಿತ್ತು. (1) ಜೆಕೋಸ್ಲೊವಾಕಿಯಾ ಪರಿಷ್ಕರಣೆ-ವಿರೋಧೀ ಗುಂಪಿನಲ್ಲಿದ್ದ ಫ್ರಾನ್ಸ್ ಮತ್ತು ರಷ್ಯಾವನ್ನು ಬೆಂಬಲಿಸಿತ್ತು. ಜೊತೆಗೆ ಲೀಗಿನ ಕಟ್ಟಾ ಬೆಂಬಲಿಗ ರಾಷ್ಟ್ರವಾಗಿತ್ತು. (2) ಜೆಕೋಸ್ಲೊವಾಕಿಯಾ ಆಯಕಟ್ಟಿನ ಪ್ರದೇಶವಾಗಿದ್ದುದು ಇನ್ನೊಂದು ಮುಖ್ಯ ಅಂಶವಾಗಿತ್ತು. ಜೆಕೋಸ್ಲೊವಾಕಿಯಾ ದಕ್ಷಿಣದಲ್ಲಿ ಜರ್ಮನಿಯ ವಿಸ್ತರಣೆಯನ್ನು ತಡಿಗಟ್ಟಲಿದ್ದ ಗೋಡೆಯಂತಿತ್ತು. ಜೆಕೋಸ್ಲೊವಾಕಿಯಾದ ಆಕ್ರಮಣ ಸುಲಭವಾಗಿ ರೋಮ್‌ಗೆ ಸಂಪರ್ಕ ಕಲ್ಪಿಸುತ್ತಿತ್ತು.

ಆದುದರಿಂದ ಜರ್ಮನಿ ಸುದತ್ತನ್ ಜರ್ಮನರನ್ನು ತೀವ್ರ ಹೋರಾಟವನ್ನಾರಂಭಿಸುವಂತೆ ಪ್ರೇರೆಪಿಸಿತು. 1938ರ ಸೆಪ್ಟೆಂಬರ್ 10 ರಂದು ಅವರು ಸಶಸ್ತ್ರ ಹೋರಾಟವನ್ನು ಆರಂಭಿಸಿದರು. ಹಿಟ್ಲರನೂ ತನ್ನ ಸೈನ್ಯದ ಮುನ್ನಡೆಗೆ ಆದೇಶ ನೀಡಿ ಯುದ್ಧದ ಬೆದರಿಕೆಯನ್ನು ಹಾಕಿದನು. ಜೆಕೋಸ್ಲೊವಾಕಿಯಾದ ಬಿಕ್ಕಟ್ಟಿಗೆ ಬ್ರಿಟಿಷ್ ಸರಕಾರ ಶಾಂತಿಯುತ ಪರಿಹಾರದ ಸಲಹೆಯನ್ನು ನೀಡಿತು. ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಸುದತ್ತನ್ ಪ್ರದೇಶವನ್ನು ಜರ್ಮನಿಗೆ ವರ್ಗಾಹಿಸುವಂತೆ ಜೆಕೋಸ್ಲೊವಾಕಿಯಾಕ್ಕೆ ಸಲಹೆ ನೀಡಿದವು. ಜೆಕ್ ಸರಕಾರವೂ ಆ ಸಲಹೆಯನ್ನೊಪ್ಪಿತು. ಆಶ್ಚರ್ಯಚಕಿತನಾದ ಹಿಟ್ಲರ್ ಸಮಸ್ಯೆಯ ಇತ್ಯರ್ಥ 1938 ರ ಅಕ್ಟೋಬರ್ ಒಳಗಾಗಬೇಕೆಂದು ಒತ್ತಾಯಿಸಿದನು. ಮುಸ್ಸೋಲಿನಿಯೂ ಸಮಸ್ಯೆಯನ್ನು ಸಮಾಧಾನದಿಂದ ಬಗೆಹರಿಸುವಂತೆ ಸಲಹೆ ಮಾಡಿದನು.

### *117.9.2 ಮ್ಯೂನಿಚ್ ಒಪ್ಪಂದ*

1938 ರ ಸೆಪ್ಟೆಂಬರ್ 29 ರಂದು ಮ್ಯೂನಿಚ್‌ನಲ್ಲಿ ಸಮ್ಮೇಳನವೊಂದು ಜರುಗಿತು. ಗ್ರೇಟ್ ಬ್ರಿಟನ್, ಇಟಲಿ ಮತ್ತು ಜರ್ಮನಿ ಆ ಸಮ್ಮೇಳನದಲ್ಲಿ ಭಾಗವಹಿಸಿದವು. ಸೋವಿಯತ್ ರಷ್ಯಾ

ಮತ್ತು ಜೆಕೋಸ್ಲೊವಾಕಿಯಾ ಈ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲವೆಂಬುದು ಗಮನಾರ್ಹ ಅಂಶ. ಸುಧೀರ್ಘ ಚರ್ಚೆಯ ನಂತರ 1938 ನೇ ಸೆಪ್ಟೆಂಬರ್ 30 ರಂದು ಒಪ್ಪಂದವೊಂದಕ್ಕೆ ಸಹಿ ಹಾಕಲಾಯಿತು. ಇದೇ ಮ್ಯೂನಿಚ್ ಒಪ್ಪಂದವೆಂದು ಜನಪ್ರಿಯವಾಗಿದೆ. ಅದರ ಪ್ರಕಾರ ಸುದತ್ತನ್‌ಲ್ಯಾಂಡ್‌ನ್ನು ತೆರವುಗೊಳಿಸುವ ಕೆಲಸ 1938ರ ಅಕ್ಟೋಬರ್ 1ರಂದು ಆರಂಭವಾಗಿ ಅಕ್ಟೋಬರ್ 10 ರಂದು ಮುಕ್ತಾಯವಾಗಬೇಕೆಂದು ತಿಳಿಸಲಾಯಿತು. ಜೆಕೋಸ್ಲೊವಾಕಿಯಾದ ಸರಕಾರವು ತನ್ನ ಸೈನ್ಯ ಮತ್ತು ಪೋಲಿಸ್ ಪಡೆಯಿಂದ ಸುದತ್ತನ್-ಜರ್ಮನರನ್ನು ನಾಲ್ಕು ವಾರಗಳ ಒಳಗೆ ಬಿಡುಗಡೆ ಮಾಡಬೇಕೆಂದು ಸೂಚಿಸಲಾಯಿತು. ಪ್ರದೇಶಗಳ ವ್ಯಾಪ್ತಿಯನ್ನು ನಿರ್ಧರಿಸಲು ಐದು ರಾಷ್ಟ್ರಗಳ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಜನಾಭಿಪ್ರಾಯವನ್ನು ಸಂಗ್ರಹಿಸಬೇಕಾಗಿತ್ತು. ಅಲ್ಲಿಯವರೆಗೆ ಆ ಪ್ರದೇಶಗಳು ಅಂತರರಾಷ್ಟ್ರೀಯ ಪಡೆಯೊಂದರ ಅಧೀನದಲ್ಲಿರಬೇಕೆಂದು ಸೂಚಿಸಲಾಯಿತು.

### *117.9.3 ಜೆಕೋಸ್ಲೊ ವಾಕಿಯಾದಿಂದ ಕೆಲವು ಪ್ರದೇಶಗಳ ನಿರ್ಗಮನ*

ಜೆಕೋಸ್ಲೊವಾಕಿಯಾದಲ್ಲಿ ಜರ್ಮನ್ ಅಲ್ಪಸಂಖ್ಯಾತರ ಬೇಡಿಕೆಗೆ ಸಮರ್ಥನೆ ದೊರೆತ ಮೇಲೆ ಪೋಲೆಂಡ್ ಮತ್ತು ಹಂಗೇರಿ ತಮ್ಮ ಬೇಡಿಕೆಗಳನ್ನು ಮಂಡಿಸಿದವು. ಪೋಲೆಂಡಿನೊಂದಿಗೆ ವಂಶೀಯ ಬಾಂಧವ್ಯ ಹೊಂದಿದ್ದ ಟೆಸ್ಚೆಸ್ ಎಂಬ ಪ್ರದೇಶ ಪೋಲೆಂಡಿನ ಬೇಡಿಕೆಯಾಗಿದ್ದರೆ, ಮಾಗ್ಯಾರರು ವಾಸಿಸುತ್ತಿದ್ದ ಪ್ರದೇಶವನ್ನು ಹಂಗೇರಿ ಬೇಡಿತು. 1939ರ ಮಾರ್ಚ್ 14 ರಂದು ಹಿಟ್ಲರನ ಕುಮ್ಮಕ್ಕಿನಿಂದಾಗಿ ಸ್ಲೊವಾಕಿಯಾ ಮತ್ತು ರುತೇನಿಯಾ ಜೆಕೋಸ್ಲೊವಾಕಿಯಾದಿಂದ ಸ್ವಾತಂತ್ರ್ಯ ಘೋಷಿಸಿದವು. ಈ ಸಂದರ್ಭದಲ್ಲಿ ಹಿಟ್ಲರ್ ಮಧ್ಯೆ ಪ್ರವೇಶಿಸಿ ಡಾ.ಹಚಾ ಎಂಬುವವನನ್ನು ಬರ್ಲಿನ್‌ಗೆ ಆಹ್ವಾನಿಸಿ ಜೆಕೋಸ್ಲೊವಾಕಿಯಾವನ್ನು ಜರ್ಮನಿಯ ಅಧೀನಗೊಳಿಸದ ಆಶ್ರಿತ ರಾಜ್ಯವಾಗಿ ಮಾರ್ಪಡಿಸಿದ ದಾಖಲೆ ಪತ್ರಕ್ಕೆ ಸಹಿ ಹಾಕುವಂತೆ ಮಾಡಿದನು. 1939ರ ಮಾರ್ಚ್ 15 ರಂದು ನಾಝಿ ಸೈನ್ಯ ಜೆಕೋಸ್ಲೊವಾಕಿಯಾವನ್ನು ಆಕ್ರಮಿಸಿತು.

ಉಭಯ ಪಕ್ಷಗಳೂ ಪೂರ್ಣ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದುದರಿಂದ ಈಗ ಯುದ್ಧ ಅನಿವಾರ್ಯವಾಯಿತು. ಮುಂದಿನ ಮುಖ್ಯ ಘಟನೆ ಸಂಭವಿಸುವುದಕ್ಕಿಂತ ಮುಂಚಿತವಾಗಿ ರಷ್ಯಾದಿಂದ ಭರವಸೆಯೊಂದನ್ನು ಪಡೆಯುವುದು ಅಗತ್ಯವೆಂದು ಹಿಟ್ಲರನಿಗೆ ಅನಿಸಿತು. ಮ್ಯೂನಿಚ್ ಒಪ್ಪಂದದ ನಂತರ ರಷ್ಯಾ ಪಾಶ್ಚಾತ್ಯ ರಾಷ್ಟ್ರಗಳ ಬಗ್ಗೆ ತೀರಾ ನಿರಾಶೆಗೊಂಡಿತ್ತು. ಈ ಸಂದರ್ಭವನ್ನುಪಯೋಗಿಸಿಕೊಂಡ ಹಿಟ್ಲರ್ 1939ರ ಆಗಸ್ಟ್ 23 ರಂದು ರಷ್ಯಾದೊಂದಿಗೆ ನಿರಾಕ್ರಮಣದ ಒಪ್ಪಂದವನ್ನೇರ್ಪಡಿಸಿಕೊಂಡನು. ಹಿಟ್ಲರನ ರಾಜನೀತಿ ನೈಪುಣ್ಯತೆಯ ಪ್ರದರ್ಶನಕ್ಕೆ ಇದು ಅತ್ಯುತ್ತಮ ಉದಾಹರಣೆಯಾಯಿತು. ಪೋಲೆಂಡಿನ ವಿರುದ್ಧದ ಕಾರ್ಯಾಚರಣೆಯ ಸಂದರ್ಭದಲ್ಲಿ ರಷ್ಯಾವನ್ನು ತಟಸ್ಥವಾಗಿರುವಂತೆ ಮಾಡದಲ್ಲಿ ಹಿಟ್ಲರ್ ಯಶಸ್ವಿಯಾಗಿದ್ದನು. ಈ ಮಧ್ಯೆ ಹಿಟ್ಲರ್ ಮೆಮಲ್ ಪಟ್ಟಣವನ್ನು ವಶಪಡಿಸಿಕೊಂಡು 'ಪೋಲಿಶ್ ಕಾರಿಡಾರ್' ಅನ್ನು ಬಿಟ್ಟುಕೊಡಬೇಕೆಂದು ಒತ್ತಾಯಿಸಿದ. 1939ರ ಸೆಪ್ಟೆಂಬರ್ 1 ರಂದು ಹಿಟ್ಲರ್ ಪೋಲೆಂಡಿನ ಮೇಲೆ ಆಕ್ರಮಣ ಮಾಡಿದಾಗ ದ್ವಿತೀಯ ಮಹಾಯುದ್ಧ ಆರಂಭವಾಯಿತು.

## 117.10 ಹಿಟ್ಲರನ ಪ್ರಭಾವ

ಹಿಟ್ಲರನ ಏಳಿಗೆ ಮತ್ತು ಅವನು ಕೈಗೊಂಡಂತಹ ಅನೇಕ ಕ್ರಮಗಳಿಂದಾಗಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾದವು. ಕೆಲವು ರಾಷ್ಟ್ರಗಳಲ್ಲಿ ನೈತಿಕ ಜವಾಬ್ದಾರಿಯ ಭಾವನೆ ಮೂಡಿದರೆ, ಶಾಂತಿ ಒಪ್ಪಂದಕ್ಕೆ ಸವಾಲೆಸೆದಿದ್ದ ಹಿಟ್ಲರನ ಬಗ್ಗೆ ಆತಂಕ ಮೂಡಿತು. ಹಿಟ್ಲರನ ವಿದೇಶಾಂಗ ನೀತಿಯು ಇತರ ಐರೋಪ್ಯ ರಾಷ್ಟ್ರಗಳ ವಿದೇಶಾಂಗ ನೀತಿಯ ಮೇಲೆ ಬೀರಿದ ಪರಿಣಾಮಗಳನ್ನು ಈ ಕೆಳಗೆ ವಿವರಿಸಲಾಗಿದೆ.

### 117.10.1 *ಸೋವಿಯತ್ ರಷ್ಯಾದ ಮೇಲಿನ ಪರಿಣಾಮ*

(1) ಸೋವಿಯತ್ ರಷ್ಯಾ ಮತ್ತು ಫ್ರಾನ್ಸ್ ದೇಶಗಳನ್ನು ಮತ್ತೆ ಸಮಾಲೋಚನೆಯ ಮೇಜಿಗೆ ಕರೆತಂದಿತು.

(2) ರಷ್ಯಾ ಲೀಗ್ ಆಫ್ ನೇಷನ್ಸ್‌ನ ಸದಸ್ಯ ರಾಷ್ಟ್ರವಾಯಿತು.

(3) ಬಾಲ್ಟಿಕ್ ರಾಜ್ಯಗಳು ಮತ್ತು ಪೋಲೆಂಡಿನೊಂದಿಗಿನ ನಿರಾಕ್ರಮಣದ ಒಪ್ಪಂದಗಳನ್ನು ರಷ್ಯಾ 1945ರವರೆಗೂ ವಿಸ್ತರಿಸಿತು.

(4) ರಷ್ಯಾ ನಿರಾಕ್ರಮಣದ ಒಪ್ಪಂದಗಳನ್ನು ತನ್ನ ಏಳು ನೆರೆಯ ರಾಜ್ಯಗಳೊಂದಿಗೂ ಮತ್ತು ಮೂರು ಸಣ್ಣ ಎಂಟೆಂಟ್ ರಾಜ್ಯಗಳೊಂದಿಗೂ ಏರ್ಪಡಿಸಿಕೊಂಡಿತು.

(5) ಪರಸ್ಪರ ಸಹಕಾರದ ಪೌರ್ವಾತ್ಯ ಒಪ್ಪಂದವನ್ನು ರೂಪಿಸಲು ಕಾರಣವಾದರೂ, ಜರ್ಮನಿ ಅದನ್ನು ತಿರಸ್ಕರಿಸಿತು.

### 117.10.2 *ಇಟಲಿಯ ಮೇಲಿನ ಪರಿಣಾಮ*

ಹಿಟ್ಲರನ ಏಳಿಗೆ ಇಟಲಿಯ ವಿದೇಶಾಂಗ ನೀತಿಯ ಮೇಲೆ ಅಪಾರ ಪರಿಣಾಮವನ್ನು ಬೀರಿತು. ಮುಸ್ಸೋಲಿನಿ ಅದರಲ್ಲಿ ಫ್ಯಾಸಿಸಮ್‌ನ ಜಯವನ್ನು ಕಂಡನು. ಆದರೆ ನಾಝಿ ಜರ್ಮನಿಯೊಂದಿಗೆ ರಾಜಕೀಯ ಒಪ್ಪಂದವನ್ನೇರ್ಪಡಿಸಿಕೊಳ್ಳುವಲ್ಲಿ ಅಷ್ಟು ಉತ್ಸಾಹ ತೋರಲಿಲ್ಲ. ಆದುದರಿಂದಲೇ ಹಿಟ್ಲರನ ಇಚ್ಛೆಗೆ ವಿರುದ್ಧವಾಗಿ ಡೋಲ್ಫಸ್‌ನ ಸರಕಾರಕ್ಕೆ ಬೆಂಬಲ ವೀಡಿದ್ದನು. 1934ರ ಮಾರ್ಚ್‌ನಲ್ಲಿ ಇಟಲಿ, ಆಸ್ಟ್ರಿಯಾ ಮತ್ತು ಹಂಗೇರಿ ಅನೇಕ ರಾಜಕೀಯ ಹಾಗೂ ಆರ್ಥಿಕ ಒಪ್ಪಂದಗಳನ್ನು ಏರ್ಪಡಿಸಿಕೊಂಡವು. ಆದರೆ ಹಂಗೇರಿ ಇಟಲಿಯೊಂದಿಗಿನ ಮಾತುಕತೆಯ ಸಂದರ್ಭದಲ್ಲಿ ಜರ್ಮನಿಯೊಂದಿಗಿನ ಸಹಕಾರಕ್ಕೆ ಬಾಗಿಲನ್ನು ತೆರೆದಿತ್ತು.

### 117.10.3 *ಫ್ರಾನ್ಸ್‌ನ ಮೇಲಿನ ಪರಿಣಾಮ*

ಜರ್ಮನಿಯಲ್ಲಿ ನಾಝಿ ಸರಕಾರದ ಏಳಿಗೆಯು ಫ್ರಾನ್ಸ್ ಅನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತ್ತು. ವರ್ಸೈಲ್ಸ್ ಒಪ್ಪಂದವನ್ನು ರದ್ದುಪಡಿಸಿ ಯಥಾಸ್ಥಿತಿಯನ್ನು ಬದಲಾಯಿಸುವಂತೆ ಹಿಟ್ಲರ್ ಬಹಿರಂಗವಾಗಿ ಪ್ರಚಾರ ಮಾಡುತ್ತಿದ್ದುದೇ ಅದಕ್ಕೆ ಕಾರಣವಾಗಿತ್ತು. ಆಸ್ಟ್ರಿಯಾದಲ್ಲಿ ಅವನ ಮಧ್ಯೆ ಪ್ರವೇಶದ ನಂತರ ಇಟಲಿಯೂ ಕೂಡ ಅಷ್ಟೇ ಆತಂಕಗೊಂಡಿತ್ತು. ಆದುದರಿಂದ 1935ರ ನಂತರ ಉಭಯ ರಾಷ್ಟ್ರಗಳೊಳಗೆ ಅನೇಕ ಒಪ್ಪಂದಗಳೇರ್ಪಟ್ಟವು. ಇದರಿಂದಾಗಿ ಪರಸ್ಪರ ಭಿನ್ನಾಭಿಪ್ರಾಯಗಳು ಇತ್ಯರ್ಥವಾದುದಲ್ಲದೆ ಜರ್ಮನಿ ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಿದಲ್ಲಿ ಪರಸ್ಪರ ಸಮಾಲೋಚಿಸಲು ಒಪ್ಪಿಕೊಂಡವು. ಫ್ರಾನ್ಸ್ 1935ರಲ್ಲಿ ರಷ್ಯಾದೊಂದಿಗೆ ಐದು ವರ್ಷಗಳ ಪರಸ್ಪರ ಸಹಾಯದ ಕರಾರನ್ನು ಏರ್ಪಡಿಸಿಕೊಂಡಿತು. ಯಾವುದೇ ಐರೋಪ್ಯ ರಾಷ್ಟ್ರದ ಆಕ್ರಮಣದ ವಿರುದ್ಧ ಪರಸ್ಪರ ಸಹಾಯ ಮಾಡಲು ಒಪ್ಪಿಕೊಳ್ಳಲಾಯಿತು. ಫ್ರಾನ್ಸ್ ಅದೇ ಮಾದರಿಯಲ್ಲಿ ಜೆಕೋಸ್ಲೋವಾಕಿಯಾದೊಂದಿಗೂ ಕರಾರನ್ನು ಏರ್ಪಡಿಸಿಕೊಂಡಿತು.

### 117.10.4 *ಮಿತ್ರಕೂಟದ ಸಣ್ಣ ರಾಜ್ಯಗಳ ಮೇಲಿನ ಪರಿಣಾಮ*

ಜರ್ಮನಿಯಲ್ಲಿ ನಾಝಿ ಸರಕಾರದ ಸ್ಥಾಪನೆ ಮಿತ್ರಕೂಟದ ಸಣ್ಣ ರಾಜ್ಯಗಳನ್ನು ಆತಂಕಕ್ಕೀಡುಮಾಡಿತ್ತು. (ಯುಗೋಸ್ಲೋವಾಕಿಯಾ, ರುಮೇನಿಯಾ ಮತ್ತು ಜೆಕೋಸ್ಲೋವಾಕಿಯಾ). ಜರ್ಮನ್ ಭಾಷೆಯನ್ನು ಮಾತನಾಡುತ್ತಿದ್ದ ಎಲ್ಲಾ ಜನರನ್ನು ಮೂರನೇ ರಿಚ್‌ನಲ್ಲಿ ಸೇರಿಸುವುದೇ ಜರ್ಮನರ ಗುರಿಯಾಗಿತ್ತು. ಆದರೆ ಜರ್ಮನಿಗಿಂತ ಇಟಲಿಯ ಬಗ್ಗೆ ಯುಗೋಸ್ಲೋವಾಕಿಯಾಕ್ಕೆ ಹೆಚ್ಚಿನ ಭಯವಿತ್ತು. ರುಮೇನಿಯಾಕ್ಕೆ ರಷ್ಯಾದ ಬಗ್ಗೆ ಭಯವಿತ್ತು. ಹಾಗೆಯೇ ಜೆಕೋಸ್ಲೋವಾಕಿಯಾಕ್ಕೆ ಜರ್ಮನಿಯ ಬಗ್ಗೆ ಭಯವಿತ್ತು. ಆದುದರಿಂದ ಮಿತ್ರಕೂಟದ ಈ ಸಣ್ಣರಾಜ್ಯಗಳು 1933ರ

ಫೆಬ್ರವರಿ 16ರಂದು ಪುನರ್‌ವ್ಯವಸ್ಥೆಯ ಕರಾರಿಗೆ ಸಹಿ ಹಾಕಿದವು. ಮೂರು ರಾಜ್ಯಗಳ ವಿದೇಶಾಂಗ ವ್ಯವಹಾರಗಳ ಸಚಿವರನ್ನೊಳಗೊಂಡ ಒಂದು ಶಾಶ್ವತ ಸಮಿತಿಯೊಂದನ್ನು ಹೊಂದಿರಲು ಒಪ್ಪಿಕೊಂಡವು. ಸಾಮಾನ್ಯ ವಿದೇಶಾಂಗ ನೀತಿಯನ್ನನುಸರಿಸುವುದೇ ಇದರ ಉದ್ದೇಶವೆಂದು ಘೋಷಿಸಿದವು. ಆರ್ಥಿಕ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಆರ್ಥಿಕ ಮಂಡಳಿಯನ್ನು ಸ್ಥಾಪಿಸಲು ತೀರ್ಮಾನಿಸಿದವು.

### *117.10.5 ಬಾಲ್ಕನ್ ರಾಷ್ಟ್ರಗಳ ಮೇಲಿನ ಪರಿಣಾಮ*

ಬಾಲ್ಕನ್ ಪರ್ಯಾಯ ದ್ವೀಪದ ಮೇಲೂ ಹಿಟ್ಲರನ ಏಳಿಗೆ ಪ್ರಭಾವವನ್ನು ಬೀರಿತು. 1934ರ ಫೆಬ್ರವರಿಯಲ್ಲಿ ಗ್ರೀಸ್ ಮತ್ತು ತುರ್ಕಿ ಮಿತ್ರಕೂಟದ ಸಣ್ಣರಾಜ್ಯಗಳ ಸಂಘಟನೆಯ ಮಾದರಿಯಲ್ಲಿ ಬಾಲ್ಕನ್ ರಾಷ್ಟ್ರಗಳ ಸಂಘಟನೆಯ ಕಾರ್ಯವನ್ನಾರಂಭಿಸಿದವು. ತುರ್ಕಿ, ಯುಗೋಸ್ಲೊವಾಕಿಯಾ, ರುಮೇನಿಯಾ ಮತ್ತು ಗ್ರೀಸ್ ದೇಶಗಳ ಬಾಲ್ಕನ್ ಮಿತ್ರಕೂಟ ಏರ್ಪಟ್ಟಿತು. ಈ ಸಂದರ್ಭದಲ್ಲಿ ಒಪ್ಪಂದದಲ್ಲಿ ಭಾಗಿಯಾದ ರಾಷ್ಟ್ರಗಳು ಪರಸ್ಪರ ತಮ್ಮ ಗಡಿಯನ್ನು ಕಾಯ್ದುಕೊಳ್ಳುವುದಾಗಿ ಒಪ್ಪಿಕೊಂಡವು. ಒಪ್ಪಂದದಲ್ಲಿ ಭಾಗಿಯಾದ ಯಾವುದೇ ರಾಜ್ಯವಾದರೂ ಮತ್ತೊಂದರ ವಿರುದ್ಧ ಆಕ್ರಮಣವೆಸಗಿದರೂ ಈ ಒಪ್ಪಂದದ ಷರತ್ತುಗಳು ಅದಕ್ಕೂ ಅನ್ವಯಿಸುವುದೆಂದು ತಿಳಿಸಲಾಯಿತು. ಇದು ನಿರಾಕ್ರಮಣದ ಜೊತೆಗೆ ರಕ್ಷಣಾ ಒಪ್ಪಂದವೂ ಆಗಿತ್ತು.

### *117.10.6 ಇಂಗ್ಲೆಂಡಿನ ಮೇಲಿನ ಪರಿಣಾಮ*

ಹಿಟ್ಲರನ ಏಳಿಗೆ ಮತ್ತು ಅವನು ಕೈಗೊಂಡತಹ ಅನೇಕ ಕ್ರಮಗಳು ಸಹಜವಾಗಿಯೇ ಇಂಗ್ಲೆಂಡಿನ ಕೋಪವನ್ನು ಕೆರಳಿಸಿತು. ಆಂತರ್ಯದಲ್ಲಿ ಜರ್ಮನಿ ಅಧೋಗತಿಯಿಂದ ಮೇಲೇರುತ್ತಿದೆ ಎಂಬ ಸಮಾಧಾನ ಇಂಗ್ಲೆಂಡಿಗಿತ್ತು. ಆದುದರಿಂದ ಜರ್ಮನಿಯೊಂದಿಗೆ ಒಪ್ಪಂದ ಸೂತ್ರವನ್ನು ಅನುಸರಿಸುವುದರ ಪರವಾಗಿದ್ದರೂ ಫ್ರಾನ್ಸ್‌ನ ವಿರೋಧವನ್ನು ಕಟ್ಟಿಕೊಳ್ಳಲು ಸಿದ್ಧವಿರಲಿಲ್ಲ. 1935ರ ಮಾರ್ಚ್‌ನಲ್ಲಿ ಹಿಟ್ಲರ್ ಕಡ್ಡಾಯ ಸೇನಾ ಆಯ್ಕೆ ಪದ್ಧತಿಯನ್ನು ಜಾರಿಗೆ ತಂದು ವರ್ಸೈಲ್ಸ್ ಒಪ್ಪಂದವನ್ನು ಉಲ್ಲಂಘಿಸಿ ಪುನರ್ ಸೈನ್ಯೀಕರಣದ ಕಾರ್ಯವನ್ನು ಕೈಗೊಂಡಾಗ ಇಂಗ್ಲೆಂಡ್ ಅವನನ್ನು ಪ್ರಶ್ನಿಸಲಿಲ್ಲ. ಆದರೆ ಪೋಲೆಂಡಿನ ಮೇಲೆ ಧಾಳಿ ಮಾಡಿದಾಗ ಮಾತ್ರ ಭರವಸೆಯನ್ನು ಉಲ್ಲಂಘಿಸಿದ್ದಕ್ಕಾಗಿ ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ವಿರೋಧಿಸುವ ಧೈರ್ಯಮಾಡಿತು.

## 117.11 ಮಾದರಿ ಪ್ರಶ್ನೆಗಳು

1. ನಾಝಿಸಮ್ ಅಥವಾ ಹಿಟ್ಲರನ ಏಳಿಗೆಗೆ ಕಾರಣವಾದ ಅಂಶಗಳನ್ನು ಗುರುತಿಸಿ.
2. ಹಿಟ್ಲರನ ಅಧೀನದ ಜರ್ಮನಿಯ ವಿದೇಶಾಂಗ ನೀತಿಯನ್ನು ವಿವರಿಸಿ.
3. "1933 ರಲ್ಲಿ ಹಿಟ್ಲರನು ಪ್ರವರ್ಧಮಾನಕ್ಕೆ ಬಂದುದರಿಂದ ಅಂತರರಾಷ್ಟ್ರೀಯ ರಾಜಕೀಯ ಸ್ಥಿತಿಯೇ ಬದಲಾಯಿತು" ಚರ್ಚಿಸಿ.
4. ಜರ್ಮನಿಯಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದುದು ಹೇಗೆ ಅಂತರರಾಷ್ಟ್ರೀಯ ಸಂಬಂಧದ ಗತಿಯನ್ನು ಬದಲಾಯಿಸಿತು?
5. ಹಿಟ್ಲರ್ ಅಥವಾ ನಾಝಿಸಮ್ ಯುರೋಪಿನ ಕೆಲವು ಮುಖ್ಯ ದೇಶಗಳ ಮೇಲೆ ಬೀರಿದ ಪ್ರಭಾವವನ್ನು ಚರ್ಚಿಸಿ.

## 117.12 ಅಧ್ಯಯನಕ್ಕಾಗಿ ಗ್ರಂಥಗಳು


1) Adolf Hitler................ : Mein Kampf(1939)

2) Allan Bulloek............... : Hitler-A Study in Tyranny (1964)

3) William Sheridan Allam : The Nazi Seizure of Power (1965)

4) David Schoenbaum : Hitler's Social Revolution: Class and Status in Nazi Germany (1966)

5) ಆರ್.ಜಿ. ಶಿವಣ್ಣ : ಆಧುನಿಕ ಯುರೋಪಿನ ಇತಿಹಾಸ

6) ರಾಮಲಿಂಗಪ್ಪ : ಯುರೋಪಿನ ಇತಿಹಾಸ


ಮೂಲ : ಡಾ. ಸುಂದರರಾಜನ್

ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ

## ಟಿಪ್ಪಣಿಗಳು

# ಘಟಕ - 118

## ಮಹಾಯುದ್ಧಗಳ ನಡುವಣ ಕಾಲದ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್

*ರಚನಾಕ್ರಮ*


**118.0** ಉದ್ದೇಶಗಳು

**118.1** ಪೀಠಿಕೆ

**118.2** ಬ್ರಿಟಿಷ್ ವಿದೇಶಾಂಗ ನೀತಿ : ತತ್ವಗಳು ಮತ್ತು ಸಮಸ್ಯೆಗಳು

**118.2.1** ವರ್ಸೈಲ್ಸ್ ಒಪ್ಪಂದಾನಂತರದ ನೀತಿ

**118.2.2** ಅವನತಿಯ ಹಾದಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯ

**118.2.3** ಆಂಗ್ಲೋ-ಫ್ರೆಂಚ್ ಸಂಬಂಧ

**118.3** ಬ್ರಿಟನ್ ಮತ್ತು ಸಾಮೂಹಿಕ ಭದ್ರತೆ

**118.4** ತೃಪ್ತಿಪಡಿಸುವ ನೀತಿಯ ಮೂಲ

**118.4.1** ರಿಯಾಯಿತಿಯ ನೀತಿ

**118.4.2** ತೃಪ್ತಿಪಡಿಸುವ ನೀತಿಯ ಸಮರ್ಥನೆ

**118.4.3** ಉತ್ಕೃಷ್ಟ ಮೈತ್ರಿಯ ಪ್ರಯತ್ನ

**118.4.4** ತೃಪ್ತಿಪಡಿಸುವ ನೀತಿಯ ಫಲಗಳು

**118.5** ಫ್ರೆಂಚರ ತೃಪ್ತಿಪಡಿಸುವ ನೀತಿ

**118.6** ಫ್ರಾನ್ಸಿನ ವಿದೇಶಾಂಗ ನೀತಿ

**118.7** ಭದ್ರತೆಯನ್ನರಸಿದ ಫ್ರಾನ್ಸ್

**118.7.1** ಫ್ರೆಂಚರ ಮೈತ್ರಿ ನೀತಿ

**118.8** ಜರ್ಮನಿಯ ಬಗೆಗಿನ ಫ್ರಾನ್ಸ್‌ನ ನೀತಿ

**118.8.1** ಫ್ರೆಂಚರಿಂದ ರೂಹರ್‌ನ ಆಕ್ರಮಣ

**118.8.2** ಬ್ರಿಯಾಂಡ್-ಕೆಲ್ಲೋಗ್ ಒಪ್ಪಂದ(1928).

**118.9** ಮಾದರಿ ಪ್ರಶ್ನೆಗಳು

**118.10** ಅಧ್ಯಯನಕ್ಕಾಗಿ ಗ್ರಂಥಗಳು

## 118.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ಈ ಕೆಳಗಿನ ಅಂಶಗಳ ಬಗ್ಗೆ ಆಳವಾದ ಪರಿಜ್ಞಾನವುಂಟಾಗುತ್ತದೆ.

1) 1919ರ ನಂತರದ ಬ್ರಿಟಿಷ್ ವಿದೇಶಾಂಗ ನೀತಿ

2) ಮಹಾಯುದ್ಧಗಳ ನಡುವಣ ಅವಧಿಯ ಆಂಗ್ಲೋ-ಫ್ರೆಂಚ್ ಸಂಬಂಧ

3) ಬ್ರಿಟಿಷರ ಸಮಾಧಾನಪಡಿಸುವ ನೀತಿ

4) ಫ್ರೆಂಚರ ತೃಪ್ತಿಪಡಿಸುವ ಹಾಗೂ ಭದ್ರತಾ ನೀತಿ

5) ಫ್ರಾಂಕೋ-ಜರ್ಮನ್ ಸಂಘರ್ಷ

## 118.1 ಪೀಠಿಕೆ

ಯುದ್ಧಗಳ ನಡುವಣ ಅವಧಿಯಲ್ಲಿ ಸಮಸ್ಯೆಗಳು ಎದುರಾದಾಗ ಸ್ಪಂಧಿಸುತ್ತಿದ್ದ ಬ್ರಿಟಿಷ್ ನೀತಿಯಲ್ಲಿ ಭಾರೀ ಬದಲಾವಣೆ ಕಂಡು ಬಂದಿತು. ವಿದೇಶಾಂಗ ನೀತಿಗೂ ಆ ನಡತೆ ಅನ್ವಯಿಸುತ್ತದೆ. ಸರ್ವಾಧಿಕಾರಿಗಳ ಬಗ್ಗೆ ಅನುಸರಿಸಿದ ತೃಪ್ತಿಪಡಿಸುವ ನೀತಿಯಿಂದ ಏನೂ ಪ್ರಯೋಜನಾವಾಗುವುದಿಲ್ಲ. ಆದರೆ ಫ್ರಾನ್ಸ್ ಮಾತ್ರ ಜರ್ಮನಿಯ ಬಗೆಗಿನ ಭಯದಿಂದ ಮೈತ್ರಿಗಳನ್ನೇರ್ಪಡಿಸುವ ಪದ್ಧತಿಯನ್ನನುಸರಿಸಿತು. ಸರ್ವಾಧಿಕಾರಿಗಳನ್ನು ಶಾಂತರನ್ನಾಗಿಸಲು ಬ್ರಿಟನ್ ಮತ್ತು ಫ್ರಾನ್ಸ್ ಪ್ರಯತ್ನಿಸಿದರೂ ಮತ್ತೊಂದು ಜಾಗತಿಕ ಯುದ್ಧ ನಡೆಯುವುದನ್ನು ತಪ್ಪಿಸಲಾಗಲಿಲ್ಲ.

## 118.2 ಬ್ರಿಟಿಷ್ ವಿದೇಶಾಂಗ ನೀತಿ: ತತ್ವಗಳು ಮತ್ತು ಸಮಸ್ಯೆಗಳು

ಪ್ರಥಮ ಮಹಾಯುದ್ಧಾನಂತರದ ಬ್ರಿಟಿಷ್ ವಿದೇಶಾಂಗ ನೀತಿಯ ತತ್ವಗಳಲ್ಲಿ ಬದಲಾವಣೆ ಏನೂ ಕಂಡುಬರಲಿಲ್ಲ. ಸ್ವಾಭಾವಿಕ ಒಂಟಿತನವನ್ನು ಕಾಪಾಡಿಕೊಂಡು ವಿದೇಶಿಯ ಆಕ್ರಮಣಗಳಿಗೆ ಒಗ್ಗಿಕೊಂಡಿತ್ತು. ಆದುದರಿಂದ ಬಲವಾದ ನೌಕಾಬಲವನ್ನು ನಿರ್ಮಿಸುವುದು ಅನಿವಾರ್ಯವಾಯಿತು. ಬ್ರಿಟಿಷ್ ದ್ವೀಪಗಳಲ್ಲಿ ತನ್ನದೇ ಆದ ಶಕ್ತಿ ಕೇಂದ್ರವೊಂದು ನಿರ್ಮಾಣವಾಯಿತು. ಇದರಿಂದಾಗಿ ಬ್ರಿಟನ್ ಖಂಡಾಂತರ ರಾಜಕೀಯ ಹಾಗೂ ಮೈತ್ರಿಗಳಿಂದ ದೂರವಿರುವುದೂ ಸಾಧ್ಯವಾಯಿತು. ಈ ತತ್ವವನ್ನು 'ಅದ್ಭುತ ಒಂಟಿತನ' ವೆಂದು ಕರೆಯಲಾಗಿದೆ. ಅದೇ ಸಮಯದಲ್ಲಿ ಬ್ರಿಟನ್ ಯಾವ ದೇಶಕ್ಕೂ ಯುರೋಪಿನ ಮೇಲೆ ಹಿಡಿತ ಸಾಧಿಸಲು ಅವಕಾಶ ನೀಡಲು ಸಿದ್ಧವಾಗಿರಲಿಲ್ಲ. ಈ ಗುರಿ ಸಾಧನೆಗಾಗಿ ಯುರೋಪಿನ ಅಧಿಕಾರ ಸಮತೋಲನಕ್ಕೆ ಧಕ್ಕೆಯುಂಟಾಗದಂತೆ ನೋಡಿಕೊಂಡಿತು. ಪ್ರಥಮ ಮಹಾಯುದ್ಧ ಆರಂಭವಾಗುವ ಹೊತ್ತಿಗೆ ಜರ್ಮನಿಯ ವಿರುದ್ಧ ಏರ್ಪಡಿಸಿಕೊಂಡ ಮೈತ್ರಿ ಕೂಟವೇ ಇದಕ್ಕೆ ನಿದರ್ಶನ. ಬ್ರಿಟಿಷ್ ವಿದೇಶಾಂಗ ನೀತಿಯ ಈ ಮುಖ್ಯ ತತ್ವವನ್ನು ನಿರೂಪಿಸುವ ಅನೇಕ ಉದಾಹರಣೆಗಳನ್ನು ನೀಡಬಹುದು. ಜರ್ಮನಿಯೊಂದಿಗೆ ತೃಪ್ತಿಪಡಿಸುವ ನೀತಿಯನ್ನನುಸರಿಸುವ ಅತ್ಯುತ್ಸಾಹದಲ್ಲಿ ಪ್ರಧಾನಿ ನೆವಿಲ್ ಚೇಂಬರ್‌ಲೀನ್ ಈ ತತ್ವವನ್ನೇ ಮರೆತನು. 1939ರಲ್ಲಿ ಆರಂಭವಾದ ದ್ವಿತೀಯ ಮಹಾಯುದ್ಧದ ಬೀಜ ಮೊಳಕೆಯೊಡೆದುದೇ ಇಲ್ಲಿ. ಪುಟ್ಟ ರಾಷ್ಟ್ರಗಳ ಬಗೆಗಿನ ಭದ್ರತೆಯ ಕಾಳಜಿ ಬ್ರಿಟಿಷ್ ವಿದೇಶಾಂಗ ನೀತಿಯ ಇನ್ನೊಂದು ಪ್ರಮುಖ ತತ್ವ. ಇಂಗ್ಲೆಂಡಿನ ರಕ್ಷಣೆ ಮತ್ತು ಭದ್ರತೆ ಈ ತತ್ವವನ್ನವಲಂಭಿಸಿತ್ತು. ಹಾಲೆಂಡ್‌ನಂತರ ಪುಟ್ಟ ದೇಶಗಳನ್ನು ಶತ್ರು ದೇಶಗಳು ಇಂಗ್ಲೆಂಡಿನ ಮೇಲೆ ಆಕ್ರಮಣ ನಡೆಸುವ ನೆಲೆಗಳನ್ನಾಗಿ ಉಪಯೋಗಿಸಬಹುದೆಂಬ ಭಾವನೆ ಇದಕ್ಕೆ ಕಾರಣವಾಗಿದ್ದಿರಬಹುದು.

### 118.2.1 *ವರ್ಸೈಲ್ಸ್ ಒಪ್ಪಂದಾನಂತರದ ನೀತಿ*

ಗ್ರೇಟ್‌ಬ್ರಿಟನ್ ಅನುಸರಿಸಿದ ಅನುಕೂಲಕರ ವಿದೇಶಾಂಗ ನೀತಿಯನ್ನು ವರ್ಸೈಲ್ಸ್ ಒಪ್ಪಂದಾನಂತರ ಮುಂದುವರಿಸುವುದು ಸಾಧ್ಯವಿರಲಿಲ್ಲ. 'ಅದ್ಭುತ ಒಂಟಿತನ'ವನ್ನು ಮುಂದುವರಿಸುವ ಕಾಲ ಮೀರಿತ್ತು. ಪರಿಸ್ಥಿತಿಯನ್ನು ಬಿಗಡಾಯಿಸಿದ ಸಮಸ್ಯೆಗಳು ಇಂಗ್ಲೆಂಡಿಗೆ ಎದುರಾದವು. 1918 ರ ನವೆಂಬರ್‌ನಲ್ಲಿ ಪ್ರಥಮ ಮಹಾಯುದ್ಧ ಮುಕ್ತಾಯದ ಹಂತದಲ್ಲಿದ್ದಾಗ ಬ್ರಿಟಿಷರು ಆಶಾಗೋಪುರವನ್ನು ಕಟ್ಟಿದರು. ಮನುಕುಲವನ್ನು ಕಾಡುತ್ತಿದ್ದ ಯುದ್ಧಭಯ ದೂರ ಸರಿದು ಶಾಂತಿ ಮತ್ತು ಸಮೃದ್ಧಿ ನೆಲಗೊಳ್ಳಬಹುದೆಂಬುದು ಬ್ರಿಟಿಷರ ಆಶಯವಾಗಿತ್ತು. ಯುದ್ಧಕ್ಕೆ ಕಾರಣವಾದ ಜರ್ಮನಿ ಸೋತಿತ್ತು. ಹಾಗೆಯೇ ಕೈಗಾರಿಕಾ ರಂಗದಲ್ಲಿ ಬ್ರಿಟನ್‌ನ ಸ್ಪರ್ಧಿಯಾಗಿದ್ದ ಜರ್ಮನಿ ನೆಲಕಚ್ಚಿತ್ತು. ಯುದ್ಧದಿಂದಾಗಿ ಬೇಸರಗೊಂಡಿದ್ದ ಐರೋಪ್ಯರು, ಅದರಲ್ಲೂ ಆಂಗ್ಲರು ಶತಮಾನದುದ್ದಕ್ಕೂ ಶಾಂತಿ ನೆಲೆಗೊಳ್ಳಬಹುದೆಂದು ಭಾವಿಸಿದರು.

ಶಾಂತಿ ಒಪ್ಪಂದವನ್ನು ರೂಪಿಸಿದವರ ಉತ್ತಮ ಶೋಧ-ಲೀಗ್ ಆಫ್ ನೇಷನ್ಸ್ ಎಂದು ಹೊಗಳಲಾಯಿತು. ಐರೋಪ್ಯ ರಾಜ್ಯಗಳೊಳಗೆ ಹೊಂದಾಣಿಕೆಯ ಯುಗವನ್ನು ಆರಂಭಿಸಬಹುದೆಂದು ನಿರೀಕ್ಷಿಸಲಾಯಿತು. ಕಲುಷಿತಗೊಂಡಿದ್ದ ಶಾಂತಿಯ ವಾತಾವರಣ ತಿಳಿಯಾಗಬಹುದೆಂದು ಭಾವಿಸಲಾಯಿತು. ವೀರರು ಜೀವಿಸಲು ಯೋಗ್ಯವಾದ ಭೂಮಿಯನ್ನಾಗಿ ಇಂಗ್ಲೆಂಡ್ ಪರಿವರ್ತನೆ ಹೊಂದುವುದೆಂದು ಪ್ರಧಾನಿ ಲಾಯ್ಡ್‌ಜಾರ್ಜ್ ಭಾವಿಸಿದನು. ವಿಜಯಕ್ಕಾಗಿಯೇ ದೇಶವನ್ನು ವ್ಯವಸ್ಥೆಗೊಳಿಸಿದ ಸರಕಾರ ಮುಂದೆ ಶಾಂತಿ ಕಾಲದಲ್ಲಿ ಪ್ರಗತಿಗೆ ದಾರಿ ಮಾಡಿಕೊಡುವುದೆಂದು ಭಾವಿಸಲಾಯಿತು. ಯುದ್ಧಾನಂತರದ ಮೂರು ವರ್ಷಗಳ ಕಾಲ ಆರ್ಥಿಕ ಕ್ಷೇತ್ರದಲ್ಲಿ ಇಂಗ್ಲೆಂಡ್ ಅದ್ಭುತ ಪ್ರಗತಿ ಸಾಧಿಸಿತು. ಆದರೆ ಈ ಅವಸ್ಥೆ ತಾತ್ಕಾಲಿಕವೆನಿಸಿತು.

1920ರ ದಶಕದ ಮಧ್ಯಭಾಗದಲ್ಲಿ ಜೀವನವೆಚ್ಚ ಏರಿ ಕಾರ್ಮಿಕರಲ್ಲಿ ಮುಷ್ಕರದ ಪ್ರವೃತ್ತಿ ಬೆಳೆಯಿತು. ಯುದ್ಧದ ಆವಾಂತರದಿಂದಾಗಿ ಸಾಗರೋತ್ತರ ವ್ಯಾಪಾರ ಕುಸಿದಿತ್ತು. ನಾಣ್ಯದ ಮೌಲ್ಯ ಕುಸಿದಿತ್ತು. ಉದ್ಯೋಗದ ಅವಕಾಶಗಳು ಕಡಿಮೆಯಾಗಿದ್ದವು ಮತ್ತು ಉತ್ಪನ್ನ ಕುಂಠಿತಗೊಂಡಿತ್ತು. ಬೆನ್ನೆಲುಬನ್ನೇ ಮುರಿದಿದ್ದ ಈ ಆಂತರಿಕ ದೌರ್ಬಲ್ಯಗಳ ಜೊತೆಗೆ ದೂರಪ್ರಾಚ್ಯ ಮತ್ತಿತರ ಕಡೆಗಳಲ್ಲಿ ಬ್ರಿಟನ್ ತೀವ್ರ ಪೈಪೋಟಿಯನ್ನು ಎದುರಿಸಬೇಕಾಗಿತ್ತು. ಕೈಗಾರಿಕಾ ಕ್ರಾಂತಿಯ ನಂತರ ಜನಸಾಗರ ನಗರಗಳಲ್ಲಿ ಸೇರಿತ್ತು. ಅವರಿಗೆ ಪ್ರಗತಿ ಮತ್ತು ಸಮೃದ್ಧಿಯ ದಾರಿಯನ್ನು ತೋರಿಸುವಲ್ಲಿ ಈ ಪೈಪೋಟಿ ತಡೆಯಾಗಿತ್ತು. ಉದಯ ರವಿಯ ನಾಡಾದ ಜಪಾನಿನ ಏಳಿಗೆ ದೂರಪ್ರಾಚ್ಯದಲ್ಲಿ ಬ್ರಿಟಿಷ್ ಹಿತಾಸಕ್ತಿಗಳಿಗೆ ಭಾರೀ ಹೊಡೆತ ನೀಡಿತ್ತು. ಪ್ರಥಮ ಮಹಾಯುದ್ಧಾನಂತರ ಅಮೆರಿಕಾ ಪ್ರಬಲ ದೇಶವಾಗಿ ಹೊರಹೊಮ್ಮಿದುದು ಬ್ರಿಟನ್‌ಗೆ ಸವಾಲಾಗಿ ಪರಿಣಮಿಸಿತು. ವಾಷಿಂಗ್ಟನ್ ಸಮ್ಮೇಳನದಲ್ಲಿ ನೌಕಾ ಪಡೆಯನ್ನು ಹೊಂದಿರುವುದಕ್ಕೆ ಸಂಬಂಧಿಸಿದಂತೆ ಅಮೆರಿಕಾ ಸಮಾನತೆಯನ್ನು ಪಡೆದುದು (5:5 ರ ಪ್ರಮಾಣ) ಬ್ರಿಟನ್‌ಗೆ ನುಂಗಲಾರದ ತುತ್ತಾಗಿತ್ತು.

ಗ್ರೇಟ್‌ಬ್ರಿಟನ್ ಲೀಗಿನ ಒಡಂಬಡಿಕೆಯ ಪ್ರಕಾರ ಅದರೊಂದಿಗೆ ಸಾಮೂಹಿಕ ಭದ್ರತೆಯ ಜವಾಬ್ದಾರಿಯನ್ನು ವಹಿಸಿಕೊಂಡಿತು. ವಿದೇಶಗಳಲ್ಲಿ ಬ್ರಿಟನ್ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ವಸಾಹತುಗಳು ಯುರೋಪಿನ ವ್ಯವಹಾರಗಳಲ್ಲಿ ಭಾಗವಹಿಸಲು ನಿರಾಕರಿಸಿದವು. ಹಾಗಾಗಿ ಲೀಗಿನ ಆದೇಶಗಳನ್ನು ಪಾಲಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ವಸಾಹತುಗಳ ಮನಃಸ್ಥಿತಿಯ ಪರಿಣಾಮವಾಗಿಯೇ 1924 ರ ಜಿನೇವಾ ಒಪ್ಪಂದವನ್ನು ಬ್ರಿಟನ್ ತಿರಸ್ಕರಿಸಲು ಕಾರಣವಾಯಿತು.

### 118.2.2 *ಅವನತಿಯ ಹಾದಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯ*

ಪ್ರಥಮ ಮಹಾಯುದ್ಧಾನಂತರ ಬ್ರಿಟನ್ ತನ್ನ ವಿದೇಶಾಂಗ ನೀತಿಯ ಮೇಲೆ ಪರಿಣಾಮ ಬೀರಿದ ಅನೇಕ ಸಮಸ್ಯೆಗಳನ್ನು ಎದುರಿಸಿತು. ಜಾನ್ ಸ್ಟ್ರ್ಯಾಚಿಯ ಪ್ರಕಾರ ಗ್ರೇಟ್ ಬ್ರಿಟನ್

"ಇಪ್ಪತ್ತನೇ ಶತಮಾನದ ಆಸ್ಟ್ರಿಯಾ". ಆಸ್ಟ್ರಿಯಾ ಯುರೋಪಿಗೆ ಸೀಮಿತವಾಗಿತ್ತು ನಿಜ, ಹಾಗೆಯೇ ಬ್ರಿಟಿಷ್ ಸಾಮ್ರಾಜ್ಯ ವಿಶ್ವದ ಉದ್ದಗಲಕ್ಕೂ ವಿಸ್ತರಿಸಿತು. ಬ್ರಿಟಿಷ್ ಸಾಮ್ರಾಜ್ಯ ವಿಸ್ತರಿಸಿದಷ್ಟೂ ಸಮಸ್ಯೆಗಳು ಹೆಚ್ಚಾದವು. ವರ್ಸೈಲ್ಸ್ ಒಪ್ಪಂದಾನಂತರದ ಅವಧಿಯಲ್ಲಿ ದಕ್ಷಿಣ ಆಫ್ರಿಕಾ, ಕೆನಡ, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ನಂತಹ ಸ್ವಾಯತ್ತಾಡಳಿತದ ರಾಜ್ಯಗಳು ತಲೆಎತ್ತಿದವು. ಅವು ಹೆಚ್ಚು ಕಡಿಮೆ ಸ್ವತಂತ್ರರಾಜ್ಯಗಳಾಗಿದ್ದವು. ವಸಾಹತುಗಳ ಸ್ವಾತಂತ್ರ್ಯ ಚಳುವಳಿ ಪಡೆದುಕೊಂಡ ಪ್ರಾಮುಖ್ಯತೆಯಿಂದಾಗಿ ಬ್ರಿಟಿಷ್ ಸರಕಾರ ಇನ್ನೂ ಹೆಚ್ಚಿನ ತೊಂದರೆಗಳನ್ನು ಎದುರಿಸಬೇಕಾಯಿತು.

ಸೂರ್ಯಮುಳುಗದ ಸಾಮ್ರಾಜ್ಯ ಅವನತಿಯ ಅಂಚಿಗೆ ಸರಿಯಿತು. ಬ್ರಿಟಿಷ್ ಸಾಮ್ರಾಜ್ಯ ಬಹಳಷ್ಟು ಪ್ರಭಾವವನ್ನು ಬಳಸಿಕೊಂಡು, ಅಗಾಧ ಸಂಪನ್ಮೂಲಗಳನ್ನು ಪಡೆದಿದ್ದರೂ ಪ್ರಯೋಜನವಾಗಲಿಲ್ಲ. ರಷ್ಯಾ, ಅಮೇರಿಕಾ ಮತ್ತು ಜಪಾನಿನ ಏಳಿಗೆ ಬ್ರಿಟನ್‌ನ ಪರಿಸ್ಥಿತಿಯನ್ನು ಮತ್ತೂ ಬಿಗಡಾಯಿಸಿತು. ಈ ಬದಲಾದ ಸನ್ನಿವೇಶದಲ್ಲಿ ಹಳೆಯ ತತ್ವಗಳೂ, ನೀತಿಗಳೂ ನಿಷ್ಪ್ರಯೋಜಕವೆನಿಸಿದವು. ಆದುದರಿಂದ ಫ್ರಾನ್ಸ್ ಮತ್ತಿತರ ದೇಶಗಳಿಗಾದಂತೆ ವರ್ಸೈಲ್ಸ್‌ನ ನಂತರದ ಅವಧಿ ಇಂಗ್ಲೆಂಡ್‌ಗೂ ಗೊಂದಲವನ್ನು ಸೃಷ್ಟಿಸಿದ ಅವಧಿ. ಯುದ್ಧ ಪರಿಹಾರ ಮತ್ತು ಸಾಲದ ಪ್ರಶ್ನೆ ಸಮಸ್ಯೆಗಳನ್ನು ಮತ್ತೂ ಗಂಭೀರವಾಗಿಸಿದವು. ಪರಿಹಾರದ ಪ್ರಶ್ನೆ ವ್ಯಾಪಾರದ ಸರಾಗ ಪುನಶ್ಚೇತನದ ಅವಕಾಶವನ್ನು ತಡೆಗಟ್ಟಿತು. ಆದರೆ ಜರ್ಮನಿಯನ್ನು ಪರಿಹಾರವನ್ನು ನೀಡುವಂತೆ ಮಾಡಲೇ ಬೇಕೆಂಬುದು ಯುದ್ಧಾನಂತರದ ಅನಿಸಿಕೆಯಾಗಿತ್ತು. ಈ ಸಮಸ್ಯೆ ತೀವ್ರ ಸ್ವರೂಪದ ಆರ್ಥಿಕ ಪ್ರತಿಕ್ರಿಯೆಗೆ ಎಡೆಮಾಡಿಕೊಟ್ಟಿತು. 1930ರ ದಶಕದ ಆರ್ಥಿಕ ಮುಗ್ಗಟ್ಟು ಒಟ್ಟಾವ ಸಮ್ಮೇಳನದಲ್ಲಿ ಬ್ರಿಟನ್ ಅನ್ನು ವ್ಯಾಪಾರಕ್ಕೆ ಆದ್ಯತೆ ನೀಡುವಂತೆ ಮಾಡಿತು.

ಈ ಎಲ್ಲಾ ಬೆಳವಣಿಗೆಗಳು ಬ್ರಿಟಿಷ್ ರಾಜಕಾರಣದ ಮೇಲೆ ಗಾಢವಾದ ಪ್ರಭಾವ ಬೀರಿದವು. ಬ್ರಿಟನ್ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಮಾಡಿದವು. ಮಹಾಯುದ್ಧಗಳ ನಡುವಣ ಬ್ರಿಟನ್‌ನ ಸರಕಾರಗಳು ಅಂತರರಾಷ್ಟ್ರೀಯ ಸಹಕಾರದ; ಸಮನ್ವಯದ ನೀತಿಯನ್ನನುಸರಿಸಿದವು. ತೊಂದರೆಗೀಡಾಗಿ ಲಾಭಗಳಿಸುವ ಪ್ರಯತ್ನವನ್ನು ಕೈಬಿಟ್ಟವು. ಇದೇ ಸಂತುಷ್ಟ ನೀತಿಯ ಮೂಲ.

### *118.2.3 ಆಂಗ್ಲೋ - ಫ್ರೆಂಚ್ ಸಂಬಂಧ*

ಪ್ರಥಮ ಮಹಾಯುದ್ಧ ಒಂದು ರೀತಿಯಲ್ಲಿ ಯುರೋಪಿನಲ್ಲಿ ತಾತ್ಕಾಲಿಕವಾಗಿ ಅಧಿಕಾರ ಸಮತೋಲನವನ್ನು ಪ್ರತಿಷ್ಠಾಪಿಸಿತು. ಆದರೆ ಫ್ರಾನ್ಸ್ ಮಾತ್ರ ಜರ್ಮನ್ ಆಕ್ರಮಣವು ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ನಿರ್ಧರಿಸಿದಂತಿತ್ತು. ಭದ್ರತೆಯನ್ನು ಖಾತರಿಪಡಿಸಿಕೊಳ್ಳುವ ಹಂಬಲಕ್ಕೆ ಬ್ರಿಟನ್ ಮತ್ತು ಅಮೇರಿಕಾ ದೇಶಗಳ ಭರವಸೆ ದೊರೆಯಿತು. ಆದರೆ ಅಮೇರಿಕಾ ಮುಂದೆ ವರ್ಸೈಲ್ಸ್ ಒಪ್ಪಂದವನ್ನೇ ಊರ್ಜಿತಗೊಳಿಸಲು ನಿರಾಕರಿಸಿತು. ಅದರ ಮೂಲಕ ಭದ್ರತೆಯ ಭರವಸೆಯನ್ನು ಉಲ್ಲಂಘಿಸಿತು. ಜರ್ಮನಿಯ ಪುನಶ್ಚೇತನದ ಸಾಧ್ಯತೆಯ ವಿರುದ್ಧ ಮೈತ್ರಿ ಪದ್ಧತಿಯನ್ನು ರೂಪಿಸುವ ಫ್ರೆಂಚ್ ಪ್ರಯತ್ನಕ್ಕೆ ಬ್ರಿಟಿಷ್ ವಲಯದ ಬೆಂಬಲವೂ ದೊರೆಯಲಿಲ್ಲ. 'ಅದ್ಭುತ ಒಂಟಿತನ' ನೀತಿಯ ಬ್ರಿಟನ್ ಯುರೋಪಿನಲ್ಲಿ ಆದಿಪತ್ಯ ಸ್ಥಾಪಿಸುವ ಫ್ರೆಂಚರ ಪ್ರಯತ್ನವನ್ನು ತನ್ನ ಹಿತಾಸಕ್ತಿಗಳ ವಿರುದ್ಧದ ಪ್ರಯತ್ನವೆಂದು ಭಾವಿಸಿತು. ಯುದ್ಧಗಳ ಅವಧಿಯ ಜರ್ಮನಿಯ ಪುನಶ್ಚೇತನವನ್ನು ಬ್ರಿಟಿಷ್ ಉದ್ಯಮಿಗಳು ಅನುಕೂಲಕರ ಬೆಳವಣಿಗೆಯೆಂದೇ ಭಾವಿಸಿದರು. ಲಾಭದಾಯಕ ಭರವಸೆ ಪಡೆಯುವ ಫ್ರೆಂಚರ ನೀತಿಯನ್ನೂ, ರೂರ್‌ನ ಆಕ್ರಮಣವನ್ನೂ (1923) ಬ್ರಿಟನ್ ವಿರೋಧಿಸಿತು. ಖಂಡಾಂತರ ವ್ಯವಹಾರಗಳಲ್ಲಿ ಮಧ್ಯವರ್ತಿಯ ಪಾತ್ರವನ್ನು ನಿರ್ವಹಿಸಲು ಬ್ರಿಟನ್ ಬಯಸಿತು. ಆದರೆ ಜರ್ಮನಿಯಲ್ಲಿ ಹಿಟ್ಲರನ ಏಳಿಗೆ ಮತ್ತು ಇಟಲಿಯ ಹೆಚ್ಚಾದ ಆಕ್ರಮಣ ಬ್ರಿಟಿಷ್ ರಾಜಕಾರಣಿಗಳ ದಾರಿ ತಪ್ಪಿಸಿತು. ಆಂಗ್ಲೋ-ಫ್ರೆಂಚ್ ರಾಜಕಾರಣದ ಮಾರಕ ಭಿನ್ನಾಭಿಪ್ರಾಯಗಳು ಫ್ಯಾಸಿಸ್ಟ್ ಶಕ್ತಿಗಳ ಬೆಳವಣಿಗೆಗೆ ಕೊಡುಗೆಯ ಅಂಶಗಳಾದವು. 1935ರ ಜೂನ್‌ನಲ್ಲಿ ಆಂಗ್ಲೋ-ಜರ್ಮನ್ ನೌಕಾ ಒಪ್ಪಂದವನ್ನೇರ್ಪಡಿಸಿಕೊಳ್ಳುವುದರ ಮೂಲಕ ಬ್ರಿಟನ್ ಜರ್ಮನಿಯ ವಿರುದ್ಧ ಇಂಗ್ಲೆಂಡ್, ಫ್ರಾನ್ಸ್

ಮತ್ತು ಇಟಲಿ ಏರ್ಪಡಿಸಿಕೊಂಡಿದ್ದ ಸ್ಟ್ರೆಸ್ಸಾ ಸಂಯುಕ್ತ ರಂಗವನ್ನು ನಾಶಪಡಿಸಿತು. ಇದರಿಂದಾಗಿ ಬ್ರಿಟನ್ ಕೈಗೊಂಡ ಪ್ರಮುಖ ನಿರ್ಧಾರಗಳು ಫ್ರಾನ್ಸ್ ಮತ್ತು ಅದರ ಆಪ್ತ ರಾಷ್ಟ್ರಗಳ ಬಲಹೀನಗೊಳಿಸಿದಂತೆ, ಇಟಲಿ ಮತ್ತು ಜರ್ಮನಿ ದೇಶಗಳ ಸಾಮರ್ಥ್ಯವನ್ನು ಹೆಚ್ಚಿಸಿದವು.

## 118.3 ಬ್ರಿಟನ್ ಮತ್ತು ಸಾಮೂಹಿಕ ಭದ್ರತೆ

ಬಲಿಷ್ಠ ದೇಶವೆಂಬ ಬ್ರಿಟನ್‌ನ ಸ್ಥಾನಕ್ಕೆ ಆಶ್ರಿತ ರಾಜ್ಯಗಳ ಸ್ವತಂತ್ರ ಕ್ರಮಗಳು ಧಕ್ಕೆಯನ್ನುಂಟುಮಾಡಿದವು ಎಂಬ ಅಂಶ ಗಮನಾರ್ಹವಾದುದು. ಆಶ್ರಿತ ರಾಜ್ಯಗಳು ಸಾಮೂಹಿಕ ಭದ್ರತೆಯ ಜವಾಬ್ದಾರಿಗೆ ಬದ್ಧವಾಗಿರಲು ಒಪ್ಪಲಿಲ್ಲ. ಇದು ತಾಯ್ನಾಡಾದ ಬ್ರಿಟನ್‌ಗೆ ಹೊಸ ಸಮಸ್ಯೆಯಾಗಿ ಪರಿಣಮಿಸಿತು. 1923ರಲ್ಲಿ ಕೆನಡಾದ ನಿಯೋಗ ಲೀಗಿಗೆ ಸಲ್ಲಿಸಿದ ನಿರ್ಣಯವು ಸಾಮೂಹಿಕ ಭದ್ರತೆಗೆ ಲೀಗಿನ ಸದಸ್ಯ ರಾಷ್ಟ್ರಗಳ ಜವಾಬ್ದಾರಿಯ ಮೇಲೆ ಮಿತಿ ಹೇರಿತ್ತು. ಆದರೆ ಪ್ರಥಮ ಮಹಾಯುದ್ಧದಿಂದ ಯುರೋಪಿನ ಅಧಿಕಾರ ಸಮತೋಲನಕ್ಕೆ ಉಂಟಾದ ಧಕ್ಕೆಯಿಂದಾಗಿ ಬ್ರಿಟನ್‌ನ ಜವಾಬ್ದಾರಿ ಮಾತ್ರ ಹೆಚ್ಚಾಯಿತು. ಆದುದರಿಂದ ಬ್ರಿಟನ್ ಜರ್ಮನಿಯ ಪುನಶ್ಚೇತನದಲ್ಲಿ ನೆರವಾಗಲು ನಿರ್ಧರಿಸಿತು. ಹಿಟ್ಲರ್ ಅಧಿಕಾರಕ್ಕೆ ಬಂದ ಮೇಲೆ ಜರ್ಮನಿಯೊಂದಿಗೆ ಸ್ನೇಹದಿಂದಿರಲು ಬಯಸಿತು. ಭದ್ರತೆಯನ್ನು ಸಾಧಿಸುವ ಮತ್ತು ಯುರೋಪಿನಲ್ಲಿ ಅಧಿಕಾರ ಸಮತೋಲನವನ್ನು ಕಾಪಾಡುವ ಆಶಯದ ನಡುವೆ ಬ್ರಿಟನ್‌ನ ವಿದೇಶಾಂಗ ನೀತಿ ನುಚ್ಚುನುರಾಯಿತು. ಆದುದರಿಂದಲೇ ಅಬಿಸ್ಸೀನಿಯದ ಮೇಲೆ ಆಕ್ರಮಣ ಮಾಡಿದ ಇಟಲಿಯ ಮೇಲೆ ಪೂರ್ಣ ಮನಸ್ಸಿನಿಂದ ಆರ್ಥಿಕ ದಿಗ್ಬಂಧನವನ್ನು ವಿಧಿಸಲಿಲ್ಲ. ಇಟಲಿಯ ಆಕ್ರಮಣ ಯುರೋಪಿನ ಅಧಿಕಾರ ಸಮತೋಲನದ ಮೇಲೆ ಪರಿಣಾಮವನ್ನು ಬೀರಲಿಲ್ಲ. ಹೋರೆ-ಲ್ಯಾವಲ್ ಒಪ್ಪಂದವೇ ಇದಕ್ಕೆ ಸಾಕ್ಷಿ. ಆದರೆ ಇದರಿಂದಾಗಿ ಸಾಮೂಹಿಕ ಭದ್ರತೆಯನ್ನು ಬಲಿಕೊಟ್ಟಂತಾಯಿತು. ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಸರ್ ಆಂತೋಣಿ ಈಡನ್ ಸಾಮೂಹಿಕ ಭದ್ರತೆಯನ್ನು ಕಾಪಾಡುವುದರ ಪರವಾಗಿದ್ದನು. 1938ರಲ್ಲಿ ಸರ್ವಾಧಿಕಾರಿಗಳನ್ನು ಸಂತುಷ್ಟಗೊಳಿಸುವ ಸಲುವಾಗಿ ಆತನನ್ನು ಬಲಿಕೊಡಲಾಯಿತು. ಜರ್ಮನಿಯನ್ನು ಹತ್ತಿಕ್ಕಿ ಯಥಾಸ್ಥಿತಿಯನ್ನು ಕಾಪಾಡಲು ಸ್ಟ್ರೆಸ್ಸಾ ಸಂಯುಕ್ತರಂಗ ಅಗತ್ಯವಾಗಿತ್ತು. ಬ್ರಿಟನ್, ಫ್ರಾನ್ಸ್ ಮತ್ತು ಇಟಲಿ ಸ್ಟ್ರೆಸ್ಸಾ ಸಮ್ಮೇಳನದಲ್ಲಿ ಸಂಯುಕ್ತ ರಂಗವನ್ನೇರ್ಪಡಿಸಿಕೊಂಡವು. ಅದೇ ವೇಳೆ ಬ್ರಿಟನ್ ಅಧಿಕಾರ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ಜರ್ಮನಿಯ ಪುನಶ್ಚೇತನವನ್ನೂ ಬಯಸಿತು. ನೌಕಾ ಒಪ್ಪಂದದ ಮೂಲಕ ಸಾಮೂಹಿಕ ಭದ್ರತೆ ಕುಸಿಯುವಂತೆ ಮಾಡಿತು. ಬ್ರಿಟಿಷ್ ವಿದೇಶಾಂಗ ನೀತಿಯ ಪೇಚು ಹಿಟ್ಲರನ ಅಧಿಕಾರದ ಕ್ರೋಢೀಕರಣಕ್ಕೆ ನೆರವಾಯಿತು. ಸ್ಪೈನಿನಲ್ಲಿ ಫ್ಯಾಸಿಸ್ಟರು ಇಟಲಿ ಮತ್ತು ಜರ್ಮನಿಯ ನೆರವಿನಿಂದ ಪ್ರಜಾಪ್ರಭುತ್ವದ ಸರಕಾರವನ್ನು ಹತ್ತಿಕ್ಕಿದರು. ಯುದ್ಧಾನಂತರದ ಆರ್ಥಿಕ ಸಮಸ್ಯೆಗಳು ಮತ್ತು ಆರ್ಥಿಕ ಮುಗ್ಗಟ್ಟು ವಿದೇಶಾಂಗ ನೀತಿಯ ಪೇಚಿಗೆ ಕಾರಣವಾಗಿ ಬ್ರಿಟನ್ನನ್ನು ಬಲಹೀನಗೊಳಿಸಿ ಕಾರ್ಯಾಭಾವವನ್ನಾಗಿಸಿತು.

## 118.4 ಸಮಾಧಾನಪಡಿಸುವ ನೀತಿಯ ಮೂಲ

ವಿದೇಶಾಂಗ ನೀತಿಯ ಇಕ್ಕಟ್ಟಿಗೆ ಸಿಲುಕಿದಾಗ ಪರಿಸ್ಥಿತಿಯನ್ನು ನಿಭಾಯಿಸಲು ಇಂಗ್ಲೆಂಡ್ ಕೈಗೊಂಡ ಕ್ರಮವನ್ನು "ಸಮಾಧಾನಪಡಿಸುವ ನೀತಿ" ಎಂದು ಹೆಸರಿಸಲಾಗಿದೆ. ಯುದ್ಧಗಳ ನಡುವಣ ಅವಧಿಯ ಬ್ರಿಟಿಷ್ ವಿದೇಶಾಂಗ ನೀತಿಯನ್ನು ನಿಯಂತ್ರಿಸುತ್ತಿದ್ದವರು "ಸಂಪ್ರದಾಯವಾದಿಗಳು" ಅಂತರರಾಷ್ಟ್ರೀಯ ಸಂಬಂಧಗಳಿಗೆ ಸಂಬಂಧಿಸಿದಂತೆ ಅವರ ನಿಲುವನ್ನು ನಿರ್ಧರಿಸಿದ ಅಂಶಗಳು ಈ ಕೆಳಕಂಡಂತಿವೆ.

1. ಶಾಂತಿ ಸ್ಥಾಪನೆಯ ಬ್ರಿಟಿಷ್ ಸರಕಾರದ ವಿದೇಶಾಂಗ ನೀತಿಯ ಉದ್ದೇಶ. ಬ್ರಿಟನ್ ಮತ್ತು ವಿದೇಶೀಯ ದೇಶಗಳೊಂದಿಗೆ ಸುಮಧುರ ಬಾಂಧವ್ಯ ಸಾಧಿಸುವುದು ಅದರ ಗುರಿ.

2. ಲೀಗಿನ ಸ್ಥಾಪನೆಯ ದಿನಗಳಿಂದಲೇ ಬ್ರಿಟನ್ ಲೀಗಿನ ತತ್ವವನ್ನು ಬೆಂಬಲಿಸಿತು. ಲೀಗಿನ ಕ್ರಮವನ್ನು ಧಿಕ್ಕರಿಸಿದವರನ್ನು ದುರಾಕ್ರಮಣಕಾರರು ಎಂದು ಪರಿಗಣಿಸಲಾಗುವುದು.

3. 1920ರ ದಶಕದಲ್ಲಿ ಜರ್ಮನಿಯನ್ನು ಕಂಡರೆ ಫ್ರಾನ್ಸ್‌ಗೆ ತಾತ್ಸಾರ ಎಂಬುದನ್ನು ಇಂಗ್ಲೆಂಡ್ ತಿಳಿದಿತ್ತು. ಆದುದರಿಂದ ಪರಸ್ಪರ ಭದ್ರತಾ ಮೈತ್ರಿಗಳಲ್ಲಿ ಭಾಗವಹಿಸುವ ಫ್ರೆಂಚರ ಯೋಜನೆಗಳಿಂದ ದೂರವಿರಲು ಪ್ರಯತ್ನಿಸಿತು.

4. 1939ರ ಸೆಪ್ಟೆಂಬರ್‌ನಲ್ಲಿ ಹಿಟ್ಲರ್ ಪೋಲೆಂಡಿನ ಮೇಲೆ ಆಕ್ರಮಣ ನಡೆಸುವವರೆಗೆ ಚೇಂಬರ್‌ಲೀನ್ ಹಿಟ್ಲರನ ಪ್ರಾದೇಶಿಕ ಬೇಡಿಕೆಗಳನ್ನು ಈಡೇರಿಸುವುದರ ಮೂಲಕ ಜರ್ಮನಿಯೊಂದಿಗಿನ ಹೋರಾಟವನ್ನು ತಪ್ಪಿಸಲು ಪ್ರಯತ್ನಿಸಿದನು. ಇದನ್ನೇ 'ಸಮಾಧಾನಪಡಿಸುವ ನೀತಿ' ಯೆಂದು ಕರೆದುದು. ಹಿಟ್ಲರನಿಗೆ ದೊಡ್ಡ ಪ್ರಮಾಣದ ಯುದ್ಧ ಬೇಕಿರಲಿಲ್ಲ ಬದಲಾಗಿ ಆತ ವರ್ಸೈಲ್ಸ್ ಒಪ್ಪಂದ ಮಾಡಿದ ಪ್ರದೇಶಗಳ ಪುನರ್ ಹಂಚಿಕೆಯ ಕೆಲಸವನ್ನು ಪುನರ್‌ವಿಮರ್ಶಿಸಲು ಬಯಸಿದ.

### *118.4.1 ರಿಯಾಯಿತಿಯ ನೀತಿ*

ಈ ಉದ್ವೇಗದ ವರ್ಷಗಳಲ್ಲಿ ಬ್ರಿಟನ್‌ನ ಸಂಪ್ರದಾಯವಾದೀ ಸರಕಾರ ಸ್ಟ್ಯಾನ್‌ಲೀ ಬಾಲ್ಡ್‌ವಿನ್ (1935-1937) ಮತ್ತು ನೆವಿಲ್ ಚೇಂಬರ್‌ಲೀನ್ (1937-1940) ಅಧಿಕಾರದಲ್ಲಿದ್ದಾಗ ಇಟಲಿ ಮತ್ತು ಜರ್ಮನಿಗೆ ಸಂಬಂಧಿಸಿದಂತೆ 'ರಿಯಾಯಿತಿಯ ನೀತಿ' ಯನ್ನು ಅನುಸರಿಸಿತು. ಈ ನೀತಿ ಮುಖ್ಯವಾಗಿ ಚೇಂಬರ್‌ಲೀನ್‌ನ ಹೆಸರಿಗೇ ಅಂಟಿಕೊಂಡಿತ್ತು. ಈತ ಫ್ಯಾಸಿಸ್ಟ್ ಸರ್ವಾಧಿಕಾರಿಗಳನ್ನು ಅತಿಯಾಗಿ ಸಂತುಷ್ಟಗೊಳಿಸಲು ಪ್ರಯತ್ನಿಸಿದ. ಆತ ಉದ್ಯಮಿಯಾಗಿದ್ದುದರಿಂದ ವ್ಯಾಪಾರ ಮತ್ತು ವಾಣಿಜ್ಯೋದ್ಯಮದ ಅನುಭವವನ್ನು ಅಂತರರಾಷ್ಟ್ರೀಯ ಸಂಬಂಧಗಳ ನಿಯಂತ್ರಣಕ್ಕೆ ಉಪಯೋಗಿಸಿದ. ಈ ನಿರ್ಣಾಯಕ ವರ್ಷಗಳಲ್ಲಿ ಅವನು ಹಿಂದೆ ಖಾಸಗೀ ಉದ್ಯಮವನ್ನು ನಿಭಾಯಿಸಿದ ರೀತಿಯಲ್ಲಿ ಬ್ರಿಟಿಷ್ ರಾಜಕಾರಣದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದ. ವೈಯುಕ್ತಿಕ ನಿಲುವು ಬ್ರಿಟನ್ ಮತ್ತು ಫ್ರಾನ್ಸ್ ಹಾಗೂ ಬ್ರಿಟನ್ ಮತ್ತು ಸರ್ವಾಧಿಕಾರಿಗಳ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದೆಂದು ಭಾವಿಸಿದ್ದ. ಚೂರುಗಳನ್ನು ಎಸೆಯುವುದರ ಮೂಲಕ ಬ್ರಿಟನ್ ನಾಝಿ ಜರ್ಮನಿ, ಫ್ಯಾಸಿಸ್ಟ್ ಇಟಲಿ ಮತ್ತು ಸೇನಾಪ್ರಧಾನ ಜಪಾನ್‌ನ್ನು ಸಮಾಧಾನಗೊಳಿಸಲು ಪ್ರಯತ್ನಿಸಿತು. ಈ ಉದ್ದೇಶದಿಂದಲೇ ಮಂಚೂರಿಯಾ, ಅಬಿಸ್ಸೀನಿಯಾ, ಆಸ್ಟ್ರಿಯಾ ಮತ್ತು ಜೆಕೋಸ್ಲೊವಾಕಿಯಾಗಳನ್ನು ಬಲಿಕೊಡಲಾಯಿತು. ಫ್ಯಾಸಿಸಮ್‌ನ ಹಸಿದ ತೋಳಗಳನ್ನು ಈ ರೀತಿಯ ರಿಯಾಯಿತಿಯಿಂದ ತೃಪ್ತಪಡಿಸಬಹುದೆಂದು ಭಾವಿಸಲಾಯಿತು. ಇದು ಇಂಗ್ಲೆಂಡನ್ನೇ ಕೆಲವು ಅಪಾಯಕಾರಿ ಯುದ್ಧಗಳಲ್ಲಿ ತೊಡಗಿಸಿತು. ಇಂಗ್ಲೆಂಡ್ ಸಹಜ ಧಾಟಿಯಲ್ಲಿಯೇ ಕಾರ್ಯ ನಿರ್ವಹಿಸುವಂತಾಯಿತು. ಬ್ರಿಟನ್ ನಾಝಿ ಜರ್ಮನಿಯನ್ನು ಹತ್ತಿಕ್ಕಲು ವಿಫಲವಾದಾಗ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗಬಹುದೆಂದು ಛೇಂಬರ್‌ಲೀನ್‌ಗೆ ಅನಿಸಲೇ ಇಲ್ಲ.

ಸರ್ವಾಧಿಕಾರಿಗಳ ಹಸಿವಿಗೆ ಮಿತಿ ಇರುತ್ತದೆ ಎಂದು ಛೇಂಬರ್ ಲೀನ್ ನಂಬಿದ್ದ. ಹಾಗೆಯೇ ಇಟಲಿ ಮತ್ತು ಜರ್ಮನಿ ದೇಶಗಳ ಅಹವಾಲುಗಳು ಸಹಜವಾದುವೆಂದೂ ನಂಬಿದ್ದ. ಆದುದರಿಂದ ಅವರ ಸಮಸ್ಯೆಗಳನ್ನು ಬಗೆಹರಿಸಿದರೆ ಯುರೋಪಿನಲ್ಲಿ ಶಾಂತಿ ನೆಲೆಗೊಳ್ಳಬಹುದೆಂದು ಭಾವಿಸಿದ. ವಿನ್‌ಸ್ಟನ್ ಚರ್ಚಿಲ್‌ರಂತಹ ರಾಜನೀತಿ ನಿಪುಣರು ಎಚ್ಚರಿಕೆಯನ್ನು ನೀಡಿದ್ದಾಗ್ಯೂ ಈ ನೀತಿಯನ್ನು ದೃಢ ನಿರ್ಧಾರದಿಂದ ಅನುಸರಿಸಿದ. ಚರ್ಚಿಲ್ ನಾಝಿಗಳ ಗುಣನಡತೆಗಳನ್ನು ಸರಿಯಾಗಿಯೇ ಅಳೆದಿದ್ದ. ತೃಪ್ತಿಪಡಿಸುವ ನೀತಿಯನ್ನು ಅನುಸರಿಸುವುದರಿಂದ ಸರ್ವಾಧಿಕಾರಿಗಳು ಕೃತಜ್ಞರಾಗಿರಬಹುದೆಂಬುದು ಛೇಂಬರ್‌ಲೀನನ ಅನಿಸಿಕೆಯಾಗಿತ್ತು. ಆದರೆ ಹಾಗಾಗಲಿಲ್ಲ.

### 118.4.2 ತೃಪ್ತಿ ಪಡಿಸುವ ನೀತಿಯ ಸಮರ್ಥನೆ

ಈ ನೀತಿಯನ್ನು ಸಮರ್ಥಿಸಿಕೊಂಡವರು ಯುದ್ಧವನ್ನು ಮುಂದೂಡುವುದಕ್ಕಾಗಿ ಈ ನೀತಿ ಅಗತ್ಯವೆಂದು ವಾದಿಸಿದರು. ನಾಝಿ ಜರ್ಮನಿಯೊಂದಿಗೆ ಯುದ್ಧ ಅನಿವಾರ್ಯವಾದರೆ ಪಾಶ್ಚಾತ್ಯ ದೇಶಗಳಿಗೆ ಯುದ್ಧ ಸಿದ್ಧತೆ ಮಾಡಿಕೊಳ್ಳಲು ಸಮಯದ ಅಗತ್ಯವಿದೆ ಎಂದು ವಾದಿಸಲಾಯಿತು. ಫ್ಯಾಸಿಸ್ಟ್ ಆಕ್ರಮಣದ ವಿರುದ್ಧ ಹೋರಾಡಲು ಸಿದ್ಧತೆಗೆ ಬೇಕಾಗುವಷ್ಟು ಸಮಯದ ಅಗತ್ಯವನ್ನು ಛೇಂಬರ್‌ಲೀನ್ ಆಗಾಗ್ಗೆ ಹೇಳುತ್ತಿದ್ದ. ವಾಸ್ತವವಾಗಿ ಈ ವಾದ ಸರಿ ಎನಿಸಿದರೂ ಹಿಟ್ಲರ್ ಮತ್ತು ಮುಸ್ಸೋಲಿನಿಯ ದುರಾಸೆಗಳಿಗೆ ಕುಮ್ಮಕ್ಕು ನೀಡಿತು. ಬ್ರಿಟನ್ ಯುದ್ಧ ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ. ಆದುದರಿಂದ ಈ ನೀತಿ ಉಸಿರಾಡಲು ಕಾಲಾವಕಾಶ ನೀಡಿದಂತಾಯಿತು. ಶಸ್ತ್ರಗಳಿಗೆ ಹೆಚ್ಚು ಖರ್ಚು ಮಾಡುತ್ತಿದ್ದ ಇಂಗ್ಲೆಂಡಿನ ವೆಚ್ಚ 1938 ರ ಹೊತ್ತಿಗೆ 400 ಮಿಲಿಯ ಡಾಲರುಗಳಿಗೆ ಏರಿತು. ಸೈನ್ಯದ ಪಡೆಗಳ ಸಂಖ್ಯೆಯೂ ಹೆಚ್ಚಿತು. ಇದೇ ಸಮಯದಲ್ಲಿ ಕೇಂದ್ರ ರಾಷ್ಟ್ರಗಳು ಸುಮ್ಮನಿರಲಿಲ್ಲ. 1938-39 ರಲ್ಲಿ ಜರ್ಮನಿ ಶಸ್ತ್ರಾಸ್ತ್ರಗಳಿಗಾಗಿ 1500 ಮಿಲಿಯ ಡಾಲರುಗಳನ್ನು ಖರ್ಚು ಮಾಡಿತು. ಹಿಟ್ಲರ್ ಸುಳ್ಳಿನ ಸರಮಾಲೆಯಿಂದ ಸೈನ್ಯಕ್ಕೆ ಕಡ್ಡಾಯ ಸೇರ್ಪಡೆ, ಪುನರ್ ಸೈನ್ಯೀಕರಣ, ಸಂಘಟನೆಯಂತಹ ಕಾರ್ಯಗಳ ಮೂಲಕ ಮೂರನೇ ರೀಚ್‌ಗೆ 7 ಮಿಲಿಯ ಜನರನ್ನು ಸೇರಿಸಿದ. ಜೆಕೋಸ್ಲೋವಾಕಿಯಾದ ವಿಭಜನೆ ಮತ್ತು ಆಕ್ರಮಣ ಮೂರನೇ ಜರ್ಮನ್ ರಾಷ್ಟ್ರವನ್ನು ಮತ್ತೂ ಬಲಪಡಿಸಿತು. ಇದರಿಂದಾಗಿ ಜರ್ಮನಿಯ ಸೈನ್ಯ ಬಲವೂ ವೃದ್ಧಿಸಿತು. ಛೇಂಬರ್‌ಲೀನನ ತಪ್ಪು ನೀತಿಯ ಫಲವಾಗಿ ಇದೆಲ್ಲಾ ಸಾಧ್ಯವಾಯಿತು.

### 118.4.3 ಉತ್ಕೃಷ್ಟ ಮೈತ್ರಿಯ ಪ್ರಯತ್ನ

ರಷ್ಯಾದ ನೆರವಿನಿಂದ ಬ್ರಿಟನ್ ಮತ್ತು ಫ್ರಾನ್ಸ್ ಫ್ಯಾಸಿಸಮ್‌ನ ವಿರುದ್ಧ ಉತ್ಕೃಷ್ಟ ಮೈತ್ರಿಯನ್ನು ಸ್ಥಾಪಿಸಬಹುದಿತ್ತು. ಹಾಗೆ ಮಾಡದಿದ್ದುದರಿಂದಲೇ ಸಮಾಧಾನಪಡಿಸುವ ನೀತಿಗೆ ಜೋತುಬೀಳಬೇಕಾಯಿತು. ಮ್ಯೂನಿಚ್ ದುರಂತದ ನಂತರವಂತೂ ಹಿಟ್ಲರ್‌ನನ್ನು ಸಂಪೂರ್ಣ ಷರತ್ತುಗಳಿಗೆ ಒಳಪಡಿಸದಿದ್ದರೆ ಏನೂ ಪ್ರಯೋಜನವಿಲ್ಲವೆಂಬುದು ಮನವರಿಕೆಯಾಯಿತು. ಛೇಂಬರ್‌ಲೀನ್ ರಷ್ಯಾವನ್ನು ನಂಬದಿದ್ದುದಕ್ಕಾಗಿ ಪಶ್ಚಾತ್ತಾಪಪಟ್ಟನು. ರಷ್ಯಾವನ್ನು ಮ್ಯೂನಿಚ್ ಒಪ್ಪಂದದಿಂದ ಹೊರಗಿಟ್ಟಿದುದು ಮಾತ್ರವಲ್ಲದೆ, ಒಪ್ಪಂದದ ನಂತರವೂ ಆರು ರಾಷ್ಟ್ರಗಳ ಸಮ್ಮೇಳನವನ್ನು ಕರೆಯಬೇಕೆಂಬ ರಷ್ಯಾದ ಸಲಹೆಯನ್ನು ಕಡೆಗಣಿಸಲಾಗಿತ್ತು. ಜರ್ಮನಿಯನ್ನು ಒತ್ತಾಯಪೂರ್ವಕವಾಗಿ ಸಂತುಷ್ಟಗೊಳಿಸದೆ ತಮ್ಮ ಗಮನವನ್ನು ಪೂರ್ವದ ಕಡೆ ಹರಿಸಬಹುದೆಂದು ಪಾಶ್ಚಾತ್ಯ ದೇಶಗಳು ಭಾವಿಸಿದವು. ಇಂಗ್ಲೆಂಡಿನ ಟೋರಿ ಸಂಪ್ರದಾಯವಾದಿಗಳು ಕಮ್ಯೂನಿಸ್ಟರ ಮುನ್ನಡೆಗೆ ತಡೆಯಾಗಿರುವ ದೇಶವೆಂದು ಜರ್ಮನಿಯನ್ನು ಹೊಗಳಿದರು. ಬ್ರಿಟನ್ ಮತ್ತು ಫ್ರಾನ್ಸ್‌ಗೆ ಈ ಮೂಲಕ ಜರ್ಮನಿ ಪಾಶ್ಚಾತ್ಯ ಪ್ರಜಾಪ್ರಭುತ್ವವನ್ನು ರಕ್ಷಿಸುವುದಾದರೆ, ಅಷ್ಟೆ ಸಾಕಾಗಿತ್ತು ಜರ್ಮನಿಯ ಬಗ್ಗೆ ಉದಾರ ನೀತಿಯನ್ನು ಅನುಸರಿಸಲು.

### 118.4.4 ಸಮಾಧಾನಪಡಿಸುವ ನೀತಿಯ ಫಲಗಳು

ಪೋಲೆಂಡಿಗೆ ರಕ್ಷಣೆಯ ಭರವಸೆ ನೀಡುವುದು ಮತ್ತು ಅದರ ಮೂಲಕ ಯುದ್ಧಕ್ಕೆ ಕಾರಣವಾದುದು ಛೇಂಬರ್‌ಲೀನನ ತಪ್ಪು ಲೆಕ್ಕಾಚಾರದಿಂದಾಗಿ. ಹಿಟ್ಲರನ ಆಸೆಯನ್ನು ಈಡೇರಿಸಲು ಛೇಂಬರ್‌ಲೀನ್ ಅವನನ್ನು ಮೂರು ಬಾರಿ ಭೇಟಿ ಮಾಡಬೇಕಾಗಿರಲಿಲ್ಲ. ಜರ್ಮನಿಗೆ ಶರಣಾಗಲು ಬ್ರಿಟನ್ ಮತ್ತು ಫ್ರಾನ್ಸ್ ಅಷ್ಟು ಬಲಹೀನವಾಗಿದ್ದುವೆ? ಎಂಬುದು ಮುಖ್ಯ ಪ್ರಶ್ನೆ. ಇದೇ ಯುರೋಪಿನ ರಾಜನೀತಿ ನಿಪುಣರನ್ನು ಕಾಡುತ್ತಿದ್ದ ಪ್ರಶ್ನೆ.

## 118.5 ಫ್ರೆಂಚರ ತೃಪ್ತಿಪಡಿಸುವ ನೀತಿ

ಪ್ರಥಮ ಮಹಾಯುದ್ಧದ ನಂತರ ಜರ್ಮನಿಯ ಪುನಶ್ಚೇತನವನ್ನು ತಡೆಗಟ್ಟುವಲ್ಲಿ ಫ್ರಾನ್ಸ್ ಹೆಚ್ಚಿನ ಕಾಳಜಿ ವಹಿಸಿತು. ಇದರಿಂದಾಗಿ ಫ್ರಾನ್ಸ್ ಲೀಗಿನ ಹೊರಗೆ ಹಾಗೂ ಒಳಗೆ ಭದ್ರತೆಯನ್ನು

ಅರಸುವಂತಾಯಿತು. ಆದರೆ 1923 ರ ರೂರ್ ಆಕ್ರಮಣ ಮಾತ್ರ ವಿಫಲ ಹೊಂದಿತು. ಪೋಯಿನ್‌ಕೇರ್‌ನ ನೀತಿಯಿಂದ ಹಿಂದೆ ಸರಿದುದರಿಂದಾಗಿ ಬ್ರಿಟನ್‌ನೊಂದಿಗಿನ ಸಹಭಾಗಿತ್ವ, ಲೋಕಾರ್ನೋ ಒಪ್ಪಂದ ಲೀಗಿಗೆ ಜರ್ಮನಿಯ ಪ್ರವೇಶ ಮತ್ತು ಕೆಲ್ಲೋಗ್-ಬ್ರಿಯಾಂಡ್ ಒಪ್ಪಂದ ಸಾಧ್ಯವಾಯಿತು. ಲೋಕಾರ್ನೋದ ಉತ್ಸಾಹ ಭದ್ರತೆಯ ಸಾಧ್ಯತೆಯನ್ನು ಹೆಚ್ಚಿಸಿತು. ಫ್ರೆಂಚ್ ಸರಕಾರ ಕಡ್ಡಾಯ ಸೇನಾಸೇವಾ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಿತು.

ಪ್ರಥಮ ಮಹಾಯುದ್ಧದಿಂದುಂಟಾದ ನಷ್ಟದ ಪರಿಣಾಮವಾಗಿ ವರ್ಸೈಲ್ಸ್‌ನಂತರದ ಫ್ರಾನ್ಸಿನ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. 1929 ಮತ್ತು 1936 ರ ಅವಧಿಯಲ್ಲಿ ಆರ್ಥಿಕ ಭದ್ರತೆಯನ್ನು ಸಾಧಿಸಲಾರದ ಫ್ರಾನ್ಸ್‌ನಲ್ಲಿ 20 ಸಚಿವ ಸಂಪುಟಗಳು ರಚನೆಗೊಂಡವು. ಆದರೆ ವರ್ಸೈಲ್ಸ್ ನಂತರದ ಅವಧಿಯಲ್ಲಿ 1933 ರವರೆಗೆ ಯುರೋಪಿನ ವ್ಯವಹಾರಗಳ ಮೇಲೆ ನಿಯಂತ್ರಣ ಸಾಧಿಸಿತು. ಆದರೆ ಯುದ್ಧದ ಹಿಂಸೆಗಳು ಪುನರಾವರ್ತನೆಗೊಳ್ಳುವ ಭಯದಿಂದ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಯಿತು. ವಿದೇಶಾಂಗ ನೀತಿ ಹಿಟ್ಲರನ ವಿರುದ್ಧ ಮುಸ್ಸೋಲಿನಿಯನ್ನು ಒಲಿಸಿಕೊಳ್ಳುವುದರತ್ತ ಕೇಂದ್ರೀಕೃತವಾಯಿತು. ಇಟಲಿಯ ವಿರುದ್ಧದ ಆರ್ಥಿಕ ದಿಗ್ಬಂಧನಗಳು 'ಸಾಮೂಹಿಕ ಭದ್ರತೆ' ಯನ್ನು ಬಲಪಡಿಸಿದವು. ಆದರೆ ಫ್ರೆಂಚ್ ಸಚಿವ ಲ್ಯಾವಲ್‌ರಂತಹ ಫ್ಯಾಸಿಸ್ಟ್‌ಪರಶಕ್ತಿಗಳು ಮುಸ್ಸೋಲಿನಿ ಅಬಿಸ್ಸೀನಿಯಾದಲ್ಲಿ ಸ್ವತಂತ್ರವಾಗಿ ವ್ಯವಹರಿಸುವುದಕ್ಕೆ ಅನುವು ಮಾಡಿಕೊಟ್ಟವು. ಏಕಕಾಲದಲ್ಲಿ ಇಟಲಿಯನ್ನೂ, ಲೀಗನ್ನೂ ಸಂತುಷ್ಟಗೊಳಿಸಲು ಫ್ರಾನ್ಸ್ ಪ್ರಯತ್ನಿಸುತ್ತಿತ್ತು. ಇದರಿಂದಾಗಿ ಪುಟ್ಟ ದೇಶಗಳು ಫ್ರಾನ್ಸ್‌ನ ಮೇಲಿಟ್ಟಿದ್ದ ನಂಬಿಕೆಯನ್ನು ಕಳೆದುಕೊಂಡವು. ಮುಸ್ಸೋಲಿನಿ ಹಿಟ್ಲರ್‌ನೊಂದಿಗೆ ಪ್ರಯಾಣ ಬೆಳೆಸಿದನು.

ಹಿಟ್ಲರನ ಏಳಿಗೆಯು ಮುಸ್ಸೋಲಿನಿಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರಬೇಕೆಂಬ ಫ್ರೆಂಚ್ ಆಸೆಯನ್ನು ಹೆಚ್ಚಿಸಿತು. 1935ರ ಮಾರ್ಚ್ 16 ರಂದು ಹಿಟ್ಲರ್ ಕಡ್ಡಾಯ ಸೇನಾಸೇವಾನಿಯಮವನ್ನು ಮತ್ತೆ ಜಾರಿಗೆ ತಂದಾಗ ಫ್ರಾನ್ಸ್ ಆ ಅವಧಿಯನ್ನು ತನ್ನ ದೇಶದಲ್ಲಿ ಎರಡು ವರ್ಷಗಳಿಗೆ ಏರಿಸಿ ರಷ್ಯಾದೊಂದಿಗೆ ಪರಸ್ಪರ ಸಹಾಯದ ಒಪ್ಪಂದವನ್ನು ಏರ್ಪಡಿಸಿಕೊಂಡಿತು. ಜರ್ಮನಿಯ ಸೇನಾ ಬಲ ಪುನಶ್ಚೇತನಗೊಳ್ಳುವುದನ್ನು ತಪ್ಪಿಸಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಜರ್ಮನಿ ರೈನ್‌ಲ್ಯಾಂಡನ್ನು ನಿಶ್ಶಸ್ತ್ರೀಕರಣಗೊಳಿಸಿದಾಗ ಇಂಗ್ಲೆಂಡ್‌ನ ನೆರವಿಲ್ಲದೆ ಫ್ರಾನ್ಸ್ ವಿಷಯವನ್ನು ಪ್ರಸ್ತಾಪಿಸಲು ಬಯಸಲಿಲ್ಲ. ಹೀಗಾಗಿ ಹಿಟ್ಲರನ ಪ್ರಗತಿಯನ್ನು ತಡೆಹಿಡಿಯುವ ಶಾಶ್ವತ ಅವಕಾಶವನ್ನು ಫ್ರಾನ್ಸ್ ಕಳೆದುಕೊಂಡಿತು. ಕೊನೆಗೆ ಆಸ್ಟ್ರಿಯಾ ಬಲಿಯಾಗಿ, ಮ್ಯೂನಿಚ್ ದುರಂತ ಸಂಭವಿಸಿದಾಗ ಫ್ರೆಂಚ್ ಭದ್ರತೆಗೆ ಭಾರೀ ಹೊಡೆತ ಬಿದ್ದಿತು. ಸ್ಪೈನ್‌ನಲ್ಲಿ ಜನರಲ್ ಫ್ರ್ಯಾಂಕೋನ ವಿಜಯದಿಂದಾಗಿ ಫ್ರೆಂಚ್ ಗಡಿಯಲ್ಲಿ ಮೂರನೇ ಫ್ಯಾಸಿಸ್ಟ್ ದೇಶ ಉದಯಿಸಿದಂತಾಯಿತು. ಮತ್ತೊಂದೆಡೆ ಕಮ್ಯೂನಿಸಮ್ ಬಗೆಗಿನ ಭಯ ರಷ್ಯಾದ ನೆರವಿನ ಸಲಹೆಯನ್ನು ತಿರಸ್ಕರಿಸುವಂತೆ ಮಾಡಿತು. ಮ್ಯೂನಿಚ್ ಸಮ್ಮೇಳನದಲ್ಲಿ ರಷ್ಯಾವನ್ನು ಹೊರಗಿಟ್ಟುದುದಲ್ಲದೆ, ಡಲಡಿಯರ್ ಛೇಂಬರ್‌ಲೀನ್‌ನೊಂದಿಗೆ ಸೇರಿ ಸುದತ್ತನ್‌ಲ್ಯಾಂಡನ್ನು ಹಿಟ್ಲರ್‌ನಿಗೆ ಒಪ್ಪಿಸಿದನು. ಮಿತ್ರರಾಷ್ಟ್ರಗಳು ಫ್ಯಾಸಿಸ್ಟ್ ದೇಶಗಳ ಬೆಳವಣಿಗೆಯನ್ನು ಹತ್ತಿಕ್ಕಲು ವಿಫಲವಾದವು. ಫ್ರಾನ್ಸ್‌ಗಂತೂ ಮ್ಯೂನಿಚ್ ಒಂದು ದುರಂತವೇ ಸರಿ. ಜರ್ಮನ್ ಸೈನ್ಯ ಹೆಚ್ಚು ಶಸ್ತ್ರ ಸಜ್ಜಿತಗೊಂಡುದಲ್ಲದೆ, ಸಂಖ್ಯೆಯಲ್ಲೂ ಬಲಿಷ್ಠವಾಗಿತ್ತು. ಮ್ಯೂನಿಚ್ ದ್ರೋಹದಿಂದಾಗಿ ಜೆಕೋಸ್ಲೊವಾಕಿಯಾ ತೋಳದ ಬಾಯಿಯಲ್ಲಿ ಸಿಕ್ಕಿಹಾಕಿಕೊಂಡ ಆಡಿನ ಮರಿಯಂತಾಯಿತು. ಫ್ರೆಂಚ್ ಪ್ರತಿಷ್ಠೆಗೆ ಧಕ್ಕೆಯುಂಟಾಯಿತು. ರಷ್ಯಾ ಮುಂದಿನ ಹೋರಾಟದ ಸಮಯದಲ್ಲಿ ತನ್ನ ನೀತಿಯನ್ನು ಬದಲಾಯಿಸಬೇಕಾಯಿತು.

## 118.6 ಫ್ರಾನ್ಸ್‌ನ ವಿದೇಶಾಂಗ ನೀತಿ

ಪ್ರಥಮ ಮಹಾಯುದ್ಧ ಮುಗಿಯುತ್ತಿದ್ದಂತೆಯೇ ಬ್ರಿಟಿಷರು ಎಂದಿನ ಖಂಡಾಂತರ ಗಂಡಾಂತರಗಳನ್ನು ಕಡೆಗಣಿಸುವ ನಿಲುವಿಗೆ ಹಿಂತಿರುಗಿದರು. ಬ್ರಿಟಿಷ್ ಸರಕಾರದ ಬದಲಾದ

ಧೋರಣೆ 1919 ರ ಕೊನೆಯಲ್ಲಿ ಕೈಗೊಂಡ ಕ್ರಮದಿಂದ ವೇದ್ಯವಾಯಿತು. ಪ್ಯಾರಿಸ್‌ನಲ್ಲಿ ನಾಲ್ಕು ಮಂದಿಯ ಮಂಡಳಿ ಸಭೆ ಸೇರಿದಾಗ ಜರ್ಮನ್ ರ್ಹೈನ್‌ಲ್ಯಾಂಡನ್ನು ಬಿಟ್ಟುಕೊಡಬೇಕೆಂಬ ಫ್ರೆಂಚರ ಬೇಡಿಕೆಯನ್ನು ಕೈಬಿಡುವಂತೆ ವುಡ್ರೋವಿಲ್ಸನ್ ಕ್ಲೆಮೆಸ್ಸಿಯೋನನ್ನೂ ಒತ್ತಾಯಿಸಿದನು. ಫ್ರಾನ್ಸ್ ಈ ಬೇಡಿಕೆಯನ್ನು ಕೈಬಿಡಲಾಗಿ ಬ್ರಿಟನ್ ಮತ್ತು ಅಮೆರಿಕಾ ಜರ್ಮನರ ಆಕ್ರಮಣದ ವಿರುದ್ಧ ಫ್ರಾನ್ಸ್‌ಗೆ ರಕ್ಷಣೆಯ ಭರವಸೆ ನೀಡಿದವು. ಅಮೆರಿಕಾದ ಸೆನೆಟ್ ವರ್ಸೈಲ್ಸ್ ಒಪ್ಪಂದಕ್ಕೆ ಅನುಮೋದನೆ ನೀಡದಿದ್ದಾಗ ಈ ಭರವಸೆಯನ್ನೂ ಉಲ್ಲಂಘಿಸಿದಂತಾಯಿತು. ಬ್ರಿಟಿಷ್ ಸರಕಾರವೂ ಅಮೆರಿಕಾವನ್ನೇ ಅನುಸರಿಸಿತು. ಮುಂದಿನ ದಶಕ ಪೂರ್ತಿ ಬ್ರಿಟನ್ ಮತ್ತು ಫ್ರಾನ್ಸ್ ನಡುವಣ ಸಂಬಂಧದ ಮೇಲೆ ಕರಾಳ ಛಾಯೆ ಮೂಡಿತು.

ಆರ್ನಾಲ್ಡ್ ಟಾಯ್ನ್‌ಬೀಯವರ ಪ್ರಕಾರ "ಇದರಿಂದಾಗಿ 1904 ರ ಆಂಗ್ಲೋ-ಫ್ರೆಂಚ್ ಮಿತ್ರಕೂಟ ಮುರಿದು ಬಿದ್ದಂತಾಯಿತು. ಯಾದ್ದಾನಂತರ ಬ್ರಿಟಿಷರು ಫ್ರೆಂಚರಿಗೆ ನೀಡಿದ ಭರವಸೆಯನ್ನು ಮಾನ್ಯ ಮಾಡದಿದ್ದುದರಿಂದಾಗಿ ಆಂಗ್ಲೋ-ಫ್ರೆಂಚ್ ಸಂಬಂಧಗಳಿಗೆ ಚೇತರಿಸಿಕೊಳ್ಳಲಾಗದ ಹೊಡೆತ ಬಿದ್ದಿತು. ನಂತರ ದೂರ ಸರಿಯಲಾರಂಭಿಸಿದ ಪಾಲುದಾರರು ತಪ್ಪು ಹೆಜ್ಜೆಯನ್ನಿಡುತ್ತಲೇ ಸಾಗಿ 1940ರಲ್ಲಿ ಅಂತಿಮವಾಗಿ ಬೇರ್ಪಟ್ಟರು".

ಈ ಅಂಶಗಳು ಲೀಗಿನಲ್ಲಿ ಬ್ರಿಟನ್‌ನ ನಿಲುವನ್ನು ನಿರ್ಧರಿಸಿದವು. ಲೀಗಿನ ಆರಂಭದ ವರ್ಷಗಳಲ್ಲಿ ಬ್ರಿಟಿಷ್ ರಾಜನೀತಿ ನಿಪುಣ ಲಾರ್ಡ್ ಬಾಲ್‌ಫೋರ್ ಈ ಸಂಸ್ಥೆಯ ಉದ್ದೇಶ ಅಂತರ ರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು ಎಂದು ಸ್ಪಷ್ಟಪಡಿಸಿದನು. ಲೀಗಿನ ಒಡಂಬಡಿಕೆಯಲ್ಲಿ ಸೂಚಿಸಿರುವ ಹಾಗೆ ಆಕ್ರಮಣಕಾರಿ ರಾಜ್ಯಗಳ ವಿರುದ್ಧ ಸದಸ್ಯ ಅಥವಾ ಸದಸ್ಯೇತರ ರಾಷ್ಟ್ರಗಳ ವಿರುದ್ಧ ದಿಗ್ಬಂಧನವನ್ನು ವಿಧಿಸುವ ಸ್ಥಾನವನ್ನು ಅದಕ್ಕೆ ನೀಡಬಾರದೆಂಬುದು ಅವನ ಅಭಿಮತವಾಗಿತ್ತು.

ಭೌಗೋಳಿಕ ಮತ್ತು ಐತಿಹಾಸಿಕ ಕಾರಣಗಳಿಗಾಗಿ ಫ್ರಾನ್ಸ್ ಪ್ರತ್ಯೇಕ ಅಭಿಪ್ರಾಯವನ್ನು ಹೊಂದಿತ್ತು. ಅವರಿಗೆ ಆಕ್ರಮಣದ ವಿರುದ್ಧ ಸಾಗರದ ರಕ್ಷಣೆ ಇರಲಿಲ್ಲ. ಅರ್ಧ ಶತಮಾನದಲ್ಲಿ ಎರಡು ಬಾರಿ ಜರ್ಮನರು ಅವರ ನೆಲದಲ್ಲಿದ್ದರು. ಅವರ ಇತ್ತೀಚಿನ ವಿಜಯವು ವಿಶ್ವದ ನೆರವಿನಿಂದ ಪಡೆದಂತಾಗಿತ್ತು. ಜನಸಂಖ್ಯೆಯೂ ಜರ್ಮನರಿಗಿಂತ 2/3 ಭಾಗದಷ್ಟಿತ್ತು. ಬೇರೆ ರಾಷ್ಟ್ರಗಳಿಗೆ ಸಮನಾಗಿ ರಕ್ಷಣಾ ಬಲದ ಮೂಲವನ್ನೂ ಹೆಚ್ಚಿಸಿಕೊಳ್ಳಬೇಕಾಗಿತ್ತು. ರ್ಹೈನ್‌ಲ್ಯಾಂಡ್ ಭರವಸೆಯ ಮೂಲಕ ಅಮೆರಿಕಾ ಮತ್ತು ಬ್ರಿಟನ್ ಆಸೆಯನ್ನು ಚಿಗುರಿಸಿದ್ದವು. ಆದರೆ ಚಿಗುರು ಹಾಗೆಯೇ ಒಣಗಿದ ಸಂದರ್ಭದಲ್ಲಿ ಲೀಗ್‌ಕೂಡ ಸಮರ್ಥ ಸಂಸ್ಥೆಯಲ್ಲವೆನಿಸಿತು. ಲೀಗಿನ ಒಡಂಬಡಿಕೆಯನ್ನು ಓದಿದಾಗ ಅದು ಬ್ರಿಟಿಷ್ ಹಿತಾಸಕ್ತಿಗೆ ವ್ಯತಿರಿಕ್ತವಾಗಿತ್ತು.

ಲೀಗಿನ ಆರಂಭದ ವರ್ಷಗಳಲ್ಲಿ ಅದನ್ನು ಬಲಪಡಿಸಲು ಫ್ರಾನ್ಸ್ ಎರಡು ಯೋಜನೆಗಳನ್ನು ಮುಂದಿಟ್ಟಿತು. ಮೊದಲನೆಯದು 1923 ರ ಪರಸ್ಪರ ಸಹಾಯದ ಒಪ್ಪಂದ. ಇದರ ಪ್ರಕಾರ ಯಾವುದಾದರೂ ಒಂದು ಸದಸ್ಯ ರಾಜ್ಯಕ್ಕೆ ಆಕ್ರಮಣದ ಬೆದರಿಕೆ ಇದ್ದಾಗ ಉಳಿದ ಸದಸ್ಯ ರಾಜ್ಯಗಳು ನೆರವಿಗೆ ಮುಂದಾಗಬೇಕಾಗಿತ್ತು. ಎರಡನೆಯದು 1924 ರ ಜಿನೇವಾ ಒಪ್ಪಂದ. ಇದು ಎಲ್ಲಾ ಅಂತರರಾಷ್ಟ್ರೀಯ ವಿವಾದಗಳನ್ನು ಅಂತರರಾಷ್ಟ್ರೀಯ ನ್ಯಾಯಾಲಯ ಅಥವಾ ಭದ್ರತಾ ಸಮಿತಿಗೆ ಒಪ್ಪಿಸಲು ಅವಕಾಶ ಕಲ್ಪಿಸಿತ್ತು. ಹಾಗೆ ಮಾಡಲು ನಿರಾಕರಿಸಿದವರನ್ನೇ ಆಕ್ರಮಣಕಾರಿಗಳೆಂದು ಪರಿಗಣಿಸುವಂತಿತ್ತು.

ಲೀಗಿನ ಬಹುತೇಕ ಸದಸ್ಯ ರಾಷ್ಟ್ರಗಳು ಈ ಯೋಜನೆಗಳನ್ನು ಬೆಂಬಲಿಸಿದರೂ ಬ್ರಿಟನ್ ಮತ್ತು ಆಶ್ರಿತ ದೇಶಗಳ ವಿರೋಧದಿಂದಾಗಿ ವಿಫಲಗೊಂಡವು. ಪೂರ್ವ ಯುರೋಪಿನಲ್ಲಿ ಪ್ರಮುಖ ಆಸಕ್ತಿ ಇಲ್ಲದಿದ್ದುದೇ ಬ್ರಿಟನ್‌ನ ವಿರೋಧಕ್ಕೆ ಕಾರಣವಾಗಿತ್ತು. ಸರ್ ಆಸ್ಟೆನ್ ಛೇಂಬರ್‌ಲೀನ್ ಇಂತಹ ಯೋಜನೆಗಳು ಬಹುಮಟ್ಟಿಗೆ ತಾರ್ಕಿಕವಾಗಿದ್ದವು ಎಂದು ಲೀಗಿನ ಸಾಮಾನ್ಯ ಸಭೆಯಲ್ಲಿ ಹೇಳಿದನು. ತಾರ್ಕಿಕ ರಾಜಕಾರಣವನ್ನು ಬ್ರಿಟನ್ ಯಾವಾಗಲೂ ನಂಬಲಿಲ್ಲ.

## 118.7 ಭದ್ರತೆಯನ್ನರಸಿದ ಫ್ರಾನ್ಸ್

ಲೀಗನ್ನು ಸುಧಾರಿಸುವ ಪ್ರಯತ್ನದಲ್ಲಿ ಭದ್ರತೆಯನ್ನು ಸಾಧಿಸಲು ನೆರವಾಗುವ ಬೇರೆ ನೀತಿಯನ್ನು ಅನುಸರಿಸಿತು. ಒಂದು ಕಾಲದಲ್ಲಿ ಲೀಗಿನ ಹೊರಗೂ ಸೇನಾ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಮಗ್ನವಾಯಿತು. ಉದಾಹರಣೆಗೆ 1920ರಲ್ಲಿ ಬೆಲ್ಜಿಯಂನೊಂದಿಗೆ ಒಂದು ರಕ್ಷಣಾ ಒಪ್ಪಂದವನ್ನು ಏರ್ಪಡಿಸಿಕೊಂಡಿತು. ಬೆಲ್ಜಿಯಮ್‌ನ ಮೂಲಕ ಜರ್ಮನಿ ಆಕ್ರಮಣವನ್ನೆಸಗುವ ಸಾಧ್ಯತೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಚರ್ಚಿಸಲಾಯಿತು. ಆದರೆ ಇಷ್ಟೇ ಸಾಕಾಗುತ್ತಿರಲಿಲ್ಲ. ತಾನು ಎರಡು ರಂಗಗಳಲ್ಲಿ ಯುದ್ಧ ಮಾಡಬೇಕಾಗಬಹುದೆಂದು ಜರ್ಮನಿಗೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಅದಕ್ಕಾಗಿ ಫ್ರಾನ್ಸ್ ಪೂರ್ವ ಯುರೋಪಿನಲ್ಲಿ ಸ್ನೇಹ ರಾಷ್ಟ್ರಗಳನ್ನು ಪಡೆಯಬೇಕಾಗಿತ್ತು.

ಆದುದರಿಂದ ಫ್ರಾನ್ಸ್ ಪೋಲೆಂಡಿನ ಕಡೆ ತಿರುಗಿತು. ಪೋಲೆಂಡ್ ಪೂರ್ವದಲ್ಲಿ ಬಲಿಷ್ಠ ಸೇನಾರಾಜ್ಯವಾಗಿದ್ದುದಲ್ಲದೆ ಜರ್ಮನಿಯೊಂದಿಗೆ ಸ್ನೇಹದಿಂದಿರಲು ಸಾಧ್ಯವಿರಲಿಲ್ಲ. ಪೋಲೆಂಡಿನ ಕೃತಜ್ಞತೆಯನ್ನು ಸಂಪಾದಿಸಲು 1920ರಲ್ಲಿ ಅವಕಾಶವಿತ್ತು. ಆಗ ಪೋಲೆಂಡ್ ರಷ್ಯಾದೊಂದಿಗೆ ಯುದ್ಧದಲ್ಲಿ ತೊಡಗಿತ್ತು. ಯುಕ್ರೇನಿಯಾವನ್ನು ವಶಪಡಿಸಿಕೊಳ್ಳುವ ಪೋಲೆಂಡಿನ ಪ್ರಯತ್ನವನ್ನು ರಷ್ಯಾ ವಿಫಲಗೊಳಿಸಿತ್ತು. ಆ ಸಂದರ್ಭದಲ್ಲಿ ಫ್ರಾನ್ಸ್ ವಾರ್ಸಾವನ್ನು ರಕ್ಷಿಸಿಕೊಳ್ಳಲು ನೆರವು ನೀಡಿತ್ತು. ಪೋಲೆಂಡ್ ಕಳೆದುಕೊಂಡಿದ್ದ ಕೆಲವು ಪ್ರದೇಶಗಳನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾಗಿತ್ತು. ಈ ಸಹಕಾರ 1921 ರಲ್ಲಿ ಒಂದು ಒಪ್ಪಂದವನ್ನು ಏರ್ಪಡಿಸುವುದಕ್ಕೆ ನೆರವಾಯಿತು. ಉಭಯ ದೇಶಗಳೂ ವಿದೇಶಾಂಗ ನೀತಿಯ ಬಗ್ಗೆ ಪರಸ್ಪರ ಸಮಾಲೋಚಿಸಲು ಒಪ್ಪಿಕೊಂಡವು. 1924ರಲ್ಲಿ ಜೆಕೋಸ್ಲೊವಾಕಿಯಾದೊಂದಿಗೆ ಸೇನಾ ಒಪ್ಪಂದವನ್ನು ಏರ್ಪಡಿಸಿಕೊಳ್ಳಲಾಯಿತು. ಬೊಹಿಮಿಯಾದಲ್ಲಿ ರಕ್ಷಣಾ ಗೋಡೆಯನ್ನು ನಿರ್ಮಿಸಲು ಫ್ರೆಂಚ್ ಇಂಜಿನಿಯರ್‌ಗಳನ್ನು ಕಳುಹಿಸಿಕೊಡಲಾಯಿತು. ಆದರೆ ಪೋಲೆಂಡ್ ಅದಾಗಲೇ ರುಮೇನಿಯಾದೊಂದಿಗೆ ಒಪ್ಪಂದದಲ್ಲಿ ಭಾಗಿಯಾಗಿತ್ತು. ಜೆಕೋಸ್ಲೊವಾಕಿಯಾ, ರುಮೇನಿಯಾ ಮತ್ತು ಪೋಲೆಂಡ್ ಸೇರಿ ಹಂಗೇರಿಯ ವಿರುದ್ಧ 'ಪುಟ್ಟ ಮೈತ್ರಿ' ಯನ್ನು ಏರ್ಪಡಿಸಿಕೊಂಡವು. ಫ್ರಾನ್ಸ್ ಸ್ನೇಹಿತರ ಸ್ನೇಹಿತರೊಂದಿಗೆ ಕೂಡಿ 1927 ರ ವೇಳೆಗೆ ಈ ದೇಶಗಳೊಂದಿಗೆ ಸೇನಾ ಸಂಬಂಧವನ್ನು ಬೆಳೆಸಿತು.

### *118.7.1 ಫ್ರೆಂಚರ ಮೈತ್ರಿ ನೀತಿ*

ಫ್ರೆಂಚ್ ಮೈತ್ರಿ ಪದ್ಧತಿ ಯಾವಾಗಲೂ ಬಲಿಷ್ಠವೆಂಬಂತೆ ಕಂಡುಬಂದಿತು. ಜರ್ಮನಿಯ ವಿರುದ್ಧ ಅದು ಅಗತ್ಯವೂ ಆಗಿತ್ತು. ಪೂರ್ವ ಯುರೋಪಿನಲ್ಲಿ ಭದ್ರತೆಯ ಗೋಡೆ ನಿರ್ಮಾಣವಾಗಬೇಕಿದ್ದರೆ ಆಂಗ್ಲೋ-ಫ್ರೆಂಚ್ ಸಹಕಾರ ಅಗತ್ಯವಾಗಿತ್ತು. ಆದರೆ ಫ್ರಾನ್ಸ್ ಏಕಾಂಗಿಯಾಗಿ ಮೈತ್ರಿ ನಿರ್ಮಾಣದ ಕೆಲಸಕ್ಕೆ ಕೈಹಾಕಿದಾಗ ಬ್ರಿಟನ್‌ನ ಕೋಪ ಕೆರಳಿತು. ಫ್ರೆಂಚರ ಮೈತ್ರಿ ಪದ್ಧತಿ ಲೀಗಿನ ಬಲಹೀನತೆಗೂ ಕಾರಣವಾಯಿತೆಂದು ವಾದಿಸಲಾಯಿತು. ಉದಾಹರಣೆಗೆ 1923ರಲ್ಲಿ ವಿಲ್ನಾವನ್ನು ಪಡೆಯಲು ಲಿತ್ವೇನಿಯಾದ ಮೇಲೆ ಆಕ್ರಮಣ ಮಾಡಿದಾಗ ಫ್ರಾನ್ಸ್ ಲೀಗಿನ ಮಧ್ಯಸ್ಥಿಕೆಯನ್ನು ತಡೆಯಿತು. ವಿವಾದಿತ ಪ್ರದೇಶ ತನ್ನ ಸ್ನೇಹರಾಷ್ಟ್ರಕ್ಕೆ ದೊರೆಯುವಂತೆ ನೋಡಿಕೊಂಡಿತು. ಮುಸ್ಸೋಲಿನಿ ಇದೇ ಕಾರಣದಿಂದಾಗಿ ಕಾರ್ಫು ಬಗೆಗಿನ ಗ್ರೀಸ್‌ನೊಂದಿಗಿನ ಕಲಹದ ಸಮಯದಲ್ಲಿ ಲೀಗ್ ಮಧ್ಯಪ್ರವೇಶಿಸುವುದನ್ನು ತಡೆಗಟ್ಟಿದನು. ಪೂರ್ವಯುರೋಪಿನಲ್ಲಿ ಆಸ್ಟ್ರಿಯಾ, ಹಂಗೇರಿ ಮತ್ತು ಬಲ್ಗೇರಿಯಾದ ಮೈತ್ರಿ ಸಂಪಾದಿಸಲು ಫ್ರಾನ್ಸ್‌ನೊಂದಿಗೆ ಪೈಪೋಟಿಗಿಳಿದನು. ಇದರಿಂದಾಗಿ ಆ ಪ್ರದೇಶದಲ್ಲಿ ರಾಜಕೀಯ ಗೊಂದಲ ಹೆಚ್ಚಾಯಿತು.

ಹೊಸ ಮೈತ್ರಿಯ ಶೋಧನೆಯ ಫ್ರಾನ್ಸ್‌ನ ಪ್ರಯತ್ನ ಲೀಗಿನ ಒಡಂಬಡಿಕೆಯ ಏಳನೇ ಪರಿಚ್ಛೇಧದ ವಿಫಲತೆಗೆ ಕಾರಣವಾಯಿತು. ಈ ಪರಿಚ್ಛೇಧವು ರಾಷ್ಟ್ರೀಯ ಭದ್ರತೆಗೆ ಅಗತ್ಯವಾದ

ಮಟ್ಟಕ್ಕೆ ನಿಶ್ಯಸ್ತ್ರೀಕರಣವನ್ನು ಮಿತಿಗೊಳಿಸುವುದಕ್ಕೆ ಅವಕಾಶ ಕಲ್ಪಿಸಿತ್ತು. ಪ್ರಥಮ ಮಹಾಯುದ್ಧ ಮುಂದಿನ ಹತ್ತು ವರ್ಷಗಳಲ್ಲಿ ನಿಶ್ಯಸ್ತ್ರೀಕರಣ ಸಾಧ್ಯವಾದುದು ನೌಕಾಬಲಕ್ಕೆ ಸಂಬಂಧಿಸಿದಂತೆ ಮಾತ್ರ. ಅದೂ ತೃಪ್ತಿಕರವಾಗಿರಲಿಲ್ಲ. 1921-22 ರ ವಾಷಿಂಗ್ಟನ್ ಸಮ್ಮೇಳನದ ತೀರ್ಮಾನ ಕೇವಲ ದೊಡ್ಡ ಹಡಗುಗಳಿಗೆ ಸೀಮಿತವಾಗಿತ್ತು. ಜಲಾಸ್ತ್ರ ದೋಣಿಗಳು ಮತ್ತು ಜಲಾಂತರ್ಗಾಮಿಗಳಿಗೆ ಮಿತಿ ಹೇರುವಲ್ಲಿ ಅದು ಯಶಸ್ವಿಯಾಗಲಿಲ್ಲ. ಭೂಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದಂತೆ ಸುಧೀರ್ಘ ಚರ್ಚೆ ನಡೆದರೂ ಪ್ರಯೋಜನವಾಗಲಿಲ್ಲ. ಹಿಂದಿನ ಶತ್ರುದೇಶಗಳನ್ನು ಬಿಟ್ಟರೆ ಉಳಿದೆಲ್ಲಾ ದೇಶಗಳು ಶಸ್ತ್ರೀಕರಣದಲ್ಲಿ ತೊಡಗಿದ್ದವು.

## 118.8 ಜರ್ಮನಿಯ ಬಗೆಗಿನ ಫ್ರಾನ್ಸಿನ ನೀತಿ

ಜರ್ಮನಿಯೊಂದಿಗಿನ ನೀತಿ ಪರಿಹಾರದ ಸಮಸ್ಯೆಯ ಸುತ್ತ ಕೇಂದ್ರೀಕೃತವಾಗಿತ್ತು. ಶಾಂತಿ ಸಮ್ಮೇಳನದಲ್ಲಿ ನಿರ್ಧರಿಸಿದ ಪ್ರಮಾಣದಲ್ಲಿ ಜರ್ಮನ್ನರು ಪರಿಹಾರವನ್ನು ನೀಡಬೇಕೆಂಬುದು ಫ್ರೆಂಚರ ಒತ್ತಾಯವಾಗಿತ್ತು. ಪರಿಹಾರದ ಪೂರ್ಣ ಮೊತ್ತವನ್ನು ಜರ್ಮನಿ ಪಾವತಿಸಬೇಕೆಂಬುದು ಫ್ರೆಂಚರ ನಿಲುವಾಗಿತ್ತು. ಜರ್ಮನಿ ಬಡ ದೇಶವಾಗಿಯೇ ಉಳಿಯಬೇಕೆಂಬುದು ಫ್ರೆಂಚರ ಆಸೆಯಾಗಿತ್ತು. ಆದರೆ ಇಂಗ್ಲೆಂಡಿನ ಪ್ರಧಾನಿ ಲಾಯ್ಡ್ ಜಾರ್ಜ್ ಪರಿಹಾರದ ಮೊತ್ತವನ್ನು ಇಳಿಸಲು ಶಿಫಾರಸ್ಸು ಮಾಡಿದ. ಬ್ರಿಟಿಷ್ ಪ್ರಧಾನಿ ಜರ್ಮನ್ನರು 1920ರ ಜುಲೈನಲ್ಲಿ ಸ್ಪೈನಿನಲ್ಲಿ ನಡೆದ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ಅನುಮತಿ ನೀಡಲು ಫ್ರಾನ್ಸನ್ನು ಕೇಳಿದ. ಸಮ್ಮೇಳನದಲ್ಲಿ ಭಾಗವಹಿಸಿದ ಜರ್ಮನ್ ನಿಯೋಗವು ಫ್ರೆಂಚರು ವಿಜಯದ ಮತ್ತಿನಲ್ಲಿ ಮೆರೆಯುತ್ತಿದ್ದಾರೆ ಎಂದು ದೂಷಿಸಿತು. ನಿಯೋಗದ ನಾಯಕ ರತೆನಾವ್ ಜರ್ಮನಿಯನ್ನು ಖಾಸಗೀ ಸಮ್ಮೇಳನಗಳಿಂದ ದೂರವಿಟ್ಟಾಗ ತಬ್ಬಿಬ್ಬಾದ. ಜರ್ಮನ್ ನಿಯೋಗ ರಷ್ಯಾದೊಂದಿಗೆ ರಪಲ್ಲೋ ಒಪ್ಪಂದವನ್ನೇರ್ಪಡಿಸಿಕೊಂಡಿತು. ಆ ವೇಳೆಗೆ ಜಿನೋವಾದಲ್ಲಿ ಸೇರಿದ್ದ ಅಗ್ರ ರಾಷ್ಟ್ರಗಳ ಪ್ರತಿನಿಧಿಗಳು ದಿಗ್ಭ್ರಾಂತರಾದರು. ಬ್ರಿಟಿಷ್ ಸರಕಾರ ಪರಿಹಾರದ ಮೊತ್ತವನ್ನು ಇಳಿಸುವುದಕ್ಕೆ ಆಸಕ್ತವಾಯಿತು. ಫ್ರಾನ್ಸಿನಲ್ಲಿ ಅದು ವಿರುದ್ಧ ಪರಿಣಾಮಕ್ಕೆ ಎಡೆಮಾಡಿಕೊಟ್ಟು 1923 ರ ಜನವರಿಯಲ್ಲಿ ರೂರ್‌ನ ಮೇಲೆ ಆಕ್ರಮಣ ಮಾಡುವಂತೆ ಪ್ರೇರೇಪಿಸಿತು. ಈ ಕ್ರಮದ ರುವಾರಿ ಫ್ರೆಂಚ್ ಪ್ರಧಾನಿ ರೇಮಂಡ್ ಪೋಯಿನ್‌ಕೇರ್

### *118.8.1 ಫ್ರೆಂಚರಿಂದ ರೂಹರ್‌ನ ಆಕ್ರಮಣ*

ಭದ್ರತೆಯನ್ನು ಸಾಧಿಸುವ ಮೂಲವಾಗಿ ರೂಹರ್‌ನ ಮೇಲೆ ಆಕ್ರಮಣ ಮಾಡಿದುದು ಫ್ರೆಂಚರ ಅತಿದೊಡ್ಡ ಅಪರಾಧ. ಇದು ಜರ್ಮನಿಯಲ್ಲಿ ಪ್ರಜಾಪ್ರಭುತ್ವದ ಸಾಧ್ಯತೆಯನ್ನು ಕಡಿಮೆ ಮಾಡಿ ಪ್ರತಿಗಾಮಿ ಶಕ್ತಿಗಳ ಕೈಬಲ ಪಡಿಸಿತು. ಹಣದುಬ್ಬರದ ಸಾಮಾಜಿಕ ಪರಿಣಾಮಗಳು ಮಾರಕ ಹಾಗೂ ಶಾಶ್ವತವೆನಿಸಿದವು. ರೂಹರ್‌ನ ಆಕ್ರಮಣದ ಹಿನ್ನೆಲೆಯಲ್ಲಿ ಉಂಟಾದ ರಾಜಕೀಯ ಗೊಂದಲದ ಸಮಯದಲ್ಲಿಯೇ ಹಿಟ್ಲರ್ ಅಧಿಕಾರ ಪಡೆಯುವ ಪ್ರಥಮ ಪ್ರಯತ್ನ ಮಾಡಿದನೆಂಬುದು ಕಾಕತಾಳೀಯವಷ್ಟೆ. ಆದರೆ ಆಕ್ರಮಣ ತದ್ವಿರುದ್ಧ ಪರಿಣಾಮ ಬೀರಿತು. ಕುಸಿಯುತ್ತಿದ್ದ ಜರ್ಮನಿಯ ಅರ್ಥವ್ಯವಸ್ಥೆ ಪೂರ್ಣ ಕುಸಿದಾಗ ಜರ್ಮನರು ಪರಿಹಾರದ ಮೊತ್ತವನ್ನು ಪಾವತಿಸಲಾರದ ಸ್ಥಿತಿಯನ್ನು ಮುಟ್ಟಿದರು. ಇದು ಫ್ರಾನ್ಸ್‌ನ್ನು ಒಳಗೊಂಡಂತೆ ಬೇರೆ ದೇಶಗಳ ಮೇಲೆ ಪರಿಣಾಮ ಬೀರಿತು.

ಈ ವಿಷಮ ಪರಿಸ್ಥಿತಿಯಿಂದಾಗಿ ಪಾಶ್ಚಾತ್ಯ ದೇಶಗಳು ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದವು. ಜರ್ಮನ್ ನೀತಿಯ ಬಗ್ಗೆ ಆಂಗ್ಲೋ-ಫ್ರೆಂಚ್ ಭಿನ್ನಾಭಿಪ್ರಾಯವನ್ನು ತೊಡೆದುಹಾಕಲು ಕ್ರಮ ಕೈಗೊಂಡವು. 'ಡಾವ್ಸ್ ಯೋಜನೆ' ಯ ಮೂಲಕ ಜರ್ಮನಿಯ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತ್ತು. ಇದು ಯುದ್ಧಗಳ ಅವಧಿಯ ಜರ್ಮನಿಯ ಶ್ರೇಷ್ಠ ರಾಜನೀತಿಜ್ಞ ಗುಸ್ಟಾವ್ ಸ್ಟ್ರೆಸ್‌ಮನ್‌ನನ್ನು ಹೊಸ ಪ್ರಯತ್ನಕ್ಕಿಳಿಸಿತು. ಸ್ಟ್ರೆಸ್‌ಮನ್ ಪಾಶ್ಚಾತ್ಯ ದೇಶಗಳೊಂದಿಗೆ ರಾಜಕೀಯ ಒಪ್ಪಂದಗಳನ್ನೇರ್ಪಡಿಸಿ ಅವುಗಳೊಂದಿಗೆ ವಿಶೇಷವಾಗಿ ಫ್ರಾನ್ಸ್‌ನೊಂದಿಗಿನ ಸಂಬಂಧವನ್ನು

ಉತ್ತಮಪಡಿಸಲು ಉದ್ದೇಶಿಸಿದನು. ಮಿತ್ರಕೂಟದ ಸೇನೆ ಜರ್ಮನ್ ಪ್ರದೇಶಗಳಿಂದ ಹಿಂದಕ್ಕೆ ಹೋಗುವಂತೆ ಅನುವು ಮಾಡಿಕೊಡಬೇಕೆಂದು ಲಂಡನ್ ಮತ್ತು ಪ್ಯಾರಿಸ್‌ಗೆ ತಿಳಿಸಿದನು. ಜರ್ಮನಿ ಫ್ರಾನ್ಸ್ ಮತ್ತು ಬೆಲ್ಜಿಯಂನೊಂದಿಗಿನ ಶಾಶ್ವತ ಗಡಿಯನ್ನು ಮಾನ್ಯ ಮಾಡುವುದಾಗಿಯೂ ತಿಳಿಸಿದನು. ಸ್ಟ್ರೆಸ್‌ಮನ್, ಆಸ್ಟಿನ್ ಛೇಂಬರ್‌ಲೀನ್ ಮತ್ತು ಬ್ರಿಯಾಂಡ್ ಸ್ವಿಟ್ಜರ್‌ಲ್ಯಾಂಡಿನ ಲೊಕಾರ್ನೋದಲ್ಲಿ ಮಾತುಕತೆ ನಡೆಸಿದರು. ಅನೇಕ ಒಪ್ಪಂದಗಳು, ಒಡಂಬಡಿಕೆಗಳು ಹೊರಬಂದವು. ಜರ್ಮನಿ, ಫ್ರಾನ್ಸ್ ಮತ್ತು ಬೆಲ್ಜಿಯಮ್ ತಮ್ಮ ಸಾಮಾನ್ಯ ಎಲ್ಲೆಗಳನ್ನು ಗೌರವಿಸುವುದಾಗಿ ಒಪ್ಪಿಕೊಂಡವು. ಸ್ವರಕ್ಷಣೆಯ ಉದ್ದೇಶ ಅಥವಾ ಲೀಗಿನ ಒಡಂಬಡಿಕೆಯ ಹೊರತು ಪರಸ್ಪರ ಯುದ್ಧ ಮಾಡುವುದಿಲ್ಲವೆಂದು ಒಪ್ಪಿಕೊಂಡವು. ಕಳೆದ ಆರು ವರ್ಷಗಳ ಕಾಲ ಆತಂಕದಲ್ಲಿಯೇ ಇದ್ದ ಯುರೋಪಿಗೆ ಲೊಕಾರ್ನೋ ಹೊಸ ಭರವಸೆ ಮೂಡಿಸಿತು. ಸ್ಟ್ರೆಸ್‌ಮನ್, ಛೇಂಬರ್‌ಲೀನ್ ಮತ್ತು ಬ್ರಿಯಾಂಡ್‌ರ ಭೇಟಿ ಭಾರೀ ಉತ್ಸಾಹ ತಂದಿತು. ಫ್ರಾಂಕೋ-ಜರ್ಮನ್ ಸಂಬಂಧ ಹೊಸ ತಿರುವು ಪಡೆಯಿತು. ಲೀಗ್ ಚೇತರಿಸಿಕೊಂಡಿತು. ಸಾಮೂಹಿಕ ಭದ್ರತೆಯ ತತ್ವ ಮತ್ತೆ ಚಿಗುರಿತು. ಜರ್ಮನಿಯ ವಿರುದ್ಧದ ನಿಯಂತ್ರಣಗಳೂ ಸಡಿಲಗೊಂಡವು. 1929ರ ಯಂಗ್ ಯೋಜನೆಯ ಪ್ರಕಾರ ಮಿತ್ರಕೂಟದ ಸೈನ್ಯ ಜರ್ಮನ್ ಪ್ರದೇಶಗಳಿಂದ ಕಾಲ್ತೆಗೆಯಿತು. ಪರಿಹಾರದ ಮೊತ್ತ ಕಡಿಮೆಯಾಯಿತು. ಯುರೋಪಿನಲ್ಲಿ ಸಂಕ್ಷೋಭೆ ಕಡಿಮೆಯಾಯಿತು.

### *118.8.2 ಬ್ರಿಯಾಂಡ್-ಕೆಲ್ಲೋಗ್ ಒಪ್ಪಂದ (1928)*

ಯುರೋಪಿನಲ್ಲಿ ಸಂಕ್ಷೋಭೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನಡೆದ ಇನ್ನೊಂದು ಪ್ರಯತ್ನವೇ 1928ರ ಕೆಲ್ಲೋಗ್ ಬ್ರಿಯಾಂಡ್ ಒಪ್ಪಂದ. ಫ್ರೆಂಚ್ ಸಚಿವ ಬ್ರಿಯಾಂಡ್‌ನ ಸಲಹೆ ಮೇಲೆ ಅಮೆರಿಕಾದ ರಾಜ್ಯಗಳ ಕಾರ್ಯದರ್ಶಿ ಕೆಲ್ಲೋಗನ ಆತಿಥ್ಯದಲ್ಲಿ ನಡೆದ ಒಪ್ಪಂದವದು. ರಾಷ್ಟ್ರೀಯ ನೀತಿಯ ಸಾಧನವಾಗಿ ಯುದ್ಧವನ್ನು ತ್ಯಜಿಸಲು ಸಹಿಹಾಕಿದ ಇಬ್ಬರೂ ಒಪ್ಪಿಕೊಂಡರು. ಲೋಕಾರ್ನೋ ಮತ್ತಿತರ ಒಪ್ಪಂದಗಳೂ ಚಾಲ್ತಿಯಲ್ಲಿದ್ದವು. ಲೀಗಿನ ಆದೇಶಗಳನ್ನು ಕಾರ್ಯಗತಗೊಳಿಸುವ ಯಂತ್ರವೂ ಇತ್ತು. ಆದರೆ ಗಂಭೀರ ಪ್ರಕರಣಗಳ ಸಮಯದಲ್ಲಿ ಆಕ್ರಮಣಕಾರನ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಲೊಕಾರ್ನೋ ಕ್ಯಾಬಲ್ ಲೀಗಿನಿಂದ ಹೊರಗೆ ಇದ್ದಂತಹ ರಾಷ್ಟ್ರಗಳ ಒಂದು ಸಮೂಹ. ಅದರಿಂದಲೂ ತಪ್ಪುಗಳನ್ನು ಸರಿಪಡಿಸಿ ಲೀಗಿನ ಪ್ರತಿಷ್ಠೆಯನ್ನು ಉಳಿಸಲಾಗಲಿಲ್ಲ.

ಎರಡನೆಯದಾಗಿ ಹೊಸ ಒಪ್ಪಂದಗಳು ನೀಡಿದ ಭದ್ರತೆಯ ಅವಕಾಶ ಏಕಪಕ್ಷೀಯವಾಗಿತ್ತು. ಪೂರ್ವದ ಲೊಕಾರ್ನೋ ನಂತರ ಒಪ್ಪಂದಗಳು ಲೊಕಾರ್ನೋ ಒಪ್ಪಂದವನ್ನು ಸಮರ್ಥಿಸದಿದ್ದರೆ ಭದ್ರತೆಯ ವ್ಯವಸ್ಥೆ ಪೂರ್ಣವಾಗುವಂತಿರಲಿಲ್ಲ. ಫ್ರೆಂಚರು ಆ ನಿಟ್ಟಿನಲ್ಲಿ ಪ್ರಯತ್ನ ಪಟ್ಟರೂ ಪ್ರಯೋಜನವಾಗಲಿಲ್ಲ. ಬ್ರಿಟಿಷರ ವಿರೋಧ ಅದಕ್ಕೆ ಮುಖ್ಯ ಕಾರಣ. ಕೊನೆಯದಾಗಿ ಲೊಕಾರ್ನೋ ಒಪ್ಪಂದ ಭಾಗಿಯಾದವರ ನಡುವೆ ಶಾಶ್ವತ ಸ್ನೇಹ ಮತ್ತು ಸಹಕಾರವನ್ನು ಅಂಕುರಿಸಲಿಲ್ಲ. ಜರ್ಮನಿ 1926 ಬರ್ಲಿನ್ ಒಪ್ಪಂದದಂತಹ ಹೊಸ ಒಪ್ಪಂದಗಳನ್ನು ರಷ್ಯಾದೊಂದಿಗೆ ಏರ್ಪಡಿಸಿಕೊಂಡಿತು. ಇಟಲಿ ಡ್ಯಾನ್ಯೂಬಿನ ಪ್ರದೇಶದಲ್ಲಿ ಫ್ರಾನ್ಸ್‌ನೊಂದಿಗೆ ಹೊಸ ಮತ್ತು ಅಪಾಯಕಾರಿ ಸಂಘರ್ಷವನ್ನು ಆರಂಭಿಸಿತು. ಬ್ರಿಟನ್ ಅನುಮಾನಾಸ್ಪದವಾಗಿ ವರ್ತಿಸುವುದರೊಂದಿಗೆ ಸಾಮಾನ್ಯವಾಗಿ ಫ್ರೆಂಚರ ಮುಖ್ಯ ನೀತಿಯನ್ನು ವಿರೋಧಿಸುವ ಪ್ರವೃತ್ತಿಯನ್ನು ಮುಂದುವರಿಸಿತು.

## 118.9 ಮಾದರಿ ಪ್ರಶ್ನೆಗಳು

1. ಎರಡು ಮಹಾಯುದ್ಧಗಳ ನಡುವಣ ಬ್ರಿಟಿಷ್ ವಿದೇಶಾಂಗ ನೀತಿಯ ಹಿಂದಿದ್ದ ತರ್ಕವೇನು?
2. ಗ್ರೇಟ್‌ಬ್ರಿಟನ್ ಅನುಸರಿಸಿದ 'ತೃಪ್ತಿಪಡಿಸುವ ನೀತಿ' ಫಲಪ್ರದವಾಯಿತೆ? ನಿಮ್ಮ ಉತ್ತರವನ್ನು ಸಕಾರಣಗಳೊಂದಿಗೆ ವಿವರಿಸಿ.

3. ಎರಡು ಮಹಾಯುದ್ಧಗಳ ನಡುವಣ ಅವಧಿಯ ಫ್ರೆಂಚರ ಮೈತ್ರಿ ಪದ್ಧತಿಗೆ ಕಾರಣಗಳನ್ನು ವಿವರಿಸಿ ಮತ್ತು ಅದರ ಪರಿಣಾಮಗಳನ್ನು ಗುರುತಿಸಿ.

4. ಫ್ರಾನ್ಸ್‌ನ ಜರ್ಮನ್ ನೀತಿಯನ್ನೂ, ಅದರ ಪರಿಣಾಮಗಳನ್ನು ವಿವರಿಸಿ.

## 118.10 ಅಧ್ಯಯನಕ್ಕಾಗಿ ಗ್ರಂಥಗಳು


1) AJP Taylor : English History - 1914-1945 (1965)

2) D.C. Somervell : British Politics Since 1900 (1950)

3) M.E. Earle (ed) : Modern France (1951)

4) Martin Gilbert : The Roots of Appeasement (1966)

5) C.A. Micaud : The French Right and Nazi Germany (1934)

6) G. Salvemini : Prelude to Wolrd War II (1935)

7) ಆರ್.ಜಿ. ಶಿವಣ್ಣ : ಆಧುನಿಕ ಯುರೋಪಿನ ಇತಿಹಾಸ

8) ರಾಮಲಿಂಗಪ್ಪ : ಯುರೋಪಿನ ಇತಿಹಾಸ



ಮೂಲ : ಡಾ. ಸುಂದರರಾಜನ್

ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ

# ಟಿಪ್ಪಣಿಗಳು

## ಘಟಕ - 119

# ಎರಡು ಮಹಾಯುದ್ಧಗಳ ನಡುವಣ ಅವಧಿಯ ಸ್ಪೈನ್

*ರಚನಾಕ್ರಮ*


**119.0** ಉದ್ದೇಶಗಳು

**119.1** ಪೀಠಿಕೆ

**119.2** ಸ್ಪೈನಿನ ಪ್ರಾರಂಭಿಕ ಇತಿಹಾಸ

- **119.2.1** ಸ್ಪೈನಿನಲ್ಲಿ ರಾಜಪ್ರಭುತ್ವ
- **119.2.2** ಸೈನ್ಯದ ಹಸ್ತಕ್ಷೇಪ
- **119.2.3** ದೊರೆ ಆಲ್ಫೋನ್ಸೋನ ಅಧಿಕಾರ ಪರಿತ್ಯಾಗ

**119.3** 1931 ರ ರಾಷ್ಟ್ರೀಯ ಚುನಾವಣೆ

- **119.3.1** ಕಾರ್ಮಿಕರ ಪ್ರಜಾತಾಂತ್ರಿಕ ಗಣರಾಜ್ಯ
- **119.3.2** ವಿಭಜಿತ ಸದನ

**119.4** ಮಂದಗಾಮಿ ಸಂಪುಟ

- **119.4.1** ಕೆರಳಿದ ಗಲಭೆಗಳು

**119.5** ಅಂತರ್ಯುದ್ಧ (1936-39)

- **119.5.1** ಜನರಲ್ ಫ್ರ್ಯಾಂಕೋ
- **119.5.2** ಅಧಿಕಾರಗಳಿಸುವುದರತ್ತ ಫ್ರ್ಯಾಂಕೋ

**119.6** ಅಂತರ್ಯುದ್ಧದ ವೈಶಿಷ್ಟ್ಯ

- **119.6.1** ಮಹಾಯುದ್ಧಕ್ಕೆ ಪೀಠಿಕೆ

**119.7** ಸ್ಪೈನಿನ ಸರ್ವಾಧಿಕಾರಿಯಾಗಿ ಫ್ರ್ಯಾಂಕೋ

**119.8** ಮಾದರಿ ಪ್ರಶ್ನೆಗಳು

**119.9** ಅಧ್ಯಯನಕ್ಕಾಗಿ ಗ್ರಂಥಗಳು

## 119.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ಈ ಕೆಳಗೆ ಪಟ್ಟಿಮಾಡಿದ ಅಂಶಗಳ ಪರಿಚಯವಾಗುತ್ತದೆ :

1) ಸ್ಪೈನಿನ ಪ್ರಾರಂಭಿಕ ಇತಿಹಾಸ

2) ದೇಶ ಎದುರಿಸಿದ ಆಂತರಿಕ ತೊಂದರೆಗಳು

3) ಸ್ಪೈನಿನ ಅಂತರ್ಯುದ್ಧದ ಕಾರಣಗಳು ಮತ್ತು ವೈಶಿಷ್ಟ್ಯಗಳು

4) ಸರ್ವಾಧಿಕಾರಿಯಾಗಿ ಜನರಲ್ ಫ್ರ್ಯಾಂಕೋನ ಏಳಿಗೆ

## 119.1 ಪೀಠಿಕೆ

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸ್ಪೈನ್ ತೀರಾ ದುಃಖಕರ, ವಿವಿಧ ಚಿತ್ರದರ್ಶಕ ಸನ್ನವೇಶವನ್ನು ಎದುರಿಸಿತು. 1898 ರ ಸ್ಪೈನ್-ಅಮೇರಿಕಾ ಯುದ್ಧ ಮತ್ತು ಪ್ರಥಮ ಮಹಾಯುದ್ಧದ ಆರಂಭದ ಅವಧಿಯ ಒಂದೂವರೆ ದಶಕಗಳಲ್ಲಿ ಸ್ಪೈನ್ ಅವ್ಯವಸ್ಥೆಗಳ ಆಗರವಾಗಿತ್ತು. ಚರ್ಚ್‌ಗಳ ಮೇಲೆ ಧಾಳಿ ನಡೆಸಲಾಯಿತು. ರಾಜಕೀಯ ಹತ್ಯೆಗಳು ಸಾಮಾನ್ಯವಾಗಿದ್ದವು. ಪ್ರಥಮ ಮಹಾಯುದ್ಧ ಆರಂಭವಾದಾಗ ಸ್ಪೈನ್ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿತು. ಯಾವ ಪಕ್ಷವನ್ನು ಸೇರಬೇಕೆಂಬುದರ ಬಗ್ಗೆ ಗೊಂದಲದಲ್ಲಿತ್ತು. ರಾಜಪ್ರಭುತ್ವವಿರೋಧೀ ಹಾಗೂ ಧರ್ಮವಿರೋಧೀ ಸ್ವತಂತ್ರವಾದಿಗಳು ಮಿತ್ರಕೂಟವನ್ನು ಬೆಂಬಲಿಸಿದರೆ, ಸಂಪ್ರದಾಯವಾದೀ ಶಕ್ತಿಗಳು ಜರ್ಮನರ ಬಗ್ಗೆ ಅನುಕಂಪವನ್ನು ತೋರಿದರು.

ಆದರೆ ಯುದ್ಧಾವಧಿಯಲ್ಲಿ ಅನುಸರಿಸಿದ ತಟಸ್ಥ ನೀತಿಯಿಂದಾಗಿ ದೇಶಕ್ಕೆ ಅಪಾರ ಲಾಭವುಂಟಾಯಿತು. ದುರಾಕ್ರಮಣಕಾರಿಗಳು ಯುದ್ಧ ಸಾಮಗ್ರಿಗಳನ್ನು ತರಿಸಿಕೊಳ್ಳುವುದಕ್ಕೆ ಆಜ್ಞೆ ಮಾಡಿದರು. 1915 ಮತ್ತು 1919 ರ ಅವಧಿಯಲ್ಲಿ ಅನೇಕ ವರ್ಷಗಳ ನಂತರ ಪ್ರಥಮ ಬಾರಿಗೆ ಸ್ಪೈನ್ ಆಮದಿಗಿಂತ ರಫ್ತು ವ್ಯಾಪಾರದ ಲಾಭವನ್ನು ಅನುಭವಿಸಿತು. ಆದರೆ 1919ರ ನಂತರ ವ್ಯಾಪಾರ ಸಂಬಂಧದಲ್ಲಿ ವ್ಯತಿರಿಕ್ತ ಬೆಳವಣಿಗೆ ಕಂಡುಬಂದಿತು. ರಾಜಕೀಯವಾಗಿ ದೇಶ ಅಭದ್ರವಾಗಿತ್ತು. ಮುಂದಿನ ಐದು ವರ್ಷಗಳಲ್ಲಿ ದೇಶ ಏಳು ಸಚಿವ ಸಂಪುಟಗಳ ರಚನೆಯನ್ನು ಕಂಡಿತು. ಈ ಅರಾಜಕತೆಯ ಮೂಲವನ್ನು ನಾಲ್ಕು ಅಂಶಗಳಲ್ಲಿ ಗುರುತಿಸಲಾಗಿದೆ. (1) ಕಾರ್ಮಿಕ ಮುಷ್ಕರ (2) ಪ್ರಾದೇಶಿಕ ಪ್ರಭಾವ (3) ಸರಕಾರಿ ವ್ಯವಹಾರಗಳಲ್ಲಿ ಸೈನ್ಯದ ಹಸ್ತಕ್ಷೇಪ ಮತ್ತು (4) ಸ್ಪೈನಿನ ಮೊರಾಕ್ಕೋದಲ್ಲಿ ಅವಿರತ ಸೇನಾ ದುರಂತಗಳು. ಸ್ಪೈನಿನ ಅಂತರ್ಯುದ್ಧದಲ್ಲಿ ಇಟಲಿ, ಜರ್ಮನಿ ಮತ್ತು ರಷ್ಯಾ ಭಾಗವಹಿಸಿದುದರಿಂದ ಅಂತರರಾಷ್ಟ್ರೀಯ ಬಾಂಧವ್ಯದಲ್ಲಿ ಸ್ಥಾನ ಪಡೆದುಕೊಂಡಿದೆ.

## 119.2 ಸ್ಪೈನಿನ ಪ್ರಾರಂಭಿಕ ಇತಿಹಾಸ

ಇಪ್ಪತ್ತನೇ ಶತಮಾನದ ಎರಡೂ ಯುದ್ಧಗಳ ಅವಧಿಯಲ್ಲಿ ತಟಸ್ಥವಾಗಿದ್ದ ಕೆಲವು ಐರೋಪ್ಯ ಪ್ರದೇಶಗಳಲ್ಲಿ ಸ್ಪೈನ್ ಕೂಡ ಒಂದು. ಇದಕ್ಕೆ ಸ್ವಲ್ಪ ಮಟ್ಟಿಗೆ ಅದರ ಭೌಗೋಳಿಕ ಅಂಶವೂ ಕಾರಣವಾಗಿದ್ದಿರಬಹುದು. ಪಿರೆನೀಸ್ ಪರ್ವತ ಶ್ರೇಣಿ ಸ್ಪೈನನ್ನು ಯುರೋಪಿನಿಂದ ಪ್ರತ್ಯೇಕಿಸುವ ಗೋಡೆಯಂತಿದೆ. ಪರ್ವತ ಶ್ರೇಣಿಗಳಿಂದಾಗಿಯೇ ಹಲವು ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿದೆ. ನೆಪೋಲಿಯನ್ನನ ಕಾಲದಲ್ಲಿ ಫ್ರೆಂಚರು ಅದನ್ನಾಕ್ರಮಿಸಲು ತುಂಬಾ ಕಷ್ಟಪಟ್ಟರು. ಜೊತೆಗೆ ಅವರ ಪ್ರಯತ್ನದಲ್ಲಿ ವಿಫಲರಾದರು. ಗಿಬ್ರಾಲ್ಟರ್ ತಲುಪಲು ಹಿಟ್ಲರ್ ಸ್ಪೈನ್‌ನ ಮೂಲಕ ಹಾದು ಹೋಗಿದ್ದರೆ ಆತನಿಗೂ ಕಷ್ಟವೇ ಆಗುತ್ತಿತ್ತು.

ಮಧ್ಯಕಾಲೀನ ಯುಗಗಳಲ್ಲಿ ಕ್ಯಾಸ್ಟೈಲ್, ಆರಗಾನ್, ಗ್ರಾನಡ, ಲಿಯಾನ್‌ನಂತಹ ಕೆಲವು ಪ್ರಾಂತಗಳು ಸ್ವತಂತ್ರ ಪ್ರದೇಶಗಳಾಗಿದ್ದವು. ಇವು 400 ವರ್ಷಗಳ ಹಿಂದೆ ಏಕೀಕೃತ ಸ್ಪೈನ್‌ನಲ್ಲಿ ಒಂದಾಗಿದ್ದರೂ ಅಂತರ ಪ್ರಾಂತ ಸಂಘರ್ಷದ ಪ್ರಕರತೆ ಬಹಳವಾಗಿತ್ತು.

ಸ್ಪೈನಿನ ರಾಜ 13ನೇ ಆಲ್ಫೋನ್ಸೋ 1886ರಲ್ಲಿ ಸಿಂಹಾಸನವನ್ನೇರಿದನು. ಅವನ ರಾಜಪ್ರತಿನಿಧಿತ್ವದ ಕಾಲದಲ್ಲಿ ಸ್ಪೈನ್ ಅಮೆರಿಕಾದೊಂದಿಗೆ ಯುದ್ಧದಲ್ಲಿ ತೊಡಗಿತ್ತು. ಕ್ಯೂಬಾ ಮತ್ತು ಸ್ಪೈನಿನ ವಸಾಹತು ಸಾಮ್ರಾಜ್ಯದ ಇತರ ಕೇಂದ್ರಗಳನ್ನು ಕಳೆದುಕೊಂಡಿತು. ಇದು ಅವಮಾನಕರ ಪ್ರಸಂಗವಾದರೂ ಸ್ಪೈನಿಗೆ ಲಾಭದಾಯಕವಾಗಿತ್ತು. ಕಾರಣ, ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳಲ್ಲಿ ವಸಾಹತುಶಾಹಿ ಸಂದಿಗ್ಧತೆ ಮತ್ತು ಯುದ್ಧಗಳಿಂದ ಮುಕ್ತವಾಗಿತ್ತು. ಕೆಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲಾಯಿತು. ಆದರೆ ಸಾಕಷ್ಟು ಸಾಧಿಸಲಾಗಲಿಲ್ಲ.

### 119.2.1 *ಸ್ಪೈನಿನಲ್ಲಿ ರಾಜಪ್ರಭುತ್ವ*

ದೈವಿಕ ಹಕ್ಕಿನ ಸಿದ್ಧಾಂತದಿಂದಾಗಿ ರಾಜ ನಿರಂಕುಶನಾಗಿದ್ದನು. ದೇಶದ ಅಗತ್ಯಗಳ ಬಗ್ಗೆ ಆತನಿಗೆ ಸ್ಪಷ್ಟ ಕಲ್ಪನೆಗಳಿರಲಿಲ್ಲ. ಇತರ ಐರೋಪ್ಯ ದೇಶಗಳಿಗಿಂತ ಸ್ಪೈನ್‌ನಲ್ಲಿ ಶ್ರೀಮಂತರು ಹೆಚ್ಚಿನ ಅಧಿಕಾರವನ್ನು ಕೇಂದ್ರೀಕರಿಸಿದ್ದರು. ಶ್ರೀಮಂತ ವರ್ಗಕ್ಕೆ ಸೇರಿದ್ದ ಅಧಿಕಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಸೈನ್ಯ ಅದರ ನಿಯಂತ್ರಣದಲ್ಲಿತ್ತು. ಸ್ಪೈನ್‌ನಲ್ಲಿ ಕೋರ್ಟೆಸ್ ಅಥವಾ ಸಂಸತ್ ಎಂಬುದಿತ್ತು. ಆದರೆ ಜನರು ಅನಕ್ಷರಸ್ಥರಾಗಿದ್ದುದರಿಂದ ಪ್ರಜಾತಾಂತ್ರಿಕ ಸರಕಾರದ ಅರ್ಥ ಅವರಿಗೆ ತಿಳಿದಿರಲಿಲ್ಲ. ಸ್ಪೈನಿನ ಪ್ರಜೆಗಳು ಮೈಗಳ್ಳರಾಗಿದ್ದರು, ಕೃಷಿ ಹಿಂದುಳಿದಿತ್ತು, ಕೈಗಾರಿಕೆ ಮತ್ತು ವ್ಯಾಪಾರ ಸ್ಥಗಿತಗೊಂಡಿದ್ದವು ಮತ್ತು ಸರಕಾರಿ ಅಧಿಕಾರಿಗಳು ಲಂಚಕೋರರಾಗಿದ್ದರು. ರೋಮನ್ ಕ್ಯಾಥೋಲಿಕ್ ಚರ್ಚ್, ರಾಜಪ್ರಭುತ್ವ ಮತ್ತು ಶ್ರೀಮಂತ ವರ್ಗದ ಸ್ನೇಹ ಸಂಸ್ಥೆಯಾಗಿತ್ತು. ಚರ್ಚ್ ದೇಶದಾದ್ಯಂತ ಭಾರೀ ಪ್ರಭಾವವನ್ನು ಬೀರಿದ್ದಲ್ಲದೆ ಜೆಸುಯಿಟರು ಭಾರೀ ವ್ಯಾಪಾರ ಸಂಸ್ಥೆಗಳ ಮತ್ತು ತೋಟಗಳ ಒಡೆತನವನ್ನು ಹೊಂದಿದ್ದರು. ಸಮಾಜವಾದಿಗಳು, ಕಮ್ಯೂನಿಸ್ಟರು, ಅರಾಜಕರು ಮತ್ತು ಫ್ಯಾಸಿಸ್ಟರಂತಹ ಕ್ರಾಂತಿಕಾರಿ ಗುಂಪುಗಳು ಇಪ್ಪತ್ತನೇ ಶತಮಾನದಲ್ಲಿ ಮಾತ್ರ ಕಾಣಿಸಿಕೊಂಡರು. ಪರಸ್ಪರ ವಿರುದ್ಧ ಗುಂಪುಗಳು, ಆಸಕ್ತಿಗಳು ಮತ್ತು ಪ್ರಭಾವಗಳನ್ನು ಹೊಂದಿದ್ದ ತೀರಾ ಹಿಂದುಳಿದ ದೇಶ ಗೊಂದಲ ಮತ್ತು ಅವ್ಯವಸ್ಥೆಗಳನ್ನು ಅನುಭವಿಸದೇ ಇದ್ದಿದ್ದರೆ ಅದೊಂದು ಪವಾಡವೆಂದು ಹೇಳಬೇಕಾಗುತ್ತಿತ್ತು.

### 119.2.2 *ಸೈನ್ಯದ ಹಸ್ತಕ್ಷೇಪ*

ಅವ್ಯವಸ್ಥೆಗಳು ಸಾಕಷ್ಟಿದ್ದವು. ಆಗಾಗ್ಗೆ ಮುಷ್ಕರಗಳು, ದೊಂಬಿಗಳು ಮತ್ತು ಹತ್ಯೆಗಳು ನಡೆಯುತ್ತಿದ್ದವು. 1923 ರಲ್ಲಿ ಜನರಲ್ ಪ್ರೈಮೋ-ಡಿ-ರಿವೆರಾ ಎಂಬ ಸೈನ್ಯಾಧಿಕಾರಿ ಸೈನ್ಯದ ಬೆಂಬಲದೊಂದಿಗೆ ಮಂತ್ರಿಗಳನ್ನು ವಜಾಮಾಡಿ ತನ್ನನ್ನೇ ಸರ್ವಾಧಿಕಾರಿಯನ್ನಾಗಿ ನೇಮಿಸುವಂತೆ ದೊರೆಯನ್ನು ಕೇಳಿಕೊಂಡನು. ಸುಧಾರಣೆಗಳನ್ನು ಜಾರಿಗೆ ತರುವುದು ತನ್ನ ಉದ್ದೇಶವೆಂದು ತಿಳಿಸಿದನು. ದೊರೆ ಆಲ್ಫೋನ್ಸೋ ಪ್ರತಿಭಟಿಸಲು ಶಕ್ತನಾಗಿರಲಿಲ್ಲ. ಮುಂದಿನ ಏಳು ವರ್ಷಗಳ ಕಾಲ ರಿವೆರಾ ಸ್ಪೈನ್‌ನ ನಿಜವಾದ ದೊರೆಯಾಗಿದ್ದನು. ಆದರೆ ಸಮಾಜವಾದಿಗಳಲ್ಲಿ ಮತ್ತಿತರ ಕ್ರಾಂತಿಕಾರಿ ಗುಂಪುಗಳಲ್ಲಿ ಸರ್ವಾಧಿಕಾರತ್ವ ಜನಪ್ರಿಯವಾಗಿರಲಿಲ್ಲ. ರಿವೆರಾ ವಿರುದ್ಧ ಪಿತೂರಿಗಳು ನಡೆದವು.

### 119.2.3 *ದೊರೆ ಆಲ್ಫೋನ್ಸೋನ ಅಧಿಕಾರ ಪರಿತ್ಯಾಗ*

ಆರು ವರ್ಷಗಳ ಪ್ರಯಾಸದ ಆಳ್ವಿಕೆಯ ನಂತರ, 1930ರ ಜನವರಿಯಲ್ಲಿ ಜನರಲ್ ರಿವೆರಾ ರಾಜೀನಾಮೆ ನೀಡಿದನು. ಎಷ್ಟು ಬೇಗ ಅಧಿಕಾರ ಗದ್ದುಗೆಯನ್ನೇರಿದ್ದನೋ, ಅಷ್ಟೇ ಶೀಘ್ರಗತಿಯಲ್ಲಿ ಅಧಿಕಾರ ಕಳೆದುಕೊಂಡನು. ಅನಾರೋಗ್ಯ ದೊರೆಯೊಂದಿಗೆ ಭಿನ್ನಾಭಿಪ್ರಾಯ ಮತ್ತು ನಿರಂತರ ಅವ್ಯವಸ್ಥೆಗಳು ಅಧಿಕಾರ ತ್ಯಜಿಸುವಂತೆ ಮಾಡಿದ್ದವು. ರಾಜೀನಾಮೆಯ ಕೆಲವೇ ವಾರಗಳ ನಂತರ ಪ್ಯಾರಿಸ್‌ನಲ್ಲಿ ಮರಣಹೊಂದಿದನು. ಸರ್ವಾಧಿಕಾರಿಯ ರಾಜೀನಾಮೆ ಮತ್ತು ಮರಣದ ನಂತರ ದೇಶದಾದ್ಯಂತ ದಂಗೆಗಳು ಸಂಭವಿಸಿದವು. ದೊರೆಯನ್ನು ಸಿಂಹಾಸನ ಪರಿತ್ಯಾಗ ಮಾಡುವಂತೆ ಒತ್ತಾಯಿಸಲಾಯಿತು. 1931 ರ ಆರಂಭದಲ್ಲಿ ಮಹಾನಗರ ಪಾಲಿಕೆಗೆ ನಡೆದ

ಚುನಾವಣೆಗಳಲ್ಲಿ ಗಣತಂತ್ರವಾದಿಗಳು ಭಾರೀ ಬಹುಮತ ಪಡೆದರು. ಗಣತಂತ್ರವಾದಿಗಳ ಕೂಟ ದೊರೆ ಅಧಿಕಾರ ಬಿಡದಿದ್ದರೆ ಕ್ರಾಂತಿ ನಡೆಸುವುದಾಗಿ ಬೆದರಿಕೆ ಹಾಕಿತು. ಆದರೆ ದೊರೆ ಆಲ್ಫೋನ್ಸೋ ಅಧಿಕಾರ ತ್ಯಜಿಸದೆ ಫ್ರಾನ್ಸ್‌ಗೆ ತೆರಳಿದ. ಇದರಿಂದಾಗಿ ರಾಜಪ್ರಭುತ್ವ ಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಲು ಪ್ರಜೆಗಳು ಸ್ವತಂತ್ರರಾದರು. 1931 ರ ಏಪ್ರಿಲ್ 14 ರಂದು ಪ್ರಮುಖ ಗಣತಂತ್ರವಾದಿ ಜಾಮೋರ ಗಣರಾಜ್ಯದ ಸ್ಥಾಪನೆಯನ್ನು ಘೋಷಿಸಿದನು. ತಾನೇ ತಾತ್ಕಾಲಿಕ ಅಧ್ಯಕ್ಷನಾದನು. ಆದರೆ ಸಚಿವ ಸಂಪುಟ ಮಾತ್ರ ಗಣತಂತ್ರವಾದಿಗಳು ಮತ್ತು ಸಮಾಜವಾದಿಗಳನ್ನೊಳಗೊಂಡ ಸಮ್ಮಿಶ್ರ ಸಂಪುಟವಾಗಿತ್ತು.

## 119.3 1931ರ ರಾಷ್ಟ್ರೀಯ ಚುನಾವಣೆ

ಹೊಸ ಸರಕಾರ ರಾಷ್ಟ್ರೀಯ ಚುನಾವಣೆಗಾಗಿ ದಿನಾಂಕವನ್ನು ಗೊತ್ತುಪಡಿಸಿತು. ಚರ್ಚಿನ ಆಡಳಿತದಲ್ಲಿ ಸುಧಾರಣೆ, ವೈಯುಕ್ತಿಕ ಸ್ವಾತಂತ್ರ್ಯ ಮತ್ತು ಸ್ವಲ್ಪಮಟ್ಟಿನ ಸ್ಥಳೀಯ ಸ್ವಾಯತ್ತಾಧಿಕಾರದ ಭರವಸೆ ನೀಡಲಾಯಿತು. 1931ರ ಜೂನ್‌ನಲ್ಲಿ ಚುನಾವಣೆಗಳು ನಡೆದವು. ಮಂದಗಾಮಿ ಗಣತಂತ್ರವಾದಿಗಳು ವಿಜಯಿಗಳಾದರು. ಹೊಸ ಗಣತಾಂತ್ರಿಕ ಸಚಿವ ಸಂಪುಟ ಕ್ಯಾಥೋಲಿಕ್ ಚರ್ಚ್‌ಗೆ ವಿರುದ್ಧವಾದ ಕಾಯಿದೆಗಳನ್ನು ಜಾರಿಗೆ ತಂದಿತು. ಕೋರ್ಟೆಸ್ (ಸಂಸತ್) ರಾಜ್ಯಮತವನ್ನು ರದ್ದುಗೊಳಿಸುವ ಜೆಸುಹಿಟರನ್ನು ದೇಶದಿಂದ ಹೊರದೂಡುವ ಮತ್ತು ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ತೀರ್ಮಾನವನ್ನು ಕೈಗೊಂಡಿತು. ಧರ್ಮಾಧಿಕಾರಿಗಳು ಬೋಧಿಸುವುದನ್ನು ಮತ್ತು ವ್ಯಾಪಾರದಲ್ಲಿ ತೊಡಗಿರುವುದನ್ನು ನಿಷೇಧಿಸಲಾಯಿತು. ಅನಗತ್ಯ ಉಗ್ರ ಷರತ್ತುಗಳ ವಿರುದ್ಧ ಪ್ರತಿಭಟಿಸಿದ ಅಧ್ಯಕ್ಷ ಜಾಮೋರ ಕೂಡ ರಾಜೀನಾಮೆ ನೀಡಿದನು. ಮುಖ್ಯ ಆಡಳಿತಾಧಿಕಾರಿಯ ಹುದ್ದೆಯನ್ನು ಮ್ಯಾನ್ಯೂವೆಲ್ ಅಜಾನ ಎಂಬುವವನಿಗೆ ನೀಡಲಾಯಿತು. ಆಲ್ಫೋನ್ಸೋ ಮೇಲೆ ದೇಶದ್ರೋಹದ ಆರೋಪವನ್ನು ಹೊರಿಸಲಾಯಿತು. ಸ್ಪೈನ್‌ನಲ್ಲಿನ ಅವನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಜೀವಾವಧಿ ಶಿಕ್ಷೆ ವಿಧಿಸಿ ಅವನನ್ನು ಗಡೀ ಪಾರು ಮಾಡಲಾಯಿತು.

### *119.3.1 ಕಾರ್ಮಿಕರ ಪ್ರಜಾತಾಂತ್ರಿಕ ಗಣರಾಜ್ಯ*

1931ರ ಡಿಸೆಂಬರ್‌ನಲ್ಲಿ ಸಂಸತ್ ಹೊಸ ರಾಜ್ಯಾಂಗವನ್ನು ಘೋಷಿಸಿತು. ಸ್ಪೈನನ್ನು 'ಕಾರ್ಮಿಕರ ಪ್ರಜಾತಾಂತ್ರಿಕ ಗಣರಾಜ್ಯ'ವೆಂದು ಘೋಷಿಸಲಾಯಿತು. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳಲ್ಲಿ ಸಂಪ್ರದಾಯಬದ್ಧ ಆಚಾರ ವಿಚಾರಗಳಿಂದ ಬಹುದೂರ ಸರಿಯುವ ಪ್ರಯತ್ನ ಮಾಡಲಾಯಿತು. ರಾಜ್ಯ ಚರ್ಚ್, ಜಾತ್ಯಾತೀತ ಶಿಕ್ಷಣ ಮತ್ತು ನಾಗರೀಕ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಲಾಯಿತು. ಅಜಾನ ಪ್ರಧಾನಿಯಾದನು. 1931ರಲ್ಲಿ ಜೆಸುಯಿಟ್ ವ್ಯವಸ್ಥೆ ರದ್ದಾಯಿತು. ಅದರ ಸಂಯುಕ್ತ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಅದನ್ನೆ ಸಮಾಜ ಕಲ್ಯಾಣದ ಉದ್ದೇಶಕ್ಕಾಗಿ ವಿತರಿಸಲಾಯಿತು. ಚರ್ಚಿನ ಶಾಲೆಗಳನ್ನು ಮುಚ್ಚಿ ಜಾತ್ಯಾತೀತ ಶಿಕ್ಷಣವನ್ನು ಜಾರಿಗೆ ತರಲಾಯಿತು. ಆಲ್ಫೋನ್ಸೋನ ನಿರ್ಗಮನದ ನಂತರ ಪೋಪ್ ಪಾದ್ರಿಗಳಿಗೆ ಗಣರಾಜ್ಯದ ಸೂತ್ರಗಳನ್ನು ಅಂಗೀಕರಿಸುವಂತೆ ಆದೇಶ ನೀಡಿದನು. ಆದರೆ ಧರ್ಮ-ವಿರೋಧೀ ಕಾನೂನುಗಳನ್ನು ರಾಜ್ಯಾಂಗ ಬದ್ಧ ವಿಧಾನಗಳಿಂದ ವಿರೋಧಿಸುವಂತೆ ಕರೆ ನೀಡಿದನು. ಕೆಟಲೋನಿಯಾದ ಸ್ವಾಯತ್ತಾಧಿಕಾರವನ್ನು ಮ್ಯಾಡ್ರಿಡ್‌ನ ಸರಕಾರ (ಮ್ಯಾಡ್ರಿಡ್ ಸ್ಪೈನಿನ ರಾಜಧಾನಿ) ಮಾನ್ಯ ಮಾಡಬೇಕೆಂದು ಕೆಟಲೋನಿಯನ್ನರು ಒತ್ತಾಯಿಸಿದರು.

### *119.3.2 ವಿಭಜಿತ ಸದನ*

ಮಂದಗಾಮಿ ಗಣತಾಂತ್ರಿಕ ಸರಕಾರ ವಿವಿಧ ಕಡೆಗಳಿಂದ ಭಾರೀ ವಿರೋಧವನ್ನು ಎದುರಿಸಿತು. ಬಲಭಾಗದಲ್ಲಿ ಶ್ರೀಮಂತ ಪ್ರಭುತ್ವವಾದಿಗಳು ರಾಜಪ್ರಭುತ್ವದ ಪುನಶ್ಚೇತನದ ಪರವಾಗಿದ್ದರು. ಮಠಾಧೀಶರು ಧರ್ಮ- ವಿರೋಧೀ ಕಾನೂನುಗಳನ್ನು ವಿರೋಧಿಸಿದರು.

ಭೂಒಡೆಯರು ತಮ್ಮ ತೋಟಗಳನ್ನು ಉಳಿಸಿಕೊಳ್ಳಲು ಬಯಸಿದರು. ಎಡಭಾಗದಲ್ಲಿ ಕಮ್ಯೂನಿಸ್ಟರಿದ್ದು ಸೋವಿಯತ್ ರಷ್ಯನ್ನರ ಜೀವನದ ಮಾದರಿಯಲ್ಲಿ ಸ್ಪೈನಿನ ಜನರ ಜೀವನವನ್ನು ರೂಪಿಸುವುದರ ಪರವಾಗಿದ್ದರು. ಸಂಯುಕ್ತವಾದಿಗಳು (ಸಿಂಡಿಕ್ಯಾಲಿಸ್ಟ್) ಕಾರ್ಮಿಕ ಸಂಘಗಳನ್ನು ಆಧರಿಸಿದ ಸರಕಾರದ ಸ್ಥಾಪನೆಯ ಪರವಾಗಿದ್ದರು. ಅರಾಜಕರು (ಎನಾರ್ಕಿಸ್ಟ್) ಸಂಪೂರ್ಣವಾಗಿ ಸರಕಾರವನ್ನೇ ರದ್ದುಗೊಳಿಸುವುದರ ಪರವಾಗಿದ್ದರು.

## 119.4 ಮಂದಗಾಮಿ ಸಂಪುಟ

ಗಣತಾಂತ್ರಿಕ ರಾಜ್ಯಾಂಗದ ಪ್ರಕಾರ ಪ್ರಥಮ ರಾಷ್ಟ್ರೀಯ ಚುನಾವಣೆಯು 1933ರಲ್ಲಿ ನಡೆಯಿತು. ಪರಿಣಾಮವಾಗಿ ಮಂದಗಾಮಿ ಸಚಿವ ಸಂಪುಟವು ರಚಿಸಲ್ಪಟ್ಟಿತು. 1934ರಲ್ಲಿ ಗಣರಾಜ್ಯದ ಸರಕಾರವು ಹಿಂದೆಂದೂ ಎದುರಿಸದಿದ್ದ ಕೆಟ್ಟ ದಂಗೆಯನ್ನು ಎದುರಿಸಬೇಕಾಯಿತು. ಹೊಸ ಪ್ರಧಾನಿ ಲೆರೋಜ್‌ದ ಕ್ಯಾಥೋಲಿಕ್ ಫ್ಯಾಸಿಸ್ಟರಿಗೆ ಸಂಪುಟ ದರ್ಜೆಯ ಅನೇಕ ಹುದ್ದೆಗಳನ್ನು ನೀಡಿದುದೇ ದಂಗೆಗೆ ಕಾರಣವಾಗಿತ್ತು. ಕ್ಯಾಥೋಲಿಕ್ ಫ್ಯಾಸಿಸ್ಟರು ಮುಖ್ಯ ಮತೀಯ ಪತ್ರಿಕೆಯ ಸಂಪಾದಕ ಜೋಸ್ ಮರಿಯಾ ಗಿಲ್ ನೋಬಲ್ಸ್ ಎಂಬುವವನ ಅನುಯಾಯಿಗಳಾಗಿದ್ದರು. ಎಲ್ಲಾ ತೀವ್ರಗಾಮಿಗಳ ಗುಂಪುಗಳು ಸಾಮಾನ್ಯ ಮುಷ್ಕರದಲ್ಲಿ ಸಹಕರಿಸಿದರು. ಅದೇ ಹಿಂಸಾಚಾರಕ್ಕೆ ತಿರುಗಿ ಕೆಟಲೋನಿಯನ್ ತೀವ್ರಗಾಮಿಗಳು ಸ್ಪೈನಿನಿಂದಲೇ ಪ್ರತ್ಯೇಕಗೊಳ್ಳಲು ನಡೆಸಿದ ಪ್ರಯತ್ನದಲ್ಲಿ ಪರ್ಯವಸಾನಗೊಂಡಿತು. ಕೆಟಲೋನಿಯನ್ ತೀವ್ರಗಾಮಿಗಳು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ರಕ್ತಪಾತ ಮತ್ತು ಭಾರೀ ವೆಚ್ಚಕ್ಕೆ ಕಾರಣವಾದ ಪರಿಸ್ಥಿತಿಯನ್ನು ದಂಗೆಯನ್ನು ಹತ್ತಿಕ್ಕಲು ಪ್ರಯತ್ನಿಸಿದ ಮಾಡ್ರಿಡ್‌ನ ಸರಕಾರ ಎದುರಿಸಿತು. ಸಂಸತ್ತಿನ ಬೆಂಬಲವಿದ್ದ ಪ್ರಧಾನಿ ಲೆರೋಜ್ ಬಲಪಂಥೀಯರ ಕೈ ಮೇಲಾಗುವಂತೆ ಮಾಡಿದನು. ಸ್ವಯತ್ತಾಧಿಕಾರ ಪಡೆದಿದ್ದ ಕೆಟಲೋನಿಯಾದ ರಾಜ್ಯ ರದ್ದಾಯಿತು. ಬಾರ್ಸಿಲೋನ ಮತ್ತು ಗಲಭೆಯ ಇತರ ಕೇಂದ್ರಗಳಲ್ಲಿ ಶಾಂತಿಪಾಲನೆಯ ಜವಾಬ್ದಾರಿಯನ್ನು ಮಾಡ್ರಿಡ್‌ನ ಸರಕಾರ ವಹಿಸಿಕೊಂಡಿತು.

1936ರ ಆರಂಭದಲ್ಲಿ ನಡೆದ ಚುನಾವಣೆಯಲ್ಲಿ ಎಡಪಂಥೀಯ ಶಕ್ತಿಗಳು ಬಹುಮತ ಪಡೆದವು. ಆದರೆ ಪ್ರಧಾನಿ ಅಜಾನ ಗಣತಂತ್ರವಾದಿಗಳನ್ನೇ ಹೊಂದಿದ್ದ ಸಂಪುಟದ ನಾಯಕತ್ವವನ್ನು ವಹಿಸಿದನು. ಫ್ಯಾಸಿಸ್ಟರ ವಿರುದ್ಧ ಕ್ರಮಕೈಗೊಳ್ಳಲಾಯಿತು. ಸಂಪುಟಕ್ಕೆ ಅಸಂತುಷ್ಟ ಸೈನ್ಯದ ಭಯವಿತ್ತು. ರಾಜಕೀಯದತ್ತ ವಾಲಿದ್ದ ಸೈನ್ಯಾಧಿಕಾರಿಗಳಿಗೆ ವಿಶ್ರಾಂತಿ ವೇತನ ನೀಡಲಾಯಿತು. ಉನ್ನತ ಮಟ್ಟದ ತನಿಖೆಯ ನಂತರ ಶಂಕಿತ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಲಾಯಿತು ಅಥವಾ ಬೇರೆಡೆಗೆ ವರ್ಗಾಯಿಸಲಾಯಿತು. ಜನರಲ್ ಫ್ರಾನ್ಸಿಸ್ಕೋ ಫ್ರ್ಯಾಂಕೋನನ್ನು ಕ್ಯಾನರಿ ದ್ವೀಪಕ್ಕೆ ಗಡೀಪಾರು ಮಾಡಲಾಯಿತು.

### *119.4.1 ಕೆರಳಿದ ಗಲಭೆಗಳು*

ಈ ವೇಳೆಗಾಗಲೇ ಗಣರಾಜ್ಯವು ಒಂದು ನಿರ್ಣಾಯಕ ಘಟ್ಟವನ್ನು ತಲುಪುತ್ತಿದೆ ಎಂಬುದು ಸಾಬೀತಾಯಿತು. 1931 ರಲ್ಲಿ ರಾಜಪ್ರಭುತ್ವದ ಉತ್ತರಾಧಿಕಾರಿಯಾಗಿ ಗಣರಾಜ್ಯ ಅಸ್ತಿತ್ವಕ್ಕೆ ಬಂದಿತ್ತು. ಆಗ ಜನರು ಕೆಲವೇ ಮಂದಿ ಸೈನ್ಯಾಧಿಕಾರಿಗಳು, ತೋಟದ ಮಾಲೀಕರು, ಪಾದ್ರಿಗಳು ಮತ್ತು ಭಾರೀ ಕೈಗಾರಿಕೋದ್ಯಮಿಗಳ ಕೂಟದ ಆಡಳಿತವನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಲಿಲ್ಲ. ಗಣರಾಜ್ಯದ ಸುಧಾರಣೆಗಳು ಈ ಅಲ್ಪಸಂಖ್ಯಾತರ ಅಧಿಕಾರ ಮತ್ತು ಸಂಪತ್ತಿನ ಏಕಸ್ವಾಮ್ಯವನ್ನು ಮುರಿಯುವ ಉದ್ದೇಶವನ್ನು ಹೊಂದಿದ್ದವು. ಆದರೆ ಈ ಸುಧಾರಣೆಗಳು ನಿಧಾನಗತಿಯಲ್ಲಿ ಸಾಗಿದ್ದರಿಂದ ದುಡಿಮೆಗಾರರು ಮತ್ತು ರೈತರು ಅಸಮಾಧಾನಗೊಂಡರು. ಬಲಪಂಥೀಯರು ಮತ್ತು ಎಡಪಂಥೀಯರ ನಡುವಣ ಕಲಹವು ಸ್ಫೋಟಗೊಂಡಾಗ ಸರಕಾರ ಮಧ್ಯಮ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸಿತು. ಅಂತಿಮವಾಗಿ ಎರಡೂ ಬಣಗಳಲ್ಲಿದ್ದ ತೀವ್ರಗಾಮಿಗಳು ಬಲಪ್ರದರ್ಶನವೇ ತಮ್ಮ ಗುರಿಯನ್ನು ಈಡೇರಿಸಬಲ್ಲ ಸ್ಪಷ್ಟ ಸಾಧನವಾಗಬಲ್ಲದೆಂಬುದನ್ನು ಮನಗಂಡರು. ಅಂತರ್ಯುದ್ಧವನ್ನು ಆರಂಭಿಸಲು ಒಂದು ಕಿಡಿ ಬೇಕಾಗಿತ್ತು.

## 119.5 ಅಂತರ್ಯುದ್ಧ (1936-39)

### *119.5.1 ಜನರಲ್ ಫ್ರ್ಯಾಂಕೋ*

1936ರಲ್ಲಿ ಸ್ಪೈನ್ ತೀವ್ರ ಸ್ವರೂಪದ ಆಂತರಿಕ ಮತ್ತು ಬಾಹ್ಯ ತೊಂದರೆಗಳನ್ನು ಎದುರಿಸಿತು. ರಾಜಕೀಯ ಹತ್ಯೆಗಳು ಹೆಚ್ಚಾದವು. 1936ರಲ್ಲಿ ಎಡಪಂಥೀಯ ಪೋಲಿಸ್ ಅಧಿಕಾರಿಯೊಬ್ಬ ಮಾಡ್ರಿಡ್‌ನಲ್ಲಿ ಕೊಲೆಗೀಡಾದನು. ಪ್ರತೀಕಾರದ ಕ್ರಮವಾಗಿ ಕಟ್ಟಾ ರಾಜಪ್ರಭುತ್ವವಾದಿಯಾಗಿದ್ದ ಕ್ಯಾಲ್ವೋ ಸೋಟೆಲ್ಲೋ ಎಡಪಂಥೀಯರಿಂದ ಹತ್ಯೆಗೀಡಾದನು. 1936ರ ಜುಲೈ ಮಧ್ಯಭಾಗದಲ್ಲಿ ಸ್ಪೈನಿನ ಮೊರಾಕ್ಕೋದಲ್ಲಿ ಅನೇಕ ಸೈನ್ಯದ ತುಕಡಿಗಳು ದಂಗೆ ಎದ್ದವು. ಅಂತರ್ಯುದ್ಧ ಆರಂಭವಾಯಿತು. ಕ್ಯಾನರಿ ದ್ವೀಪದಿಂದ ಮೊರಾಕ್ಕೋಗೆ ಹೋದ ಜನರಲ್ ಫ್ರ್ಯಾಂಕೋ ದಂಗೆಕೋರರ ನಾಯಕತ್ವವನ್ನು ವಹಿಸಿದನು. ಅದೇ ವೇಳೆಯಲ್ಲಿ ಸ್ಪೈನಿನಲ್ಲಿನ ಸೇನಾ ಠಾಣೆಗಳಲ್ಲಿ ದಂಗೆ ಸಂಭವಿಸಿತು. ಪೋರ್ಚುಗಲ್ಲಿನಲ್ಲಿ ಅಜ್ಞಾತವಾಸದಲ್ಲಿದ್ದ ಗಣತಂತ್ರವಿರೋಧೀ ನಾಯಕ ಜನರಲ್ ಸಂಜುರ್‌ಜೋ ಸ್ಪೈನಿಗೆ ಮರಳಲು ಪ್ರಯತ್ನಿಸಿದನು. ಅವನನ್ನು ಹೊತ್ತು ತರುತ್ತಿದ್ದ ವಿಮಾನ ದುರಂತಕ್ಕೀಡಾಗಿ ಜನರಲ್ ಮೃತಪಟ್ಟನು. ಫ್ರ್ಯಾಂಕೋ ಹೊಸ ಚಳುವಳಿಯ ನಾಯಕನಾಗಿ ಹೊರಹೊಮ್ಮಿದನು. ಸಂಪ್ರದಾಯಸ್ಥರು, ಫ್ಯಾಸಿಸ್ಟರು, ರಾಜಪ್ರಭುತ್ವವಾದಿಗಳು ಮತ್ತು ಮತೀಯ ಅನುಕಂಪ ಹೊಂದಿದ್ದ ಎಲ್ಲಾ ಸೇನಾ ಹಾಗೂ ನಾಗರೀಕ ಪ್ರಜೆಗಳು ಫ್ರ್ಯಾಂಕೋನ ಬೆಂಬಲಿಗರಾದರು. ಅವನ ಬೆಂಬಲಿಗರನ್ನು 'ಬಂಡಕೋರ'ರೆಂದು ಕರೆಯಲಾಯಿತು. ಮಾಡ್ರಿಡ್‌ನಲ್ಲಿ ಗಣತಾಂತ್ರಿಕ ಸರಕಾರದ ಬೆಂಬಲಿಗರನ್ನು 'ವಿಧೇಯರು' ಎಂದು ಕರೆಯಲಾಯಿತು.

ಫ್ರ್ಯಾಂಕೋನ ಅನುಯಾಯಿಗಳಿಗೆ ಕೆಲಕಾಲ ಐರಿಶ್ ಸ್ವತಂತ್ರ ರಾಜ್ಯಗಳ ಜರ್ಮನಿ ಮತ್ತು ಇಟಲಿ ದೇಶಗಳ 'ಸ್ವಯಂಸೇವಕರ' ಬೆಂಬಲ ದೊರೆಯಿತು. ವ್ಯವಸ್ಥಿತ ಸೈನ್ಯಬಲಗಳ ಭಾಗಶಃ ಬೆಂಬಲ ಮಾತ್ರ ಹೊಸ ಸರಕಾರಕ್ಕೆ ಲಭಿಸಿತು. ಸಾವಿರಾರು ವಿದೇಶೀಯ ಬೆಂಬಲಿಗರು, ವಿಶೇಷವಾಗಿ ಸೋವಿಯತ್ ರಷ್ಯಾ, ಫ್ರಾನ್ಸ್ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ಮ್ಯಾಡ್ರಿಡ್ ಸರಕಾರಕ್ಕಾಗಿ ಹೋರಾಡಿದರು. ಫ್ಯಾಸಿಸ್ಟ್ ವಿರೋಧೀ ಇಟಲಿಯನ್ನರು, ಜರ್ಮನರು ಮತ್ತು ಪೋಲರು ತಮ್ಮದೇ ಆದ ತುಕಡಿಗಳನ್ನು ಏರ್ಪಡಿಸಿಕೊಂಡು ಮ್ಯಾಡ್ರಿಡ್ ಸರಕಾರಕ್ಕೆ ಸೇನಾ ನೆರವು ನೀಡಿದರು.

### *119.5.2 ಅಧಿಕಾರಗಳಿಸುವುದರತ್ತ ಫ್ರ್ಯಾಂಕೋ*

ಬಂಡುಕೋರರು ಮೂರು ಕ್ರಮಗಳ ಮೂಲಕ ಜಯಸಾಧಿಸಬಹುದೆಂಬುದನ್ನು ಮನಗಂಡರು. (1) ಸ್ಪ್ಯಾನಿಶ್ ಮೊರಾಕ್ಕೋವನ್ನು ಆಕ್ರಮಿಸುವುದು. (2) ಪ್ರಾಂತೀಯ ಕೇಂದ್ರಸ್ಥಾನಗಳನ್ನು ಆಕ್ರಮಿಸುವುದು. (3) ಮ್ಯಾಡ್ರಿಡ್ ಸರಕಾರವನ್ನು ಪದಚ್ಯುತಗೊಳಿಸುವುದು. ಮೊದಲನೆಯ ಕ್ರಮ ಯಶಸ್ಸನ್ನು ಕಂಡಿತು. ಆದರೆ ಉಳಿದ ಕ್ರಮಗಳು ಕಷ್ಟದಾಯಕವಾಗಿದ್ದವು. ಆದರೂ 1936 ರ ನವೆಂಬರ್ ಹೊತ್ತಿಗೆ ಬಂಡುಕೋರರು ಮ್ಯಾಡ್ರಿಡ್‌ನ ಹೊರವಲಯವನ್ನು ತಲುಪಿದರು. ಹೊಸ ಸರಕಾರ ಮ್ಯಾಡ್ರಿಡ್‌ನಿಂದ ರಾಜಧಾನಿಯನ್ನು ಬದಲಾಯಿಸಿತು. ಈ ಸಂದರ್ಭದಲ್ಲಿ ಜರ್ಮನಿ ಮತ್ತು ಇಟಲಿ ದೇಶಗಳು ಫ್ರ್ಯಾಂಕೋನ ಸರಕಾರಕ್ಕೆ ಮಾನ್ಯತೆ ನೀಡಿದವು.

ಫ್ರ್ಯಾಂಕೋನ ಸರಕಾರ ಎಡಪಂಥೀಯ ಶಕ್ತಿಗಳ ಬೆಂಬಲವನ್ನೇ ಆಧರಿಸಿತ್ತು. ಯುದ್ಧವು ಸ್ವಲ್ಪ ಧೀರ್ಘಕಾಲವೇ ನಡೆದಿತ್ತು. ಆದುದರಿಂದ ಸಮಾಜವಾದಿಗಳು ಮತ್ತು ಕಮ್ಯೂನಿಸ್ಟರನ್ನು ಫ್ರ್ಯಾಂಕೋನ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದು ಅಗತ್ಯವೆನಿಸಿತು. ಕ್ರಮೇಣ ಅವನ ಸರಕಾರ ಪೂರ್ಣ ಎಡಪಂಥೀಯ ಸರಕಾರವೆನಿಸಿತು.

1938ನೇ ವರ್ಷ ನಿರ್ದಿಷ್ಟವಾಗಿ ಬಂಡುಕೋರರ ಪರವಾಗಿತ್ತು. ರಕ್ಷಣಾಬಲದ ಪ್ರದರ್ಶನದಲ್ಲಿ ಬಂಡುಕೋರರು ವಿಧೇಯರನ್ನು ಮೀರಿಸಿದರು. ಫ್ರ್ಯಾಂಕೋನ ಪಡೆಗಳು ಮ್ಯಾಡ್ರಿಡ್ ಪಡೆಗಳಿಗಿಂತ ಸಮರ್ಥವಾಗಿದ್ದವು. 1938ರ ಅಂತ್ಯದ ವೇಳೆಗೆ ಫ್ರ್ಯಾಂಕೋ ಆಕ್ರಮಣಕಾರಿ ಯುದ್ಧಕ್ಕೆ

ಸಿದ್ಧನಾದನು. ಬಾರ್ಸಿಲೋನ ನಗರವನ್ನು ವಶಪಡಿಸಿಕೊಳ್ಳುವುದು ಬಂಡುಕೋರರ ಉದ್ದೇಶವಾಗಿದ್ದುದರಿಂದ ತೀವ್ರ ಸ್ವರೂಪದ ಹೋರಾಟ ಒಂದು ತಿಂಗಳ ಕಾಲ ನಡೆಯಿತು. ವಿಧೇಯರ ರಾಜಧಾನಿ ಪತನಗೊಂಡಿತು. ಬ್ರಿಟನ್ ಮತ್ತು ಫ್ರಾನ್ಸ್ ಫ್ರ್ಯಾಂಕೋನ ಸರಕಾರಕ್ಕೆ ಮಾನ್ಯತೆ ನೀಡಿದವು (1939). 1939ರ ಮಾರ್ಚ್‌ನಲ್ಲಿ ಫ್ರ್ಯಾಂಕೋನ ಯೋಧರು ಮ್ಯಾಡ್ರಿಡ್ ಪ್ರವೇಶಿಸಿದರು. ವಿಧೇಯರ ಇತರೆಲ್ಲಾ ಕೇಂದ್ರಗಳು ಪತನಗೊಂಡವು. ತೀವ್ರಹೋರಾಟದ ಮೂವತ್ತೆರಡು ತಿಂಗಳುಗಳ ನಂತರ ಫ್ರ್ಯಾಂಕೋ ವಿಜಯಿಯಾದನು. ವಿದೇಶೀಯೋಧರು ಕ್ರಮೇಣ ದೇಶದಿಂದ ಕಾಲ್ತೆಗೆದರು. ಫ್ರ್ಯಾಂಕೋನ ಯೋಧರು ಮಾಡ್ರಿಡ್‌ನಲ್ಲಿ ವಿಜಯೋತ್ಸವವನ್ನು ಆಚರಿಸಿದರು. ಫ್ರ್ಯಾಂಕೋ ಇಟಲಿಯ ಫ್ಯಾಸಿಸ್ಟರ ಮಾದರಿಯಲ್ಲಿ ರಾಜಕೀಯ ಹಾಗೂ ಆರ್ಥಿಕ ಪುನರ್‌ರಚನೆಯ ಯೋಜನೆಯನ್ನು ರೂಪಿಸಿದನು.

## 119.6 ಅಂತರ್ಯುದ್ಧದ ವೈಶಿಷ್ಟ್ಯ

ಸ್ಪೈನಿನ ಅಂತರ್ಯುದ್ಧವನ್ನು 'ಪುಟ್ಟಮಹಾಯುದ್ಧ' ವೆಂದೇ ಕರೆಯಲಾಯಿತು. ಮುಂದೆ ದ್ವಿತೀಯ ಮಹಾಯುದ್ಧದಲ್ಲಿ ಭಾಗವಹಿಸಿದ ದೇಶಗಳು ಸ್ಪೈನಿನ ಅಂತರ್ಯುದ್ಧದ ಮೂಲಕ ತಮ್ಮ ಬಲವನ್ನು ಪರೀಕ್ಷಿಸಿಕೊಂಡವು. ಜರ್ಮನಿ, ಇಟಲಿ ಮತ್ತು ಪೋರ್ಚುಗಲ್ ಫ್ರ್ಯಾಂಕೋನ ಅಧೀನದ ರಾಷ್ಟ್ರೀಯ ಪಡೆಗಳಿಗೆ ಬೆಂಬಲ ನೀಡಿದವು. ಸೋವಿಯತ್ ರಷ್ಯಾ ಸ್ಪೈನಿನಲ್ಲಿ ಹಿಟ್ಲರ್ ಮತ್ತು ಮುಸ್ಸೋಲಿನಿಯ ಪ್ರಭಾವವನ್ನು ಕುಗ್ಗಿಸಲು ಮಾಡ್ರಿಡ್ ಸರಕಾರದ ಅಧಿಕಾರಿಗಳಿಗೆ ನೆರವಾಗಲು ಸ್ವಯಂ ಸೇವಕರನ್ನು ಕಳುಹಿಸಿಕೊಟ್ಟಿತು. ಅಂತರ್ಯುದ್ಧದ ಬಗ್ಗೆ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್ ನಡುವೆ ಒಮ್ಮತವಿರಲಿಲ್ಲ. ಸರಕಾರದ ನೀತಿಗಳು ಮಧ್ಯಪ್ರವೇಶ ವಿರೋಧಿಯಾಗಿದ್ದರೂ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳಿಂದ ಸಹಾಯವು ಖಾಸಗಿ ಮತ್ತು ಧನಸಹಾಯ, ಸೈನ್ಯ ಮತ್ತು ಜನಬೆಂಬಲದ ಮೂಲಕ ಬಂದಿತು. ತಾಟಸ್ಥ್ಯದ ಕಾನೂನು ಅಮೆರಿಕಾದಲ್ಲಿ ಜಾರಿಯಲ್ಲಿದ್ದುದರಿಂದಾಗಿ ಅಂತರ್ಯುದ್ಧದ ಸಮಯದಲ್ಲಿ ವಿಧೇಯರಿಗೆ ಯಾವುದೇ ರೀತಿಯ ಸೇನಾ ನೆರವನ್ನು ನೀಡದಂತೆ ಮಾಡಿತ್ತು.

### *119.6.1 ಮಹಾಯುದ್ಧಕ್ಕೆ ಪೀಠಿಕೆ*

ಅಂತರರಾಷ್ಟ್ರೀಯ ರಾಜಕೀಯದಲ್ಲಿ 'ನಾವು ಅಥವಾ ಅವರು' ಎಂಬ ಧೋರಣೆ ಸ್ಪೈನಿನ ಅಂತರ್ಯುದ್ಧದ ಸಮಯದಲ್ಲಿ ಸಾಕಷ್ಟು ವ್ಯಕ್ತವಾಗಿತ್ತು. ಹಾಗಾಗಿ ಅದು ಇನ್ನೊಂದು ಸಾಮಾನ್ಯ ಯುದ್ಧಕ್ಕೆ ಕಾರಣವಾಯಿತು. ಡೇವಿಡ್ ಥಾಮ್ಸನ್‌ರ ಪ್ರಕಾರ 1936 ರ ಜುಲೈನಲ್ಲಿ ಆರಂಭವಾದ ಸ್ಪೈನಿನ ಅಂತರ್ಯುದ್ಧ 1939ರ ಮಾರ್ಚ್‌ವರೆಗೂ ಮುಂದುವರಿಯಿತು. ಇತರ ಪ್ರಬಲ ರಾಷ್ಟ್ರಗಳನ್ನು ಬಲವಾಗಿ ತೊಡರಿಕೊಂಡ ಅದು ಮಹಾಯುದ್ಧಕ್ಕೆ ಒಂದು ವೈಶಿಷ್ಟ್ಯಪೂರ್ಣ ಪೀಠಿಕೆಯನ್ನು ಒದಗಿಸಿತು. ಸ್ಪೈನಿನಲ್ಲಿ ತದ್ರೂಪಿ ಐರೋಪ್ಯ ಯುದ್ಧವೊಂದು ನಡೆದಂತೆ ಭಾಸವಾಯಿತು. ಅದು ಯುರೋಪಿನಲ್ಲಿ ವ್ಯಾಪಕ ಯುದ್ಧಕ್ಕೆ ಎಡಮಾಡಿಕೊಡುವಂತಿತ್ತು. ಬ್ರಿಟಿಷ್ ರಾಜನೀತಿ ನಿಪುಣರು ಅದನ್ನು ಸ್ಪೈನಿಗೇ ಸೀಮಿತಗೊಳಿಸಲು ಪ್ರಯತ್ನಿಸಿದರು. ಅಂತರರಾಷ್ಟ್ರೀಯ ಸಮ್ಮೇಳನವೊಂದನ್ನು ಕರೆದು ಎಲ್ಲಾ ಐರೋಪ್ಯ ದೇಶಗಳು ತಟಸ್ಥ ನೀತಿಯನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಆದರೆ ಸರ್ವಾಧಿಕಾರೀ ರಾಜ್ಯಗಳು ಈ ಒಪ್ಪಂದವನ್ನು ಗೌರವಿಸದೆ ಫ್ರ್ಯಾಂಕೋನಿಗೆ ಜನ ಮತ್ತು ಯುದ್ಧ ಸಾಮಗ್ರಿಗಳನ್ನು ಪೂರೈಸಿದವು. ತಟಸ್ಥ ನೀತಿಯನ್ನು ಪಾಲಿಸದ ಆರೋಪ ಹೊರಿಸಿದಾಗ ಅದನ್ನು ಸ್ವಯಂ ಸೇವಕರು ಮಾಡಿದ್ದೆಂದು ಹೇಳಿ ತಪ್ಪಿಸಿಕೊಂಡವು. ತಟಸ್ಥ ನೀತಿಯು ಗಣತಂತ್ರವಾದಿಗಳ ಪ್ರಗತಿಗೆ ವಿರುದ್ಧವಾಗಿ ಕೆಲಸ ಮಾಡಿತು. ಬದಲಾಗಿ ವಿರೋಧಿಗಳು ಜರ್ಮನಿ ಮತ್ತು ಇಟಲಿಯಿಂದ ನೆರವು ಪಡೆದರೆ, ಅವರು ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸಿನಿಂದ ನೆರವು ಪಡೆಯದಂತೆ ನಿರ್ಬಂಧ ಹೇರಿದರು.

## 119.7 ಸರ್ವಾಧಿಕಾರಿಯಾಗಿ ಫ್ರ್ಯಾಂಕೋ

ಸ್ಪೈನಿನ ಅಂತರ್ಯುದ್ಧ ಭಾರೀ ಜಿದ್ದಿನಿಂದ ನಡೆಯಿತು. ನಾಗರೀಕ ದೇಶಗಳು ಒಪ್ಪಿಕೊಂಡಿದ್ದ ಯುದ್ಧದ ನಿಯಮಗಳನ್ನು ಉಲ್ಲಂಘಿಸಿ ಯುದ್ಧವನ್ನು ಮಾಡಲಾಯಿತು. ಉಭಯ ಪಕ್ಷಗಳಿಗೂ ಇದು ಅನ್ವಯಿಸುತ್ತದೆ. ಕೆಲವರನ್ನು ಯುದ್ಧ ಕೈದಿಗಳನ್ನಾಗಿ ಬಂಧಿಸಲಾಯಿತು. ಇನ್ನೂ ಕೆಲವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಗಣತಂತ್ರವಾದಿಗಳು ಮತ್ತು ರಾಷ್ಟ್ರೀಯವಾದಿಗಳಿಬ್ಬರೂ ಪರಸ್ಪರ ತಮ್ಮ ವಿರೋಧಿಗಳ ಬಗ್ಗೆ ಅನುಕಂಪವಿಟ್ಟುಕೊಂಡಿದ್ದ ಜಿಲ್ಲೆಗಳ ಜನರನ್ನು ಕೊಲೆಗೈದರು.

1939ರ ಜನವರಿಯಲ್ಲಿ ಫ್ರ್ಯಾಂಕೋನ ಸೈನ್ಯ ಬಾರ್ಸಿಲೋನವನ್ನು ಆಕ್ರಮಿಸಿಕೊಂಡಿತು. ಅದೇ ಮಾರ್ಚ್‌ನಲ್ಲಿ ಎರಡು ವರ್ಷಗಳ ಮುತ್ತಿಗೆಯ ನಂತರ ಮ್ಯಾಡ್ರಿಡ್ ಪತನಗೊಂಡಿತು. ಇದರೊಂದಿಗೆ ಯುದ್ಧ ಅಂತ್ಯಗೊಂಡಿತು. ಹೀಗೆ ಸರ್ವಾಧಿಕಾರಿಯಾದ ಫ್ರ್ಯಾಂಕೋ ಇತ್ತೀಚಿನವರೆಗೂ ಅಧಿಕಾರದಲ್ಲಿದ್ದನು.

## 119.8 ಮಾದರಿ ಪ್ರಶ್ನೆಗಳು

1. ಸ್ಪೈನಿನಲ್ಲಿ ದೊರೆ ಆಲ್ಫೋನ್ಸೊನ ಪದಚ್ಯುತಿಗೆ ಕಾರಣವಾದ ಸನ್ನಿವೇಶವನ್ನು ವಿವರಿಸಿ.
2. "ಸ್ಪೈನಿನಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಪ್ರಯತ್ನಗಳು ವಿಫಲವಾದವು" ಚರ್ಚಿಸಿ.
3. ಜನರಲ್ ಫ್ರ್ಯಾಂಕೋ ಸ್ಪೈನಿನಲ್ಲಿ ಸರ್ವಾಧಿಕಾರಿಯಾಗಿ ಏಳಿಗೆ ಹೊಂದಿದ ಬಗೆಯನ್ನು ಗುರುತಿಸಿ

## 119.9 ಅಧ್ಯಯನಕ್ಕಾಗಿ ಗ್ರಂಥಗಳು


1) E.A. Peers.......... : The Spanish Tragedy (1936)

2) F.E. Manuel : The Politics of Modern Spain (1938)

3) Gerald Brenon : The Spanish Labyrinth (1943)

4) Gabriel Jackson : The Spanish Republic and the Civil War ; 1931-1939 (1965)

5) G. Payne : Politics and the Military in Modern Spain (1967)



ಮೂಲ : ಡಾ. ಸುಂದರರಾಜನ್

ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ

# ಘಟಕ - 120

# ಎರಡು ಮಹಾಯುದ್ಧಗಳ ನಡುವಣ ಅವಧಿಯಲ್ಲಿ ಪುಟ್ಟರಾಜ್ಯಗಳು

*ರಚನಾಕ್ರಮ*


**120.0** ಉದ್ದೇಶಗಳು

**120.1** ಪೀಠಿಕೆ

**120.2** ಬೆಲ್ಜಿಯಂ

**120.3** ಹಾಲೆಂಡ್ ಮತ್ತು ಸ್ವಿಡ್ಜರ್‌ಲ್ಯಾಂಡ್

**120.4** ಉತ್ತರ ಯುರೋಪ್

**120.4.1** ಫಿನ್‌ಲ್ಯಾಂಡ್

**120.4.2** ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್

**120.5** ಐಬೀರಿಯದ ಪರ್ಯಾಯದ್ವೀಪ - ಪೋರ್ಚುಗಲ್

**120.6** ಪ್ರಥಮ ಮಹಾಯುದ್ಧದ ನಂತರದಲ್ಲಿ ಸ್ಪೈನ್

**120.7** ಮಾದರಿ ಪ್ರಶ್ನೆಗಳು

**120.8** ಅಧ್ಯಯನಕ್ಕಾಗಿ ಗ್ರಂಥಗಳು

## 120.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ಈ ಕೆಳಗೆ ಪಟ್ಟಿಮಾಡಿದ ರಾಷ್ಟ್ರಗಳ ವಿದ್ಯಮಾನಗಳ ಬಗ್ಗೆ ತಿಳಿಯಬಹುದು.

1) ಬೆಲ್ಜಿಯಂ, ಹಾಲೆಂಡ್ ಮತ್ತು ಸ್ವಿಡ್ಜರ್‌ಲ್ಯಾಂಡ್ ದೇಶಗಳು

2) ಫಿನ್‌ಲ್ಯಾಂಡ್, ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್ ದೇಶಗಳು

3) ಐಬೀರಿಯನ್ ಪರ್ಯಾಯ ದ್ವೀಪ ಪೋರ್ಚುಗಲ್ ಹಾಗೂ

4) ಪ್ರಕ್ಷುಬ್ದ ಸ್ಪೈನ್ ದೇಶಗಳು

## 120.1 ಪೀಠಿಕೆ

ಯುದ್ಧಾವಧಿಯಲ್ಲಿ ಯುರೋಪ್ ಖಂಡವು ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ವಿವಿಧ ಚಿತ್ರದರ್ಶಕ ಬದಲಾವಣೆಗಳನ್ನು ಕಂಡಿತು. ಬೆಲ್ಜಿಯಮ್, ಸ್ವಿಟ್ಜರ್‌ಲ್ಯಾಂಡ್‌ನಂತಹ ದೇಶಗಳಲ್ಲಿ ಸಮಸ್ಯೆಗಳು ಹೆಚ್ಚು ವಸಾಹತುಶಾಹಿಯಾಗಿದ್ದವೇ ಹೊರತು ಆಂತರಿಕವಲ್ಲ. ಫಿನ್‌ಲ್ಯಾಂಡ್, ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್‌ನಂತಹ ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ನಿಟ್ಟಿನಲ್ಲಿ ನಡೆದ ಪ್ರಯತ್ನಗಳು ಹೆಚ್ಚು ಯಶಸ್ಸನ್ನು ಕಂಡವು. ಆದರೆ ನೈರುತ್ಯ ಯುರೋಪಿನ ಕತೆಯು ಅಷ್ಟು ಆಶಾದಾಯಕವಾಗಿರಲಿಲ್ಲ. ಐಬೀರಿಯಾದ ಪರ್ಯಾಯ ದ್ವೀಪದ ಪೋರ್ಚುಗಲ್ ಮತ್ತು ಸ್ಪೈನಿನಲ್ಲಿ ಪರಿಸ್ಥಿತಿ ಉತ್ತಮವಾಗಿರಲಿಲ್ಲ.

## 120.2 ಬೆಲ್ಜಿಯಂ

ಆರ್ಥಿಕ ಸಂಕಷ್ಟಗಳು ಮತ್ತು ಕೆಲವು ರಾಜಕೀಯ ವಿವಾದಗಳಿದ್ದರೂ ಬೆಲ್ಜಿಯಮ್ ಆಗಲೀ, ಹಾಲೆಂಡ್ ಆಗಲೀ ಈ ಅವಧಿಯಲ್ಲಿ ರಾಜಕೀಯ ಬಲಹೀನತೆಯ ಕುರುಹನ್ನು ತೋರಲಿಲ್ಲ. ಯುದ್ಧದಿಂದ ಜರ್ಮನಿಯ ಸೇನಾಕ್ರಮಣದಿಂದ ಹೊರಬಂದು ಫ್ರಾನ್ಸ್‌ನ ಮಾದರಿಯ ಪುನರ್‌ರಚನೆ ಮತ್ತು ಪುನರ್ ವ್ಯವಸ್ಥೆಯತ್ತ ಗಮನ ಹರಿಸಿತು. ಜರ್ಮನ್ ವ್ಯಾಪಾರ ಫ್ರೆಂಚ್ ರೇವು ಪಟ್ಟಣಗಳಿಗೆ ವರ್ಗವಾದುದರಿಂದ ರೇವು ಪಟ್ಟಣ ಆಂಟ್‌ವರ್ಪ್ ಪತನಗೊಂಡಿತ್ತು. ಆದರೆ ಉತ್ತಮ ಯೋಜನೆ ಮತ್ತು ಪರಿಶ್ರಮದಿಂದಾಗಿ ಪುನಶ್ಚೇತನವು ಸಮರ್ಪಕವಾಗಿತ್ತು. ಕಾರ್ಮಿಕ ಚಳುವಳಿಯಿಂದಾಗಿ ಸಾಮಾಜಿಕ ವಿಮಾ ಕಾಯಿದೆಗಳು ಜಾರಿಗೆ ಬಂದವು. ರಾಜಕೀಯವಾಗಿ ಬೆಲ್ಜಿಯಮ್‌ನ ಸರಕಾರವು ಫ್ಲೆಮಿಂಗರು ಮತ್ತು ವ್ಯಾಲನ್ಸು ನಡುವಣ ಹಳೆಯ ವೈಷಮ್ಯದ ಪ್ರಕರತೆಯನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕಾಗಿತ್ತು. ಫ್ಲೆಮಿಂಗರ ಪ್ರತ್ಯೇಕತೆಯ ಆಶಾಭಾವನೆಗೆ ಜರ್ಮನರು ಕುಮ್ಮಕ್ಕು ನೀಡಿದ್ದರು. 1921 ರಲ್ಲಿ ದೇಶವು ಎರಡು ಭಾಷಾವಾರು ಭಾಗಗಳಾಗಿ ವಿಂಗಡಿಸಲ್ಪಟ್ಟಿತು. ಅದೇ ರೀತಿ ಸೈನ್ಯವು ಇಬ್ಭಾಗವಾಯಿತು. ಫ್ಲೆಮಿಂಗ್‌ರಿಗೆ ಇತರ ರಿಯಾಯಿತಿಗಳು ದೊರೆತವು.

ಯುದ್ಧಾವಧಿಯಲ್ಲಿ ದೊರೆಯಾಗಿದ್ದ ಒಂದನೇ ಆಲ್ಬರ್ಟ್‌ನ ಜನಪ್ರಿಯತೆಯಿಂದಾಗಿ ಅಸ್ತಿತ್ವದಲ್ಲಿದ್ದ ಆಡಳಿತಕ್ಕೆ ವಿಧೇಯತೆ ಹೆಚ್ಚಾಗಿತ್ತು. ದೊರೆ ಆಲ್ಬರ್ಟ್ 1934 ರಲ್ಲಿ ಮರಣಹೊಂದುವವರೆಗೂ ಸಿಂಹಾಸನದಲ್ಲಿದ್ದನು. ಆದುದರಿಂದ ರಾಜಕೀಯ ತೀವ್ರಗಾಮಿತನಕ್ಕೆ ಹೆಚ್ಚಿನ ಪುರಸ್ಕಾರ ದೊರೆಯಲಿಲ್ಲ. ಅಂದರೆ ರಾಜಕೀಯ ತೀವ್ರಗಾಮಿತ್ವದ ಪ್ರಭಾವವೇ ಇರಲಿಲ್ಲವೆಂಬುದು ಅರ್ಥವಲ್ಲ. 1930ರ ದಶಕದಲ್ಲಿ ಡ್ರಿಗೆಲ್ಲೆ ಎಂಬುವವನು ಫ್ಯಾಸಿಸ್ಟ್ ಚಳುವಳಿಯನ್ನು ವ್ಯವಸ್ಥೆಗೊಳಿಸಿದ್ದನು. ಅದಕ್ಕೆ ಹಿಟ್ಲರನ ಮತ್ತು ಮುಸ್ಸೋಲಿನಿಯ ಬೆಂಬಲವೂ ಇತ್ತು. ಫ್ಲೆಮಿಶ್ ವಿಚಾರವಾದಿಗಳ ಉಗ್ರಗಾಮಿ ತಂಡದ ಪ್ರಭಾವದಿಂದಾಗಿ ಬೆಲ್ಜಿಯಮ್‌ನ ವಿದೇಶಾಂಗ ನೀತಿಯಲ್ಲಿಯೂ ಬದಲಾವಣೆ ಕಂಡು ಬಂದಿತು. ಇದರಿಂದಾಗಿ ಯುರೋಪಿನಲ್ಲಿ ಪ್ರಜಾಪ್ರಭುತ್ವದ ಪ್ರಗತಿಗೆ ಹಿನ್ನಡೆ ಉಂಟಾಯಿತು.

1839ರ ಒಪ್ಪಂದವು ಬೆಲ್ಜಿಯಮ್‌ನ ಮೇಲೆ ಸಾಕಷ್ಟು ನಿರ್ಬಂಧಗಳನ್ನು ಹೇರಿತ್ತು. 1919ರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಆ ನಿರ್ಬಂಧಗಳನ್ನು ಸಡಿಲಿಸಲಾಯಿತು. ಬೆಲ್ಜಿಯಮ್ ಸ್ವತಂತ್ರ ವಿದೇಶಾಂಗ ನೀತಿಯನ್ನನುಸರಿಸುವಂತಾಯಿತು. ಯುದ್ಧಾನಂತರದ ಸರಕಾರ ಫ್ರಾನ್ಸ್‌ನೊಂದಿಗೆ ಸ್ನೇಹದಿಂದಿರಲು ಬಯಸಿತು. 1920ರ ನಂತರ ಫ್ರಾನ್ಸ್‌ನೊಂದಿಗೆ ರಕ್ಷಣಾ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಬಯಸಿತು. 1936ರಲ್ಲಿ ರೈನ್‌ಲ್ಯಾಂಡನ್ನು ಜರ್ಮನಿಯ ಸೈನ್ಯ ಆಕ್ರಮಿಸಿದ ಮೇಲೆ ದೊರೆ ಮೂರನೇ ಲಿಯೋಪಾಲ್ಡ್ ಬೆಲ್ಜಿಯಮ್ ಒಂದು ಪರಿಪೂರ್ಣ ರಾಷ್ಟ್ರೀಯ ನೀತಿಯನ್ನು ಅನುಸರಿಸಬೇಕೆಂದು ತನ್ನ ಸಚಿವ ಸಂಪುಟಕ್ಕೆ ತಿಳಿಸಿದನು. ಮರುವರ್ಷ ಬಹುಶಃ ಬೆಲ್ಜಿಯಮ್‌ನ ಒತ್ತಾಯದ ಮೇರೆಗೆ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ದೇಶವನ್ನು ಲೊಕಾರ್ನೋ ಒಪ್ಪಂದದ ನಿರ್ಬಂಧನಗಳಿಂದ ಮುಕ್ತಗೊಳಿಸಿದವು. ಈ ತಟಸ್ಥ ನೀತಿಯಿಂದಾಗಿ ಫ್ಲೆಮಿಂಗರ ಫ್ರೆಂಚ್-ವಿರೋಧೀ ಚಳುವಳಿಗಳು ಸ್ಥಗಿತಗೊಂಡವು.

## 120.3 ಹಾಲೆಂಡ್ ಮತ್ತು ಸ್ವಿಟ್ಜರ್‌ಲ್ಯಾಂಡ್

ಹಾಲೆಂಡ್ ಮತ್ತು ಸ್ವಿಟ್ಜರ್‌ಲ್ಯಾಂಡ್ ದೇಶಗಳಲ್ಲಿ ಆಂತರಿಕ ರಾಜಕೀಯವು ಶಾಂತವಾಗಿತ್ತು. ಸ್ವಿಟ್ಜರ್‌ಲ್ಯಾಂಡ್‌ನಲ್ಲಂತೂ ಕ್ಯಾಂಟನ್‌ಗಳಿಗೆ ಬದಲಾಗಿ ರಾಷ್ಟ್ರೀಯ ಸರಕಾರದ ಅಧಿಕಾರ ಹೆಚ್ಚಾದುದೇ ಮುಖ್ಯ ಬೆಳವಣಿಗೆಯಾಗಿತ್ತು. ರಾಜ್ಯದಲ್ಲಿ ಸಮಾಜವಾದ ಅದರ ಬೆಳವಣಿಗೆಯನ್ನು ಕಂಡಿತು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಸರಕಾರದ ಜವಾಬ್ದಾರಿಯು ಹೆಚ್ಚಾಯಿತು. ರಾಜಕೀಯದಲ್ಲಿ ನೇರ ಪ್ರಜಾಪ್ರಭುತ್ವದ ಬಳಕೆಯ ಸಾಧನಗಳು ಮುಂದುವರಿದುದು ಹಾಗೂ ವಿಸ್ತಾರಗೊಂಡುದು ಇನ್ನೊಂದು ಪ್ರಮುಖ ಬೆಳವಣಿಗೆಯಾಗಿತ್ತು. ಹಾಲೆಂಡಿನಲ್ಲಿ ರಾಜಕೀಯ ಹೆಚ್ಚು ಸಂಪ್ರದಾಯಬದ್ಧವಾಗಿತ್ತು. ಡಚ್ಚ್ ಸರಕಾರಕ್ಕೆ ಆಂತರಿಕ ಸಮಸ್ಯೆಗಳಿಗಿಂತ ವಸಾಹತುಶಾಹಿ ಸಮಸ್ಯೆಗಳೇ ಹೆಚ್ಚು ಗಂಭೀರವೆನಿಸಿದ್ದವು. 1920ರ ದಶಕದುದ್ದಕ್ಕೂ ಜಾವಾ ಮತ್ತು ಸುಮಾತ್ರಾದ ದಂಗೆಗಳನ್ನೊಳಗೊಂಡಂತೆ ದೂರ ಪ್ರಾಚ್ಯದ ಆಶ್ರಿತ ರಾಜ್ಯಗಳಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ಇತ್ತು. ಮುಂದಿನ ದಶಕದ ಆರಂಭದ ಹೊತ್ತಿಗೆ ಇಂಡೋನೇಷ್ಯಾದ ಎಲ್ಲಾ ಭಾಗಗಳಲ್ಲಿಯೂ ರಾಷ್ಟ್ರೀಯ ಚಳುವಳಿಯು ಬೆಳವಣಿಗೆಯನ್ನು ಕಂಡಿತು. ಯುರೋಪಿನಲ್ಲಿ ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರತ್ವದ ಹರಿಕಾರ ದೇಶಗಳ ನಡುವಣ ತಿಕ್ಕಾಟ ಬಹಿರಂಗಗೊಂಡಾಗ ಉಭಯ ದೇಶಗಳೂ ತಮ್ಮ ಸಾಂಪ್ರದಾಯಿಕ ತಟಸ್ಥ ನಿಲುವಿಗೆ ಅಂಟಿಕೊಂಡವು.

## 120.4 ಉತ್ತರ ಯುರೋಪ್

### *120.4.1 ಉತ್ತರ ಯುರೋಪ್ : ಫಿನ್‌ಲ್ಯಾಂಡ್*

ಯುರೋಪ್ ಖಂಡದ ಅನೇಕ ಕಡೆಗಳಲ್ಲಿ ಪ್ರಜಾಪ್ರಭುತ್ವ ಹಿನ್ನಡೆ ಕಂಡಾಗ ಸ್ಕ್ಯಾಂಡಿನೇವಿಯಾದ ದೇಶಗಳಲ್ಲಿ ಪ್ರಗತಿಯನ್ನು ಕಂಡಿತು. ಇವುಗಳಲ್ಲಿ ಫಿನ್‌ಲ್ಯಾಂಡ್ ಹೊಸ ಜೀವನವನ್ನು ಆರಂಭಿಸಿತು. ರಷ್ಯಾದ ಬೋಲ್ಶೆವಿಕ್ ಆಡಳಿತದ ಬೆಂಬಲವಿದ್ದ 'ಕೆಂಪು ಸೈನ್ಯ' ಜನರಲ್ ಮ್ಯಾನ್ನರ್ ಹೀಮ್‌ನ ನಾಯಕತ್ವದ 'ಶ್ವೇತಗಾರ್ಡ್' ದೇಶದ ವ್ಯವಹಾರಗಳ ನಿಯಂತ್ರಣ ಪಡೆಯಲು ಪ್ರಯತ್ನಿಸಿದವು. ಶ್ವೇತಗಾರ್ಡ್‌ಗೆ ಜರ್ಮನಿಯ ಜನರಲ್ ವಾನ್-ಡರ್-ಗೊಟ್ಜನ ಕಬ್ಬಿಣದ ತುಕಡಿಯ (ಐರನ್ ಡಿವಿಜನ್) ಬೆಂಬಲವಿತ್ತು. 1918 ರ ಮೇ ಹೊತ್ತಿಗೆ ಕೆಂಪು ಸೈನ್ಯದ ಕೊನೆಯ ಘಟಕ ಸೋಲನ್ನನುಭವಿಸಿತು. ತಾತ್ಕಾಲಿಕ ಒಪ್ಪಂದದ ನಂತರ ಜರ್ಮನ್ ಸೈನ್ಯವನ್ನು ಹಿಂದಕ್ಕೆ ಕಳುಹಿಸಲಾಯಿತು. ದೇಶ ಪುನರ್ ವ್ಯವಸ್ಥೆಯ ಬಗ್ಗೆ ಚಿಂತನೆ ಮಾಡುವಂತಾಯಿತು. 1919ರ ಮಧ್ಯಭಾಗದಲ್ಲಿ ಪ್ರಜಾತಾಂತ್ರಿಕ ರಾಜ್ಯಾಂಗವನ್ನು ಅಂಗೀಕರಿಸಲಾಯಿತು. ದೇಶದ ಪ್ರಥಮ ಅಧ್ಯಕ್ಷನನ್ನು ಚುನಾಯಿಸಲಾಯಿತು. ಫಿನ್‌ಲ್ಯಾಂಡಿನಲ್ಲಿ ಯಥೇಚ್ಛ ಅರಣ್ಯ ಸಂಪತ್ತಿತ್ತು ಮತ್ತು ಕಾಗದದ ಕಾರ್ಖಾನೆ ಇತ್ತು. 1922 ರಲ್ಲಿ ಕೃಷಿ ಕ್ಷೇತ್ರದಲ್ಲಿ ಸುಧಾರಣೆಗಳೂ ಆರಂಭವಾದವು. ಮೂರು ವ್ಯಕ್ತಿಗಳಲ್ಲಿ ಒಬ್ಬ ಭೂ ಒಡೆಯನಾಗಿದ್ದನು. ಫಿನ್‌ಲ್ಯಾಂಡಿನ ಜನರು ತಮ್ಮ ಸಂಸ್ಥೆಗಳು ಮತ್ತು ರಾಜಧಾನಿಯ ಬಗ್ಗೆ ಹೆಮ್ಮೆ ಪಡುವಂತಹ ಸಾಧನೆಗಳಿಗೆ ಪಾತ್ರರಾದರು. ಫಿನ್‌ಲ್ಯಾಂಡ್

ಯುರೋಪಿನಲ್ಲಿಯೇ ಅತ್ಯಂತ ಸುಂದರವಾದ ಕಟ್ಟಡಗಳಿಗೆ ಹೆಸರುವಾಸಿಯಾಗಿದೆ. ರಾಜಕೀಯ ಕ್ಷೇತ್ರದಲ್ಲಿ ತೀವ್ರವಾದವನ್ನು ಹತ್ತಿಕ್ಕಲು ಶಾಸನಗಳನ್ನು ಜಾರಿಗೆ ತರಲಾಗಿತ್ತು. ಪ್ರಜಾಪ್ರಭುತ್ವದ ಬಗ್ಗೆ ಫಿನ್‌ಲ್ಯಾಂಡ್ ಇಟ್ಟಿದ್ದ ನಂಬಿಕೆಯನ್ನು ಇದು ಸೂಚಿಸುತ್ತದೆ. 1940ರಲ್ಲಿ ದೇಶ ಆಕ್ರಮಣಕ್ಕೆ ಒಳಗಾದಾಗ ಫಿನ್‌ಲ್ಯಾಂಡನ ಜನತೆ ಧೈರ್ಯದಿಂದ ವ್ಯವಸ್ಥೆಯನ್ನು ರಕ್ಷಿಸಿದರು.

### *120.4.2 ಡೈನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್*

ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್ ದೇಶಗಳಲ್ಲಿ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಯುದ್ಧ-ಪೂರ್ವದ ಬೆಳವಣಿಗೆಗಳು ಯುದ್ಧಗಳ ನಡುವಣ ಅವಧಿಯಲ್ಲೂ ಮುಂದುವರಿದವು. 1915 ರ ರಾಜ್ಯಾಂಗವು ಡೆನ್ಮಾರ್ಕಿನಲ್ಲಿ ವಯಸ್ಕ ಮತದಾನ ಪದ್ಧತಿ ಮತ್ತು ಸ್ವತಂತ್ರ ಸುಧಾರಣೆಗಳನ್ನು ಜಾರಿಗೆ ತಂದಿತು. ಡೆನ್ಮಾರ್ಕಿನ ಜೊತೆಗೆ ನೆರೆಯ ನಾರ್ವೆ ಮತ್ತು ಸ್ವೀಡನ್‌ನಲ್ಲೂ ಸಮಾಜವಾದೀ ಮತ್ತು ಕಾರ್ಮಿಕ ಪಕ್ಷಗಳು ಪುನಶ್ಚೇತನದ ತತ್ವಕ್ಕೆ ಅಂಟಿಕೊಂಡು ಸಂಸತ್ ಪದ್ಧತಿಯ ವಿಕಾಸಕ್ಕೆ ನೆರವು ನೀಡಿದವು. ಸ್ಕ್ಯಾಂಡಿನೇವಿಯಾದಲ್ಲಿ ಕಮ್ಯೂನಿಸಮ್‌ಗೆ ಹೆಚ್ಚು ಪ್ರಾಮುಖ್ಯತೆ ದೊರೆಯಲಿಲ್ಲ. ಎಲ್ಲಾ ಮೂರು ದೇಶಗಳಲ್ಲೂ ಆರ್ಥಿಕ ಪ್ರಜಾಪ್ರಭುತ್ವದ ಪ್ರಗತಿ ಸಮರ್ಪಕವಾಗಿದ್ದು ಸಹಕಾರ ಚಳುವಳಿಗಳು ಶಕ್ತಿಯುತವಾಗಿದ್ದವು.

## 120.5 ಐಬೀರಿಯಾದ ಪರ್ಯಾಯ ದ್ವೀಪ - ಪೋರ್ಚುಗಲ್

ನೈರುತ್ಯ ಯುರೋಪಿನ ಸ್ಥಿತಿ ಅಷ್ಟು ಆಶಾದಾಯಕವಾಗಿರಲಿಲ್ಲ. ಪ್ರಥಮ ಮಹಾಯುದ್ಧದಲ್ಲಿ ಪೋಲೆಂಡ್ ಭಾಗವಹಿಸಿದ್ದರಿಂದಾಗಿ ಆರ್ಥಿಕ ಅವ್ಯವಸ್ಥೆಗಳು ಬಹಳವಿದ್ದವು. ಜೊತೆಗೆ ರಾಜಕಾರಣಿಗಳು ಅಸಮರ್ಥರೂ, ಭ್ರಷ್ಟರೂ ಆಗಿದ್ದರು. 1926ರಲ್ಲಿ ಸರಕಾರವು ಸೇನಾಕ್ಷಿಪ್ರಕ್ರಾಂತಿಯಿಂದಾಗಿ ಪದಚ್ಯುತಗೊಂಡಿತು. ಜನರಲ್ ಆಂಟೋನಿಯೋ ಕಾರ್ಮೊನಾ ಅಧ್ಯಕ್ಷ ಹಾಗೂ ಸರ್ವಾಧಿಕಾರಿಯಾದನು. 1933ರಲ್ಲಿ ರಾಜ್ಯಾಂಗವೊಂದನ್ನು ಘೋಷಿಸುವುದರ ಮೂಲಕ ತನ್ನ ಅಧಿಕಾರಕ್ಕೆ ಕಾನೂನಿನ ಆಧಾರ ಒದಗಿಸಿದನು. 1928ರಲ್ಲಿ ಈ ಬಲಾಶಾಲಿ ವ್ಯಕ್ತಿ ಪ್ರೋಫೆಸರ್ ಆಂಟೋನಿಯೋ-ಡಿ-ಓಲಿವಿರಾ ಸಲಚಾರ್ ಎಂಬುವವನನ್ನು ತನ್ನ ಮುಖ್ಯ ಸಹಾಯಕನಾಗಿ ನೇಮಿಸಿದನು. ಆಡಳಿತ ಮತ್ತು ಹಣಕಾಸಿನ ಕ್ಷೇತ್ರಗಳಲ್ಲಿ ಅವನು ಅಪಾರ ಕೊಡುಗೆಗಳನ್ನು ಸಲ್ಲಿಸಿದ್ದರಿಂದಾಗಿ 1932ರಲ್ಲಿ ದೇಶದ ಪ್ರಧಾನಿಯಾದನು. ಮರುವರ್ಷ ಹೊಸ ರಾಜ್ಯಾಂಗದ ಅನುಷ್ಠಾನದ ಮೇಲ್ವಿಚಾರಣಾ ಕಾರ್ಯವನ್ನು ನಿರ್ವಹಿಸಿದನು. ಮುಂದಿನ ವರ್ಷಗಳಲ್ಲಿ ಅವನೂ ಸರ್ವಾಧಿಕಾರಿಯ ಅಧಿಕಾರಗಳನ್ನು ಪಡೆದನು. ಈ ಅವಧಿಯಲ್ಲಿ ಭೌತಿಕ ಪ್ರಗತಿ ಕಂಡು ಬಂದಿತೇ ಹೊರತು ನಾಗರೀಕ ಸ್ವಾತಂತ್ರ್ಯಕ್ಕೆ ಗೌರವ ದೊರೆಯಲಿಲ್ಲ. ಮುಕ್ತ ಪಕ್ಷ ಪದ್ಧತಿಯ ಬೆಳವಣಿಗೆಗೆ ಪೋರ್ಚುಗಲ್‌ನಲ್ಲಿ ಅನುಮತಿ ದೊರೆಯಲಿಲ್ಲ. ಸರಕಾರಕ್ಕೆ ವಿರೋಧ ಕಂಡುಬಂದಾಗ ಅದನ್ನು ಉಗ್ರವಾಗಿ ಹತ್ತಿಕ್ಕಲಾಯಿತು.

## 120.6 ಪ್ರಥಮ ಮಹಾಯುದ್ಧ ನಂತರದ ಅವಧಿಯಲ್ಲಿ ಸ್ಪೈನ್

ಪ್ರಥಮ ಮಹಾಯುದ್ಧದ ಅವಧಿಯಲ್ಲಿ ಸ್ಪೈನ್ ತಟಸ್ಥವಾಗಿತ್ತು. ಆದರೆ ಆಂತರಿಕ ಇತಿಹಾಸ ಸಂಕ್ಷೋಬೆಯ ಕತೆಯನ್ನು ಸಾರುತ್ತಿತ್ತು. ಸಚಿವ ಸಂಪುಟ ದುರ್ಬಲವಾಗಿತ್ತು. ವಸಾಹತುಶಾಹೀ ತೊಂದರೆಗಳು ಮತ್ತು ಯುದ್ಧದಿಂದಾಗಿ ಪರಿಸ್ಥಿತಿ ಮತ್ತೂ ಬಿಗಡಾಯಿಸಿತು. ಇದರಿಂದಾಗಿ ಜನ ರಾಜಪ್ರಭುತ್ವದ ಬಗ್ಗೆ ನಂಬಿಕೆ ಕಳೆದುಕೊಂಡರು. ಅದರಲ್ಲೂ ದೊರೆ 13ನೇ ಆಲ್ಫೋನ್ಸೋ ಅನ್ವಾಲ್ ಯುದ್ಧಕ್ಕೆ (1921 ರ ಜುಲೈ) ಕಾರಣನಾದ ಎಂಬುದು ಜನತೆಗೆ ಗೊತ್ತಾದಾಗ ತೀರಾ ಹತಾಶರಾದರು. ಆ ಸಂದರ್ಭದಲ್ಲಿ ಸುಮಾರು 10,000 ಜನರು ಹತರಾದರೆ, 15,000 ಜನರು ಯುದ್ಧ ಕೈದಿಗಳಾದರು. ತನ್ನ ಸಿಂಹಾಸನವನ್ನು ಉಳಿಸಿಕೊಳ್ಳಲು ದೊರೆ 1923 ರ ಸೆಪ್ಟೆಂಬರ್‌ನಲ್ಲಿ ಕ್ಯಾಟಲೋನಿಯಾದ ಜನರಲ್ ಪ್ರೈಮೋ-ಡಿ-ರಿವೇರಾ ಅಧಿಕಾರ ಪಡೆಯುವ ಯೋಜನೆಯನ್ನು ರೂಪಿಸಿದನು. ಇವನ ಆಡಳಿತವು ಆಗ ಇಟಲಿಯಲ್ಲಿ ಜಾರಿಗೆ ಬಂದಿದ್ದ

ಆಡಳಿತನವನ್ನು ಹೋಲುತ್ತಿತ್ತು. ಆಲ್ಫೋನ್ಸೋ ಮತ್ತು ರಿವೆರಾ ಇಬ್ಬರೂ ಮುಸ್ಸೋಲಿನಿಯೊಂದಿಗೆ ಸ್ನೇಹದಿಂದಿದ್ದರು. ಸ್ಪೈನ್‌ನಲ್ಲಿ ವಿರೋಧೀ ಪಕ್ಷಗಳನ್ನು ವಿಸರ್ಜಿಸಲಾಯಿತು. ಪತ್ರಿಕೆ ಮತ್ತು ವಿಶ್ವವಿದ್ಯಾನಿಲಯಗಳನ್ನು ನಿಯಂತ್ರಣದಲ್ಲಿಡಲಾಯಿತು. ಹಳೆಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರಕಾರ ಅತೀವ ಉತ್ಸಾಹ ತೋರಿತು. ಸಾರ್ವಜನಿಕ ಕೆಲಸ ಕಾರ್ಯಗಳನ್ನು ಭಾರೀ ಪ್ರಮಾಣದಲ್ಲಿ ಕೈಗೊಳ್ಳಲಾಯಿತು. ಸಾರಿಗೆ ಸಂಪರ್ಕದ ಸಾಧನಗಳನ್ನು ಆಧುನೀಕರಣಗೊಳಿಸಲಾಯಿತು. ಇದರಿಂದಾಗಿ ಆರ್ಥಿಕ ಕ್ಷೇತ್ರದಲ್ಲಿ ಬೆಳವಣಿಗೆ ಸಾಧ್ಯವಾಯಿತು. 1926ರಲ್ಲಿ ಫ್ರೆಂಚ್ ಸೇನೆಯ ಸಹಯೋಗದೊಂದಿಗೆ ಸ್ಪೈನ್‌ನ ಸೈನ್ಯ ಮೊರಾಕ್ಕೋದಲ್ಲಿ ಯುದ್ಧವನ್ನು ಮುಕ್ತಾಯಗೊಳಿಸಿತು.

ಆರಂಭದ ಯಶಸ್ಸಿನ ನಂತರ ರಿವೆರಾ ಸರಕಾರ ಬಲಹೀನತೆಯನ್ನು ಪ್ರದರ್ಶಿಸಿತು. ಜನಬೆಂಬಲಗಳಿಸುವಲ್ಲಿ ವಿಫಲವಾಯಿತು. ಇಟಲಿಯ ಫ್ಯಾಸ್ಸೀ ಆಡಳಿತದ ರೀತಿಯಲ್ಲಿ ಬುದ್ಧಿಜೀವಿಗಳನ್ನಾಗಲೀ. ಯುವ ಜನತೆಯನ್ನಾಗಲೀ ಆಕರ್ಷಿಸುವಲ್ಲಿ ವಿಫಲವಾಯಿತು. ಮಿಗ್ವೆಲ್ ಯುನಾಮುನೋ ಮತ್ತು ಜೋಸ್ ಓರ್ಟೆಗಾ ಗ್ಯಾಸ್ಸೆಟ್‌ರಂತಹವರು ರಿವೆರಾನ ಸರ್ವಾಧಿಕಾರ, ದಬ್ಬಾಳಿಕೆ ಮತ್ತು ನಿಯಂತ್ರಣಗಳಿಂದಾಗಿ ಹತಾಶರಾಗಿ ಸರಕಾರದಿಂದ ದೂರ ಸರಿದರು. ಅವನನ್ನು ಅಧಿಕಾರಕ್ಕೆ ತಂದ ಸೈನ್ಯವೂ ಕೂಡ ದೂರ ಸರಿಯಲಾರಂಭಿಸಿತು. ವಿಶ್ವವ್ಯಾಪಿ ಆರ್ಥಿಕ ಮುಗ್ಗಟ್ಟು (1929-30) ಅವನ ಪ್ರತಿಷ್ಠೆಗೆ ಭಾರೀ ಹೊಡೆತ ನೀಡಿತು. ದೊರೆಗೆ ಮುಜುಗರವಾಗಬಹುದು ಎನ್ನುವ ಕಾರಣಕ್ಕಾಗಿ ಆತವನ್ನು 1930 ರ ಜನವರಿಯಲ್ಲಿ ರಾಜೀನಾಮೆ ಸಲ್ಲಿಸಬೇಕೆಂದು ಕೇಳಲಾಯಿತು.

ಆ ವೇಳೆಗೆ ರಾಜಪ್ರಭುತ್ವ ಅಪ್ರಸ್ತುತವೆನಿಸಿತು. ಮರುವರ್ಷವೇ ದೇಶದಾದ್ಯಂತ ಗಣತಾಂತ್ರಿಕ ಚಳುವಳಿಗೆ ಬೆಂಬಲ ದೊರೆತುದರಿಂದಾಗಿ ಆಲ್ಫೋನ್ಸೋ ದೇಶಬಿಟ್ಟು ಹೋಗಲು ನಿರ್ಧರಿಸಿದನು. 1931 ರ ಏಪ್ರಿಲ್ 13 ರಂದು ಅವನು ದೇಶಬಿಟ್ಟು ಓಡಿದನು. ಗಣರಾಜ್ಯದ ಸ್ಥಾಪನೆಯ ವಿಜಯೋತ್ಸವದೊಂದಿಗೆ ಸುಮಾರು 200 ಚರ್ಚುಗಳನ್ನು ಸುಟ್ಟು ಹಾಕಲಾಯಿತು.

1931ರ ಡಿಸೆಂಬರ್‌ನಲ್ಲಿ ಜಾರಿಗೆ ಬಂದ ರಾಜ್ಯಾಂಗವು ಸ್ಪೈನನ್ನು 'ದುಡಿಮೆಗಾರರ ಗಣರಾಜ್ಯ'ವೆಂದು ಘೋಷಿಸಿತು. ಆರ್ಥಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವದ ಸ್ಥಾಪನೆಯ ಗುರಿಯನ್ನು ಪ್ರಕಟಿಸಿತು. ಶಾಸಕಾಂಗದ ಅಧಿಕಾರವನ್ನು ಸಚಿವ ಸಂಪುಟಕ್ಕೆ ಜವಾಬ್ದಾರಿಯಾಗಿರುವ ಏಕ ಸದನ ಸಂಸತ್‌ಗೆ ವಹಿಸಲಾಯಿತು. ಜಾಮೋರ ಅಧ್ಯಕ್ಷನಾಗಿ ಚುನಾಯಿತನಾದ. ಹಿರಿಯ ಗಣತಂತ್ರವಾದೀ ನಾಯಕ ಅಜಾನ ಪ್ರಧಾನಿಯಾದ. ಕೂಡಲೇ ಹೊಸ ಸರಕಾರವು ಧನಿಕರ ಪ್ರಭುತ್ವವನ್ನು ಅಂತ್ಯಗೊಳಿಸುವ, ಚರ್ಚ್ ಮತ್ತು ಸೈನ್ಯದ ಏಕಸ್ವಾಮ್ಯವನ್ನು ಮುರಿಯುವ ಯೋಜನೆಯನ್ನು ರೂಪಿಸಿತು. ಜೆಸುಯಿಟ್ ವ್ಯವಸ್ಥೆ ರದ್ದಾಯಿತು. ಶಿಕ್ಷಣದಲ್ಲಿ ಚರ್ಚಿನ ಪಾತ್ರವನ್ನು ಕುಂಠಿತಗೊಳಿಸಲು ರಾಜ್ಯ ನಿಯಂತ್ರಣದ ಶಾಲೆಗಳು ಸ್ಥಾಪಿಸಲ್ಪಟ್ಟವು. ಭಾರೀ ತೋಟಗಳನ್ನು ಮುಟ್ಟುಗೋಲು ಹಾಕಿಕೊಂಡು, ವ್ಯವಸಾಯ ಯೋಗ್ಯವಾದ ಜಮೀನನ್ನು ಸಮಾನವಾಗಿ ಹಂಚುವ ವ್ಯವಸ್ಥೆ ಮಾಡಲಾಯಿತು. ರೈಲ್ವೆ ಮಾರ್ಗಗಳು ಮತ್ತು ಬ್ಯಾಂಕ್ ಆಫ್ ಸ್ಪೈನನ್ನು ರಾಷ್ಟ್ರೀಕರಣಗೊಳಿಸಲಾಯಿತು. ಎಂಟು ಗಂಟೆಗಳ ದುಡಿಮೆಯ ಅವಧಿ ಮತ್ತು ಸಾಮಾಜಿಕ ವಿಮಾ ಸೌಲಭ್ಯಗಳನ್ನು ಜಾರಿಗೆ ತರಲಾಯಿತು. ಸೈನ್ಯದಲ್ಲಿ ಅಧಿಕಾರಿಗಳ ಹುದ್ದೆಯನ್ನು ಅರ್ಧದಷ್ಟು ಕಡಿಮೆಮಾಡಲಾಯಿತು.

ಈ ಕ್ರಮಗಳಲ್ಲಿ ಕೆಲವು ಯಶಸ್ಸನ್ನು ಕಾಣುವ ಲಕ್ಷಣಗಳಿರಲಿಲ್ಲ. ಜೆಸುಯಿಟರು ಕೆಲವು ಶಾಲೆಗಳನ್ನು ನಡೆಸುವುದನ್ನು ಮುಂದುವರಿಸಬೇಕಾಯಿತು. ಸಾಕಷ್ಟು ಮಂದಿ ಅಧ್ಯಾಪಕರಿಲ್ಲದಿದ್ದುದೇ ಅದಕ್ಕೆ ಕಾರಣ. ಆರ್ಥಿಕ ಅವ್ಯವಸ್ಥೆಯನ್ನು ತಡೆಗಟ್ಟುವುದಕ್ಕಾಗಿ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಪುನರ್ ವ್ಯವಸ್ಥೆಯ ಯೋಜನೆಗಳನ್ನು ರೂಪಿಸಲಾಯಿತು. ಇದರಿಂದಾಗಿ ಹಳೆಯ ಆಡಳಿತ ವ್ಯವಸ್ಥೆ ಸಡಿಲಗೊಂಡರೆ, ಫಲಾನುಭವಿಗಳು ಬದಲಾವಣೆ ಶೀಘ್ರಗತಿಯಲ್ಲಿ ನಡೆಯಲಿಲ್ಲವೆಂದು ಭಾವಿಸಿದರು.

ಪರಿಣಾಮವಾಗಿ ಹೊಸ ಗಣರಾಜ್ಯದ ಆಡಳಿತವು ರೈತ ದಂಗೆಗಳು, ಸೈನ್ಯ ಪಿತೂರಿಗಳು, ಅರಾಜಕತೆಯ ಪರಿಸ್ಥಿತಿಗಳು, ಪ್ರಭುತ್ವದ ವಿರೋಧ, ಪ್ರತ್ಯೇಕತೆಯ ಚಳುವಳಿಗಳು ಮತ್ತು ಕಾರ್ಮಿಕ ಮುಷ್ಕರಗಳನ್ನು ಎದುರಿಸಬೇಕಾಯಿತು. ಫ್ಯಾಸಿಸ್ಟ್ ಚಳುವಳಿ ಆರಂಭದ ಹಂತದಲ್ಲಿತ್ತು. ರಿವೆರಾನ ಪುತ್ರರೂ ಸರಕಾರದ ವಿರೋಧಿಗಳಾಗಿದ್ದರು. 1934ರಲ್ಲಿ ಅಸ್ಟುರಿಯಾದ ಗಣಿ ಕಾರ್ಮಿಕರ ದಂಗೆಯೊಂದು ಸಂಭವಿಸಿತು. 3000 ಮಂದಿ ಹತರಾದರು.

1936ರ ಆರಂಭದಲ್ಲಿ ಗಣತಂತ್ರವಾದಿಗಳಲ್ಲಿ ಮಂದಗಾಮಿಗಳು, ಸಮಾಜವಾದಿಗಳು, ಕ್ಯಾಟಲಾನ್ ಮತ್ತು ಬಾಸ್ಕ್ ರಾಷ್ಟ್ರೀಯವಾದಿಗಳು, ಅರಾಜಕತೆಯ ಸಂಘಟಕರು ಮತ್ತು ಕಮ್ಯೂನಿಸ್ಟರೊಂದಿಗೆ ಸೇರಿ ಫ್ರೆಂಚ್ ಮಾದರಿಯ ಪ್ರಜಾರಂಗವನ್ನು ಸ್ಥಾಪಿಸಿದರು. ಫೆಬ್ರವರಿ ಚುನಾವಣೆಯಲ್ಲಿ ಪ್ರಚಂಡ ವಿಜಯ ಸಾಧಿಸಿದರು. ಅಜಾನನ ನೇತೃತ್ವದಲ್ಲಿ ಸರಕಾರ ರಚನೆಯಾಯಿತು. 1931ರ ಯೋಜನೆ ಮೂಂದುಡಲ್ಪಟ್ಟಿತು. ಸರಕಾರಕ್ಕೆ ಮಾಸ್ಕೋದ ಮಾರ್ಗದರ್ಶನವಿದೆ ಎಂದು ಬಲಪಂಥೀಯರು ಆರೋಪಿಸಿದರು. ಫಲಾಂಗೇಯರೆಂಬ ಫ್ಯಾಸಿಸ್ಟ್ ಚಳುವಳಿಯ ನಾಯಕರು ಉಗ್ರ ಚಟುವಟಿಕೆಗಳಲ್ಲಿ ತೊಡಗಿದರು. 1936ರ ಜುಲೈ 12 ರಂದು ಈ ಫಲಾಂಗೆಯರು ರಿಪಬ್ಲಿಕನ್ ಅಸಾಲ್ಟ್ ಗಾರ್ಡ್‌ನ ಯುವ ಅಧಿಕಾರಿಯೊಬ್ಬನನ್ನು ಕೊಲೆಗೈದರು. ಪ್ರತೀಕಾರದ ಕ್ರಮವಾಗಿ ರಿವೆರಾನ ಕಾಲದ ಹಣಕಾಸಿನ ಸಚಿವ ಕ್ಯಾಲ್ವೋ ಸೋಟೆಲ್ಲೋ ಹತ್ಯೆಗೀಡಾದ.

ರಕ್ತಪಾತದ ಈ ಕೊನೆಯ ಹಂತದಲ್ಲಿ ಸೈನ್ಯ ಅಂತರ್ಯುದ್ಧಕ್ಕೆ ಸಿದ್ಧತೆ ನಡೆಸಿತ್ತು. ಕ್ಯಾನರಿ ದ್ವೀಪದಿಂದ ಮೊರಾಕ್ಕೋಗೆ ಹೋದ ಜನರಲ್ ಫ್ರ್ಯಾಂಕೋ ದಂಗೆಕೋರರ ನಾಯಕತ್ವವನ್ನು ವಹಿಸಿದನು. ಹತ್ತು ದಿನಗಳ ನಂತರ ಜರ್ಮನಿಯ ವಿಮಾನಗಳನ್ನು ಬಳಸಿಕೊಂಡು ಮೊರಾಕ್ಕೋದ ಸೈನ್ಯ ಮಾತೃಭೂಮಿಗೆ ಕಾಲಿಟ್ಟಿತು. ಸ್ಪೈನಿನ ಸ್ವಾತಂತ್ರ್ಯ ಹರಣ ಮಾಡಿದ ಅಂತರ್ಯುದ್ಧ ಆರಂಭವಾಯಿತು. ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರತ್ವದ ನಡುವಣ ಹೋರಾಟ ಹೊಸ ಆಯಾಮವನ್ನು ಪಡೆಯಿತು.

## 120.7 ಮಾದರಿ ಪ್ರಶ್ನೆಗಳು

1. ಎರಡು ಮಹಾಯುದ್ಧಗಳ ನಡುವಣ ಅವಧಿಯಲ್ಲಿ ಪುಟ್ಟರಾಜ್ಯಗಳಲ್ಲಿ ನಡೆದ ಆಂತರಿಕ ಬೆಳವಣಿಗೆಯನ್ನು ಗುರುತಿಸಿ.
2. ಉತ್ತರ ಯುರೋಪಿನ ಆಂತರಿಕ ಪರಿಸ್ಥಿತಿಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.
3. "ಮಹಾಯುದ್ಧಗಳ ಅವಧಿಯಲ್ಲಿ ಐಬೀರಿಯಾದ ಪರ್ಯಾಯ ದ್ವೀಪದ ಕತೆ ಸಂತುಷ್ಟಕರವಾಗಿರಲಿಲ್ಲ" ಚರ್ಚಿಸಿ.

## 120.8 ಅಧ್ಯಯನಕ್ಕಾಗಿ ಗ್ರಂಥಗಳು


1) Hanns Rogger (Ed) : The European Right (1965)

2) E.A. Peers......... : The Spanish Tragedy (1936)

3) F.E. Manuel : The Politics of Modern Spain (1938)


ಮೂಲ : ಡಾ. ಸುಂದರರಾಜನ್

ಅನುವಾದ : ಪ್ರೊ. ಸಿ.ಬಿ. ರಾಮಚಂದ್ರ


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013

ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್


ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




**♣ REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


STUDENT
INSTRUCTIONAL SYSTEM